**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ


بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01

ವಾರ್ಷಿಕ ಶುಲ್ಕ ರೂ.500/-

ಸಂಚಿಕೆ: 04

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06 ಫೆಬ್ರವರಿ 2020, 06 ತಬ್‌ಲೀಗ್ 1399 ಹಿಜರಿ ಶಮ್‌ಸಿ,
11 ಜಮಾದಿಉಸ್ಸಾನಿ 1441 ಹಿಜರಿ ಖಮರಿ.


**ಅಲ್ಲಾಹನ ಉಪದೇಶ**

لَقَدْ مَنَّ اللّٰهُ عَلَى الْمُؤْمِنِيْنَ اِذْ بَعَثَ فِيْهِمْ
رَسُوْلًا مِّنْ اَنْفُسِهِمْ يَتْلُوْا عَلَيْهِمْ اٰيٰتِهٖ
وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ

*(ಆಲಿ ಇಮ್ರಾನ್ 165)*

ಅಂದರೆ: ಅಲ್ಲಾಹನು ಸತ್ಯವಿಶ್ವಾಸಿಗಳಲ್ಲಿ ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯೋಜಿಸುವ ಮೂಲಕ ದಿಟವಾಗಿಯೂ ಅವರಿಗೆ ಔದಾರ್ಯ ತೋರಿಸಿದ್ದಾನೆ. ಆತ ಅವರಿಗೆ ಅವನ ದೃಷ್ಟಾಂತಗಳನ್ನು ವಿವರಿಸಿಕೊಡುತ್ತಾನೆ; ಅವರನ್ನು ಸಂಸ್ಕರಿಸುತ್ತಾನೆ; ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾನೆ.

**ನೆನಪಿಡಿರಿ, ಈ ಸಮುದಾಯವನ್ನು ಮೃತ ಸಮುದಾಯ ಎಂದ ಮೇಲೆ ಮತ್ತು ಆ ಸಮುದಾಯವನ್ನು ದೈವಿಕ ಜ್ಞಾನದಿಂದ ಅನುಗ್ರಹಿಸಿದಾಗ ಸಕ್ರಿಯವಾಗಿ ಕೃತಜ್ಞಭಾವ ತೋರುವುದು ಅನಿವಾರ್ಯವಾಗಿರುತ್ತದೆ.**

---

**ನೆನಪಿಡಿರಿ, ಉತ್ತಮ ನಡತೆಯು ಸಾತ್ವಿಕನ ಲಕ್ಷಣವಾಗಿರುತ್ತದೆ. ಹದೀಸ್‌ನಲ್ಲಿ ಸಾಮಾನ್ಯ ರೂಪದಲ್ಲಿ ಮುಸಲ್ಮಾನರ ಇದೇ ಪರಿಭಾಷೆ ವ್ಯಕ್ತವಾಗಿದೆ. ಕೈಯಿಂದಲೂ ಮತ್ತು ನಾಲಿಗೆಯಿಂದಲೂ ಒಬ್ಬ ಮುಸಲ್ಮಾನ ಇನ್ನೊಬ್ಬ ಮುಸಲ್ಮಾನನಿಂದ ಸುರಕ್ಷಿತವಾಗಿರಬೇಕು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಇಸ್ಲಾಂ ಧರ್ಮದವರಿಗೆ ದೈವಿಕ ಜ್ಞಾನದಿಂದ ನಂಟು ಇದೆ.

ಯಾವ ರೀತಿ ನಮ್ಮ ವಿರೋಧಿಗಳಿಗೆ ಲೌಕಿಕ ಜ್ಞಾನಗಳಿಂದ ನಂಟು ಇದೆಯೋ ಅದೇ ರೀತಿ ಇಸ್ಲಾಂ ಧರ್ಮಿಯರಿಗೆ ದೈವಿಕ ಜ್ಞಾನದಿಂದ ಇದೆ. ಒಬ್ಬ ಅಜ್ಞಾನ ಮುಸಲ್ಮಾನನ ಸತ್ಯವಾದ ಸ್ವಪ್ನಗಳು ದಿವ್ಯ ಸ್ವಪ್ನಗಳ ದೊಡ್ಡ ದೊಡ್ಡ ತತ್ವಜ್ಞಾನಿಗಳ, ಬಿಷಪರ ಮತ್ತು ಪಂಡಿತರ ಸ್ವಪ್ನಗಳಿಗಿಂತಲೂ ಪ್ರಬಲವಾಗಿರುತ್ತದೆ. **ಝಾಲಿಕ ಫಝ್‌ಲುಲ್ಲಾಹಿ ಯುತೀಹಿ ಮಯ್ಯಶಾಉ** (ಅಲ್‌ಜುಮುಅ:5) ಆದ್ದರಿಂದ ಮುಸಲ್ಮಾನರಿಗೆ ಆ ಪರಮ ದಯವಂತನ ಕೃತಜ್ಞರಾಗಿರುವುದು ಅವಶ್ಯವಾಗಿದೆ. ಏಕೆಂದರೆ ಅಲ್ಲಾಹನು ಹೇಳಿದನು: **ಲಇನ್‌ಶಕರ್‌ತುಮ್ ಲಅಝೀದನ್ನಕುಮ್ ವ ಲಿನ್ ಕಫರ್‌ತುಮ್ ಇನ್ನ ಅಝಾಬಿ ಲಶದೀದ್** (ಇಬ್ರಾಹೀಂ:8) ಅಂದರೆ ನೀವು ಕೃತಜ್ಞತೆಯುಳ್ಳವರಾದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು. ನೀವು ಕೃತಜ್ಞನಾದರೆ ನನ್ನ ಶಿಕ್ಷೆ ಕಠೋರವಾಗಿರಬಹುದು. ನೆನಪಿಡಿರಿ. ಈ ಸಮುದಾಯವನ್ನು ಮೃತ ಸಮುದಾಯ ಎಂದ ಮೇಲೆ ಮತ್ತು ಅದನ್ನು ದೈವಿಕ ಜ್ಞಾನದಿಂದ ಅನುಗ್ರಹಿಸಿದಾಗ ಸಕ್ರಿಯವಾಗಿ ಕೃತಜ್ಞರಾಗಿರುವುದು ಅವಶ್ಯವಾಗಿರುತ್ತದೆ. ಒಟ್ಟಿನಲ್ಲಿ **ಇಹ್‌ದಿನಸ್ಸಿರಾತಲ್ ಮುಸ್ತಖೀಮ್** ಪ್ರಕಾರ ಎಲ್ಲ ಮುಸ್ಲಿಮರಿಗೆ ಅನಿವಾರ್ಯವಾಗಿದೆ **ಇಯ್ಯಾಕ ನಅ್‌ಬುದು** ಕಡೆ ಗಮನ ನೀಡುವುದು. ಏಕೆಂದರೆ **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಯೀನ್‌**ನ ಮೇಲೆ ಪ್ರಾಥಮಿಕತೆ ನೀಡಿದೆ. ಆದ್ದರಿಂದ ಮೊದಲು ಸಕ್ರಿಯವಾಗಿ ಕೃತಜ್ಞತೆಯನ್ನು ಅರ್ಪಿಸಬೇಕು. **ಇಹ್‌ದಿನ ಸ್ಸಿರಾತಲ್ ಮುಸ್ತಖೀಮ್‌**ನ ಇದೇ ಅರ್ಥವಾಗಿದೆ. ಅರ್ಥಾತ್ ಪ್ರಾರ್ಥನೆಯ ಮೊದಲ ಬಾಹ್ಯ ಸಾಧನೆಗಳನ್ನು ಮತ್ತು ಪ್ರಯತ್ನಗಳನ್ನು ಮಾಡುವುದು ಅವಶ್ಯವಾಗಿರುತ್ತದೆ. ಮತ್ತು ಪ್ರಾರ್ಥನೆಗಳು ಫಲಪ್ರದವಾಗುತ್ತವೆ. ಮೊದಲು ವಿಶ್ವಾಸಗಳು, ನಡತೆ, ಅಭ್ಯಾಸಗಳ ಸುದಾರಣೆಯಾಗಬೇಕಾಗಿದೆ. ಮತ್ತೆ ಇಹ್‌ದಿನಸ್ಸಿರಾತಲ್ ಮುಸ್ತಖೀಮ್.

### ಉತ್ತಮ ನಡತೆಯು ಸಾತ್ವಿಕನ ಲಕ್ಷಣವಾಗಿದೆ.

ಈಗ ನಾನು ಇನ್ನೊಂದು ಅವಶ್ಯವಾದ ಮತ್ತು ಅನಿವಾರ್ಯವಾದ ಮಾತನ್ನು ಹೇಳಬಯಸುತ್ತೇನೆ. ನಮ್ಮ ಜಮಾಅತ್ ಅಸಡ್ಡೆ ಮತ್ತು ಅವಗಣನೆ ಹೊಂದಿ ಆಲಿಸಬಾರದು. ನೆನಪಿಡಿರಿ. ಉತ್ತಮ ನಡತೆಯು ಸಾತ್ವಿಕ ಮನುಷ್ಯನ ಲಕ್ಷಣವಾಗಿದೆ. ಹದೀಸ್ ಶರೀಫ್‌ನಲ್ಲಿ ಸಾಮಾನ್ಯ ರೂಪದಲ್ಲಿ ಮುಸ್ಲಿಮನ ಇದೇ ಪರಿಭಾಷೆ ವ್ಯಕ್ತವಾಗಿದೆ. ಅಂದರೆ ಯಾರ ಕೈಯಿಂದಲೂ, ನಾಲಿಗೆಯಿಂದಲೂ ಒಬ್ಬ ಮುಸಲ್ಮಾನ ಇನ್ನೊಬ್ಬ ಮುಸಲ್ಮಾನನಿಂದ ಸುರಕ್ಷಿತವಾಗಿರುತ್ತಾನೋ ಅವನೇ ನಿಜವಾದ ಮುಸಲ್ಮಾನನಾಗಿದ್ದಾನೆ.

**ಇಹ್‌ದಿನಸ್ಸಿರಾತಲ್ ಮುಸ್ತಖೀಮ್** ಪ್ರಾರ್ಥನೆಯ ಮೂಲಕ ಅಲ್ಲಾಹನು ಬಯಸಿದ್ದೇನೆಂದರೆ ಮನುಷ್ಯನ ಮೂರು ಹಂತಗಳನ್ನು ಗಮನದಲ್ಲಿಡಬೇಕು. ಮೊದಲನೇಯ ಹಂತ: ನೈತಿಕ ಸ್ಥಿತಿ, ಎರಡನೇಯ ಹಂತ: ವಿಶ್ವಾಸಗಳ ಸ್ಥಿತಿ, ಹಾಗೂ ಮೂರನೇಯ ಹಂತ: ನಡತೆ ಆಗಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಮನುಷ್ಯನು ದೈವಿಕ ಶಕ್ತಿಗಳ ಮೂಲಕ ತನ್ನನ್ನು ಸುಧಾರಿಸಿಕೊಳ್ಳಬೇಕು. ಮತ್ತು ಅಲ್ಲಾಹನಿಂದ ಸಹಾಯ ಯಾಚಿಸಬೇಕು. ಇದರ ಅರ್ಥ ಸುಧಾರಣೆಯಾದ ನಂತರ ಪ್ರಾರ್ಥನೆಯ ಅವಶ್ಯಯಕತೆ ಇರುವುದಿಲ್ಲ ಎಂಬುದಲ್ಲ ಆಗಲೂ ಸಹ ಪ್ರಾರ್ಥಿಸುತ್ತಿರಬೇಕು. **ಇಯ್ಯಾಕ ನಅಬುದು ವ ಇಯ್ಯಾಕ ನಸ್ತಯೀನ್** ನಡುವೆ ಪ್ರತ್ಯೇಕತೆ ಇಲ್ಲ. ಆದರೆ **ಇಯ್ಯಾಕ ನಅಬುದು** ಪ್ರಾಥಮಿಕತೆ ಹೊಂದಿದೆ. ಏಕೆಂದರೆ ಅವನು ತನ್ನ ಪ್ರಥಮ ದಯವಂತನ ಗುಣದಿಂದಾಗಿ ನಾವು ಬೇಡದೆ, ಪ್ರಾರ್ಥಿಸದೆ ನಮ್ಮನ್ನು ಮಾನವನಾಗಿ ಬೂಮಿಯಲ್ಲಿ ಜನ್ಮತಾಳುವಂತೆ ಮಾಡಿದನು. ಮತ್ತು ವಿಭಿನ್ನ ಶಕ್ತಿಗಳನ್ನು ಅಪಾರ ಅನುಗ್ರಹ ನೀಡಿದನು. ಅದಕ್ಕಾಗಿ ನಾವು ಪ್ರಾರ್ಥಿಸಿರಲಿಲ್ಲ. ಬದಲಾಗಿ ಅವನ ಅನುಗ್ರಹ ಮಾತ್ರ ಕಾರಣವಾಗಿತ್ತು ಮತ್ತು ಅದುವೇ ಅಡಿಪಾಯವಾಗಿದೆ.

### ರಹ್‌ಮಾನಿಯತ್ ಮತ್ತು ರಹೀಮಿಯತ್

ಈ ಮಾತು ನೆನಪಿರಲಿ ಕರುಣೆ ಎರಡು ವಿಧಗಳಿರುತ್ತವೆ. ಒಂದು ರಹ್ಮಾನಿಯತ್ ಇನ್ನೊಂದು ರಹೀಮಿಯ್ಯತ್ ಹೆಸರಿನದ್ದಾಗಿದೆ. ರಹ್ಮಾನಿಯತ್ ಎಂಬ ಅನುಗ್ರಹವು ನಮ್ಮ ಅಸ್ತಿತ್ವಕ್ಕಿಂತಲು ಜನ್ಮಕ್ಕಿಂತಲೂ ಮೊದಲು ದೊರೆತ ಅನುಗ್ರಹವಾಗಿದೆ ಉದಾಹರಣೆಗೆ ಅಲ್ಲಾಹನು ಮೊಟ್ಟ ಮೊದಲು ತನ್ನ ಪುರಾತನ ಜ್ಞಾನದಿಂದ ಈ ರೀತಿಯ ಭೂಮಿ, ಆಕಾಶ, ಲೌಕಿಕ ಮತ್ತು ದೈವಿಕ ವಸ್ತುಗಳನ್ನು ಸೃಷ್ಟಿಸಿದನು. ಅವೆಲ್ಲ ನಮಗೆ ಉಪಯೋಗ ಯೋಗ್ಯವಾಗಿವೆ. ಇವೆಲ್ಲ ವಸ್ತುಗಳಿಂದ ಸಾಮಾನ್ಯವಾಗಿ ಮನುಷ್ಯನೇ ಹೆಚ್ಚು ಪ್ರಯೋಜನ ಪಡುತ್ತಾನೆ. ಕುರಿ ಮೇಕೆ ಮತ್ತು ಇನ್ನಿತರ ಜಾನುವಾರುಗಳು ಅದಕ್ಕಿಂತ ಸ್ವಯಂ ಮನುಷ್ಯನಿಗೆ ಪ್ರಯೋಜನಕಾರಿಯಾಗಿವೆ ಇದರಿಂದ ಅವರು ಲಾಭಪಡುವರೇ? ನೋಡಿರಿ ದೈಹಿಕವಾಗಿ ಮನುಷ್ಯನು ಯಾವ್ಯಾವ ರೀತಿಯ ಸೂಕ್ಷ ಮತ್ತು ಉನ್ನತ ದರ್ಜೆಯ ಆಹಾರ ಉಪಯೋಗಿಸುತ್ತಾನೆ. ಉನ್ನತ ದರ್ಜೆಯ ಮಾಂಸ ಮನುಷ್ಯರಿಗೋಸ್ಕರವಾಗಿದೆ. ಅದರ ಅನುಪಯುಕ್ತ ಭಾಗಗಳು ಮತ್ತು ಎಲುಬುಗಳು ನಾಯಿಗಳಿಗೋಸ್ಕರವಿದೆ. ದೈಹಿಕವಾಗಿ ರಜೆಗಳು ಮನುಷ್ಯನು ಪಡೆಯುವಂತೆಯೇ ಜಾನುವಾರುಗಲೂ ಪಡೆಯುತ್ತವೆ. ಆದರೆ ಮನುಷ್ಯನಗೆ ಉತ್ತಮ ದರ್ಜೆಯ ಅನುಭವ ದೊರೆಯುತ್ತದೆ. ಆಧ್ಯಾತ್ಮಿಕ ಉಲ್ಲಾಸದಲ್ಲಿಯೂ ಝಾನುವಾರುಗಳು ಭಾಗಿಯಾಗುವುದಿಲ್ಲ. ಹಾಗಾಗಿ ಇದು ಎರಡು ರೀತಿಯ ಕರಣೆಯಾಗಿದೆ.

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಜುಮುಅ ಖುತ್‌ಬ

**ನಾನು ಎಂದೂ ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೀಹಿವಸಲ್ಲಮ್ ಅವರಿಗೆ ಒಂದು ವಿಷೇಶ ಆಹಾರವನ್ನು ತಯಾರಿಸಲು ಆದೇಶಿಸಿರುವುದ್ದನ್ನು ಎಂದೂ ಕಾಣಲಿಲ್ಲ.**
**ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೀಹಿವಸಲ್ಲಮ್ ಅವರಿಗೆ ಒಂದು ಆಹಾರ ನೀಡಿದಾಗ ಅವರು ಅದರಲ್ಲಿ ದೋಷಾರೋಪನೆ ಮಾಡಿರುವುದನ್ನು ಎಂದೂ ಕಾಣಲಿಲ್ಲ.**

**ಸದಖ ಮತ್ತು ಬಡವರಿಗೆ ಸಹಾಯ ಮಾಡುವುದರಲ್ಲಿ ವಿಶಾಳ ಹೃದಯವುಳ್ಳ ಬದರಿ ಸಹಾಬಿ ಹಝ್ರತ್ ಸಅದ್ ಬಿನ್ ಉಬಾದ(ರ) ಅವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಗಝ್ವಾಎ ಅಬ್ವಾ, ಗಝ್ವಾಎ ಬದರ್, ಉಹುದ್, ಗಝ್ವಾಎ ಹಮ್‌ರಾಉಲ್ ಅಸದ್ ಘಟನೆಗಳ ಸಂಕ್ಷಿಪ್ತ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ **28-12-2019** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಸಅದ್ ಬಿನ್ ಉಬಾದರ(ರ) ಬಗ್ಗೆ ವಿವರಿಸುತ್ತಿದ್ದೆ. ಅವರಿಗೆ ಸಂಬಂಧಿಸಿ ಇನ್ನಷ್ಟು ಈ ದಿನ ವಿವರಿಸುವೆನು. ಹಝ್ರತ್ ಸಅದ್ ಬಿನ್ ಉಬಾದ(ರ) ಅವರು ಬೈಅತೆ ಅಖಬ ಸಾನಿಯದ ಸಂದರ್ಭದಲ್ಲಿ ನೇಮಿಸಲಾದ ಹನ್ನೆರಡು ನಖೀಬ್‌ಗಳಲ್ಲಿ ಅವರು ಒಬ್ಬರಾಗಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅವರ ಬಗ್ಗೆ ಸೀರತ್ ಖಾತಮನ್ನಬೀಯೀನ್(ಸ) ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರು ಹೀಗೆ ಬರೆಯುತ್ತಾರೆ: "ಅವರು ಖಝ್‌ರಜ್ ಗೋತ್ರದ ಬನೂ ಸಾಯಿದ ಕುಟುಂಬಕ್ಕೆ ಸೇರಿದ್ದರು. ಅವರು ಖಝ್‌ರಜ್ ಗೋತ್ರದ ಮುಖಂಡರೂ ಆಗಿದ್ದರು. ಅವರು ಗಣ್ಯ ಅನ್‌ಸಾರ್‌ಗಳಲ್ಲಿ ಒಬ್ಬರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಧನ ಹೊಂದಿದಾಗ ಕೆಲವು ಅನ್‌ಸಾರ್‌ಗಳು ಅವರ ಹೆಸರನ್ನು ಖಿಲಾಫತ್ ಪದವಿಗೆ ಸೂಚಿಸಿದ್ದರು. ಅವರು ಹಝ್ರತ್ ಉಮರ್(ರ) ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು." (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ-230)

ಹಝ್ರತ್ ಸಅದ್ ಬಿನ್ ಉಬಾದ(ರ), ಮುನ್‌ಝಿರ್ ಬಿನ್ ಅಮರ್(ರ) ಮತ್ತು ಅಬೂ ದಜಾನ(ರ) ಮುಸ್ಲಿಮರಾದಾಗ ಆ ಮೂವರು ಬನೂ ಸಾಯಿದ ಕುಟುಂಬದ ವಿಗ್ರಹಗಳನ್ನು ಮುರಿದು ಹಾಕಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಮದೀನಕ್ಕೆ ಹಿಜ್ರತ್ ಮಾಡಿದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬನೂ ಸಾಯಿದ ಕುಟುಂಬದವರಿಗೆ ಸೇರಿದವರ ಮನೆಗಳ ಸಮೀಪ ಹಾದು ಹೋಗುವಾಗ ಹಝ್ರತ್ ಸಅದ್ ಬಿನ್ ಉಬಾದ(ರ), ಮುನ್‌ಝಿರ್ ಬಿನ್ ಅಮರ್(ರ) ಮತ್ತು ಅಬೂ ದಜಾನ(ರ) ವಿನಂತಿಸಿದರು: ಅಲ್ಲಾಹನ ಸಂದೇಶವಾಹಕರೇ! ತಾವು ನಮ್ಮ ಜೊತೆ ವಾಸಿಸಿರಿ. ನಮ್ಮ ಬಳಿ ಗೌರವವಿದೆ, ಐಶ್ವರ್ಯವಿದೆ, ಶಕ್ತಿ ಇದೆ, ಬಲಶಾಲಿತ್ವವಿದೆ. ಹಝ್ರತ್ ಉಬಾದ(ರ) ಹೇಳಿದರು: ಅಲ್ಲಾಹನ ಸಂದೇಶವಾಹಕರೇ! ನನ್ನ ಕೋಮಿನವರಲ್ಲಿ ನನಗಿಂತ ಹೆಚ್ಚು ಖರ್ಜೂರದ ತೋಟಗಳಿರುವವನು ಬೇರೆ ಯಾರೂ ಇಲ್ಲ. ಅದರೊಂದಿಗೆ ಸಂಪತ್ತು ಮತ್ತು ಶಕ್ತಿ ನನಗಿಂತ ಹೆಚ್ಚು ಹೊಂದಿರುವವರೂ ಯಾರೂ ಇಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂ ಸಾಬಿತ್! ಈ ಒಂಟೆಯನ್ನು ಮುಂದೆ ಸಾಗಲು ಬಿಡಿರಿ. ಅದು ನಿಯೋಜಿಸಲ್ಪಟ್ಟ ಒಂಟೆಯಾಗಿದೆ. (ಸಬ್‌ಲುಲ್ ಹುದಾ, ಸಂಪುಟ-3, ಪುಟ-272, ದಾರುಲ್ ಕುತುಬ್ ಇಲ್‌ಮಿಯು ಬೈರೂತ್ 1993) ಅದು ತಾನಿಷ್ಟಪಡುವಲ್ಲಿಗೆ ಹೋಗುವುದು. ಹಝ್ರತ್ ಸಅದ್ ಬಿನ್ ಉಬಾದ(ರ) ಬನೂ ಸಾಯಿದ ಅವರ ನಾಯಿಬ್ ಆಗಿದ್ದರು.

ಹೀಗೆ ಹೇಳಲಾಗುತ್ತಿದೆ, ಔಸ್ ಮತ್ತು ಖಝ್‌ರಜ್ ಗೋತ್ರದವರಲ್ಲಿ ಒಂದೇ ಮನೆಯ ನಾಲ್ಕು ಜನರು ಒಬ್ಬರಿಗಿಂತ ಒಬ್ಬರು ಶ್ರೀಮಂತ ದಾನಿಗಳಾಗಿದ್ದರು ವಲೀಮರ ಹೊರತು. ಅನಂತರ ಅವರ ಪುತ್ರ ಉಬಾದ, ಅನಂತರ ಅವರ ಪುತ್ರ ಸಅದ್, ಅನಂತರ ಅವರ ಪುತ್ರ ಖೈಸ್ ಈ ನಾಲ್ವರ ಹೊರತು. ದುಲೈಮ್ ಮತ್ತು ಅವರ ಕುಟುಂಬದವರ ಉದಾರ ಮನಸ್ಸಿನ ಬಗ್ಗೆ ಅನೇಕ ಚಿಕ್ಕ ಚಿಕ್ಕ ವಿಷಯಗಳು ಪ್ರಸಿದ್ಧವಾಗಿದ್ದವು. (ಅಸದುಲ್ ಗಾಬ ಸಂಪುಟ-2, ಪುಟ-441, ಸಅದ್ ಬಿನ್ ಉಬಾದ, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಆಗಮಿಸಿದಾಗ ಹಝ್ರತ್ ಸಅದ್(ರ) ಪ್ರತಿದಿನ ಒಂದು ದೊಡ್ಡ ಬಟ್ಟಲು ಕಳುಹಿಸುತ್ತಿದ್ದರು. ಅದರಲ್ಲಿ ಮಾಂಸ ಮತ್ತು ಮಾಂಸದೊಂದಿಗೆ ಬೇಯಿಸಿದ ರೊಟ್ಟಿಯ ತುಂಡುಗಳು (ಅದರ ಹೆಸರು ಸರೀದ್) ತುಂಬಿದ್ದುವು. ಹೆಚ್ಚಿನ ಸಂದರ್ಭಗಳಲ್ಲಿ ಮಾಂಸವೇ ಬಟ್ಟಲಲ್ಲಿ ಇರುತ್ತಿತ್ತು. ಸಅದ್ ಕಳುಹಿಸಿದ ಬಟ್ಟಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರ ಮನೆಗಳಿಗೂ ತಲಪುತ್ತಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) ಅಂದರೆ ಈ ಆಹಾರವು ಪ್ರವಾದಿ(ಸ) ಅವರ ಧರ್ಮಪತ್ನಿಯರಿಗೂ ಸಹ ಹೋಗುತ್ತಿತ್ತು. ಕೆಲ ವರದಿಗಳಲ್ಲಿ ಪ್ರವಾದಿ(ಸ) ಅವರ ಮನೆಗಳಲ್ಲಿ ಊಟ ಸಹ ಇರುತ್ತಿರಲಿಲ್ಲ ಅಂತಹ ದಿನಗಳು ಸಹ ಇದ್ದವು. (ಸಹೀಹ್ ಬುಖಾರಿ, ಹದೀಸ್-2567)

ಹೀಗೆ ಅವರು ಪ್ರತಿ ದಿನ ಕಳುಹಿಸದೆ ಇರಬಹುದು ಅಥವಾ ಒಮ್ಮೊಮ್ಮೆ ಕಳುಹಿಸುತ್ತಿರಬಹುದು ಅಥವಾ ಪ್ರಾರಂಭದಲ್ಲಿ ಕಳುಹಿಸಿರ ಬಹುದು. ಪ್ರವಾದಿ(ಸ) ಅವರು ತಮ್ಮ ಉದಾರ ಮನಸ್ಸಿನ ಕಾರಣದಿಂದ ಅದನ್ನು ಬಡವರಿಗೆ ಹಂಚುತ್ತಿದ್ದಿರಬಹುದು, ಅಥವಾ ಅತಿಥಿಗಳಿಗೆ ನೀಡುತ್ತಿರಬಹುದು ಆದ್ದರಿಂದ ಅವರ ಮನೆಗಳಲ್ಲಿ ಏನು ಇರುತ್ತಿರಲಿಲ್ಲ.

ಇನ್ನೊಂದು ವರದಿ ಹೀಗಿದೆ ಹಝ್ರತ್ ಝೈದ್ ಬಿನ್ ಸಾಬಿತ್(ರ) ವರದಿ ಮಾಡುತ್ತಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬು ಅಯ್ಯೂಬ್ ಅನ್ಸಾರಿ(ರ) ಅವರ ಮನೆಯಲ್ಲಿ ತಂಗಿದಾಗ ಪ್ರವಾದಿ(ಸ) ಅವರಿಗೆ ಯಾವುದೇ ರೀತಿಯ ಉಡುಗೋರೆ ಬಂದಿರಲಿಲ್ಲ. ಮೊದಲನೆಯ ಉಡುಗೊರೆ ನಾನು ಪ್ರವಾದಿ(ಸ) ಅವರಿಗೆ ನೀಡಿದೆ ಅದು ಒಂದು ಬಟ್ಟಲಾಗಿತ್ತು. ಅದರಲ್ಲಿ ಗೋದಿ ಚಪಾತಿಯ ತುಂಡಿನ ಸರೀದ್, ಮಾಂಸ ಮತ್ತು ಹಾಲು ಇತ್ತು. ನಾನು ಅದನ್ನು ಪ್ರವಾದಿ(ಸ) ಅವರಿಗೆ ನೀಡಿ ಹೀಗೆ ಹೇಳಿದೆನು ಅಲ್ಲಾಹನ ಸಂದೇಶವಾಹಕರೇ! ಈ ಬಟ್ಟಲು ನನ್ನ ತಾಯಿ ನಿಮಗೆ ಕಳುಹಿಸಿರುವುದು. ಪ್ರವಾದಿ(ಸ) ಅವರು ಹೇಳಿದರು ಓ ಅಲ್ಲಾಹನೆ! ಇದರಲ್ಲಿ ಬರ್‌ಕತ್ ನೀಡು ಎಂದು ಪ್ರಾರ್ಥಿಸಿ ತಮ್ಮ ಸಹಾಬರವರನ್ನು ಕರೆಸಿ ಅವರೆಲ್ಲರೂ ಇದರಿಂದ ಸೇವಿಸಿದರು. ಅವರು ಹೇಳುತ್ತಾರೆ ಅಷ್ಟರಲ್ಲಿ ಸಅದ್ ಬಿನ್ ಉಬಾದ(ರ) ಅವರ ಗುಲಾಮ ಒಂದು ದೊಡ್ಡ ಬಟ್ಟಲನ್ನು ತೆಗೆದುಕೊಂಡು ಬಂದನು. ನಾನು ಹಝ್ರತ್ ಅಬು ಅಯ್ಯೂಬ್(ರ) ಅವರ ಮನೆಯ

ಬಾಗಿಲಲ್ಲಿಯೇ ನಿಂತುಕೊಂಡು ಆ ಬಟ್ಟಲಿಗೆ ಮುಚ್ಚಿದ ಬಟ್ಟೆಯನ್ನು ತೆರೆದು ನೋಡಿದೆ ಅದರಲ್ಲಿ ಸರೀದ್ ಇತ್ತು. ಅದು ಪ್ರವಾದಿ(ಸ) ಅವರಿಗೆ ನೀಡಲಾಯಿತು.

ಹಝ್ರತ್ ಝೈದ್(ರ) ಹೇಳುತ್ತಾರೆ: ನಾವು ಬನೂ ಮಾಲಿಕ್ ಬಿನ್ ನಜ್ಜಾದ್ ಗೋತ್ರದವರ ಮನೆಗಳಲ್ಲಿ ವಾಸಿಸುತ್ತಿದ್ದಾಗ ನಮ್ಮವರಲ್ಲಿ ಮೂವರು ಅಥವಾ ನಾಲ್ವರು ಪ್ರತಿ ರಾತ್ರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಒಬ್ಬರ ನಂತರ ಇನ್ನೊಬ್ಬರಂತೆ ಆಹಾರ ತೆಗೆದುಕೊಂಡು ಹೋಗುತ್ತಿದ್ದೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಏಳು ತಿಂಗಳ ಕಾಲ ಹಝ್ರತ್ ಅಬೂ ಅಯ್ಯೂಬ್ ಅನ್‌ಸಾರಿಯ ಮನೆಯಲ್ಲಿ ವಾಸಿಸಿದ್ದರು. ಆ ದಿನಗಳಲ್ಲಿ ಹಝ್ರತ್ ಸಅದ್ ಬಿನ್ ಉಬಾದ(ರ) ಮತ್ತು ಹಝ್ರತ್ ಅಸದ್ ಬಿನ್ ಝುರಾರ(ರ) ಕಳುಹಿಸುತ್ತಿದ್ದ ಆಹಾರದ ಬಟ್ಟಲು ಪ್ರತಿದಿನ ಎಡೆಬಿಡದೆ ಅವರ ಬಳಿಗೆ ಬರುತ್ತಾ ಇದ್ದುವು. ಇಲ್ಲಿ ಪ್ರಾರಂಭದಲ್ಲಿ ಪ್ರತಿ ದಿನ ಆಹಾರ ಬರುತ್ತಿತ್ತು ಎಂದು ಸ್ಪಷ್ಟವಾಯಿತು. ಏಳು ತಿಂಗಳು ಸತತವಾಗಿ ಬರುತ್ತಿತ್ತು ಅದರ ನಂತರವು ಬರುತ್ತಿರಬಹುದು ಆದರೆ ಪ್ರತಿ ದಿನ ಸತತವಾಗಿ ಬರುತ್ತಿರುತ್ತಿರಲಿಲ್ಲ. ಇದರ ಬಗ್ಗೆ ಹಝ್ರತ್ ಉಮ್ಮೆ ಅಯ್ಯೂಬ್(ರ) ಅವರೊಂದಿಗೆ ಕೇಳಲಾಯಿತು ಪ್ರವಾದಿ(ಸ) ಅವರು ನಿಮ್ಮ ಮನೆಯಲ್ಲಿ ತಂಗಿದ್ದರು ಆದ್ದರಿಂದ ಪ್ರವಾದಿ(ಸ) ಅವರಿಗೆ ಬಹಳ ಇಷ್ಟವಾದ ಆಹಾರ ಯಾವುದು? ಎಂದು ನಮಗೆ ತಿಳಿಸಿರಿ. ಅದಕ್ಕೆ ಅವರು ಉತ್ತರಿಸಿದರು ನಾನು ಎಂದೂ ಪ್ರವಾದಿ(ಸ) ಅವರು ಒಂದು ವಿಶೇಷ ಆಹಾರವನ್ನು ತಯಾರಿಸಲು ಆದೇಶಿಸಿದ್ದನ್ನು ಕಾಣಲಿಲ್ಲ ಅದೇ ರೀತಿ ಪ್ರವಾದಿ(ಸ) ಅವರಿಗೆ ಒಂದು ಆಹಾರ ನೀಡಿದಾಗ ಅವರು ಅದರಲ್ಲಿ ದೋಷಾರೋಪನೆ ಮಾಡಿರುವುದನ್ನು ಎಂದು ಕಾಣಲಿಲ್ಲ. ಹಝ್ರತ್ ಝೈದ್(ರ) ಹೇಳುತ್ತಾರೆ: ನನ್ನೊಂದಿಗೆ ಹಝ್ರತ್ ಅಬೂ ಅಯ್ಯೂಬ್ ಹೇಳಿದರು: ಒಂದು ದಿನ ಹಝ್ರತ್ ಸಅದ್ ಬಿನ್ ಉಬಾದ ಕಳುಹಿಸಿದ ಬಟ್ಟಲಲ್ಲಿ ತಫೀಶಲ್ ಇತ್ತು (ಅದು ಒಂದು ರೀತಿಯ ಸಾರಾಗಿದೆ). ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಸಾರನ್ನು ತುಂಬಾ ಕುಡಿದರು. ಈ ರೀತಿ ಸಾರನ್ನು ಕುಡಿಯುವುದನ್ನು ನಾನು ಅದರ ಮೊದಲು ಕಂಡಿರಲಿಲ್ಲ. ಅದರ ಬಳಿಕ ನಾವು ಸಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ಸಾರನ್ನು ತಯಾರಿಸಿ ಕೊಡುತ್ತಿದ್ದೆವು. ಅವರು ಹೇಳುತ್ತಾರೆ ನಾವು ನಿಮಗೋಸ್ಕರ ಹರೀಸ್ ಒಂದು ಸುಪ್ರಸಿದ್ಧ ಆಹಾರವಾಗಿದೆ ಅದು ಗೋದಿ ಮತ್ತು ಮಾಂಸದಿಂದ ತಯಾರಿಸಲಾಗುತ್ತದೆ. ಇದು ಸಹ ತಯಾರಿಸುತ್ತಿದ್ದೆವು ಅದನ್ನು ಪ್ರವಾದಿ(ಸ) ಅವರು ಬಹಳ ಇಷ್ಟಪಡುತ್ತಿದ್ದರು. ರಾತ್ರಿ ಊಟಕ್ಕಾಗಿ ಪ್ರವಾದಿ(ಸ) ಅವರೊಂದಿಗೆ ಐದರಿಂದ ಹದಿನಾರು ಜನ ಇರುತ್ತಿದ್ದರು. (ಸಬ್‌ಲುಲ್ ಹುದಾ, ಸಂಪುಟ–3, ಪುಟ–275, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993, ಸಬ್‌ಲುಲ್ ಹುದಾ ಸಂಪುಟ–3, ಪುಟ–279, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993, ಲುಗಾತುಲ್ ಹದೀಸ್ ಸಂಪುಟ–4, ಪುಟ–572, ಆಸಿಫ್ ಪ್ರಿಂಟರ್ಸ್ ಲಾಹೋರ್ 2005)

ಹಝ್ರತ್ ಅಬು ಅಯ್ಯೂಬ್ ಅನ್ಸಾರಿ(ರ) ಅವರ ಮನೆಯಲ್ಲಿ ತಂಗಿದ ಕಾಲದ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ ಬರೆಯುತ್ತಾರೆ: ಆ ಮನೆಯಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಏಳು ತಿಂಗಳು ಮುತ್ತು ಇಬ್ನೆ ಇಸ್‌ಹಾಕ್ ಅವರ ಪ್ರಕಾರ ಸಫರ್ ತಿಂಗಳು 2 ಹಿಜರಿ ತನಕ ವಾಸಿಸಿದ್ದರು. ಅಂದರೆ ಮಸ್ಜಿದ್ ನಬವಿ ಮತ್ತು ಅದರ ಕೊಠಡಿಗಳು ಸಿದ್ಧವಾಗುವ ತನಕ ಪ್ರವಾದಿ(ಸ) ಅವರು ವಾಸಿಸಿದರು. ಅಬು ಅಯ್ಯೂಬ್(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಆಹಾರ ಕಳುಹಿಸುತ್ತಿದ್ದರು ಉಳಿದು ಬರುವಂತಹ ಆಹಾರ ಸ್ವತಃ ಹಝ್ರತ್ ಅಬು ಅಯ್ಯೂಬ್(ರ) ಅವರು ಸೇವಿಸುತ್ತಿದ್ದರು. ಪ್ರೀತಿ ಮತ್ತು ನಿಷ್ಠೆಯ ಕಾರಣದಿಂದ ಅವರು ಪ್ರವಾದಿ(ಸ) ಅವರು ಸೇವಿಸಿದ ಕಡೆಯಿಂದಲೇ ಸೇವಿಸುತ್ತಿದ್ದರು. ಅನ್ಯ ಸಹಾಬರೂ ಸಹ ಸಾಮಾನ್ಯವಾಗಿ ಪ್ರವಾದಿ(ಸ) ಅವರ ಬಳಿಗೆ ಆಹಾರ ಕಳುಹಿಸುತ್ತಿದ್ದರು. ಆ ಜನರಲ್ಲಿ ಹಝ್ರತ್ ಸಅದ್ ಬಿನದ ಉಬಾದ(ರ) ಅವರ ಹೆಸರು ಇತಿಹಾಸದ ಪುಟಗಳಲ್ಲಿ ಬರೆಯಲಾಗಿದೆ. (ಸೀರತ್ ಖಾತಮನ್ನಬೀಯೀನ್(ಸ) ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಎಂ.ಎ, ಪುಟ–268)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಸಅದ್(ರ) ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಯಾ ರಸೂಲಲ್ಲಾಹ್! ನೀವು ನಮ್ಮ ಮನೆಗೆ ಆಗಮಿಸಬೇಕೆಂದು ಕೇಳಿಕೊಂಡರು. ಅದಕ್ಕೆ ಪ್ರವಾದಿ(ಸ) ಅವರು ಸಅದ್(ರ) ಅವರೊಂದಿಗೆ ಅವರ ಮನೆಗೆ ತೆರಳಿದರು. ಹಝ್ರತ್ ಸಅದ್(ರ) ರವರು ಖರ್ಜೂರ ಮತ್ತು ಎಳ್ಳು ನೀಡಿದರು ತದನಂತರ ಪ್ರವಾದಿ(ಸ) ಅವರಿಗೋಸ್ಕರ ಹಾಲಿನ ಒಂದು ಬಟ್ಟಲು ತಂದರು. ಅದರಿಂದ ಪ್ರವಾದಿ(ಸ) ಅವರು ಸೇವಿಸಿದರು. (ಸಬ್‌ಲುಲ್ ಹುದಾ, ಸಂಪುಟ–7, ಪುಟ–200, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಖೈಸ್ ಬಿನ್ ಸಅದ್(ರ), ಸಅದ್ ಬಿನ್ ಉಬಾದ(ರ) ಅವರ ಪುತ್ರರಾಗಿದ್ದರು. ಅವರು ಹೇಳುತ್ತಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್ ಬಿನ್ ಉಬಾದರ ಮನೆಗೆ ಆಗಮಿಸಿ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್ ಎಂದು ಹೇಳಿದರು. ಪ್ರವಾದಿ(ಸ) ಅವರು ಮನೆಯವರ ಮೇಲೆ ಶಾಂತಿಯಿರಲಿ ಎಂದು ಹೇಳಿದರು. ಖೈಸ್(ರ) ಅವರು ಹೇಳಿದರು ನನ್ನ ತಂದೆ ಹಝ್ರತ್ ಸಅದ್ ಮೆಲ್ಲಗೆ ವ ಅಲೈಕುಮುಸ್ಸಲಾಮ್ ವರಹ್ಮತುಲ್ಲಾಹ್ ಎಂದು ಉತ್ತರ ನೀಡಿದರು. ಖೈಸ್(ರ) ಹೇಳುತ್ತಾರೆ ನಾನು ಅವರ ತಂದೆಯವರಿಗೆ ಕೇಳಿದೆ ನೀವು ಪ್ರವಾದಿ(ಸ) ಅವರನ್ನು ಒಳಗೆ ಬರೆಯಲು ಹೇಳುವುದಿಲ್ಲವೇ? ಇದಕ್ಕೆ ಹಝ್ರತ್ ಸಅದ್(ರ) ತನ್ನ ಪುತ್ರನಿಗೆ ಹೇಳುತ್ತಾರೆ ಪ್ರವಾದಿ(ಸ) ಅವರು ನಮ್ಮ ಮೇಲೆ ಇನ್ನಷ್ಟು ಶಾಂತಿ ಕಳುಹಿಸಲಿ. ನಾನು ಮತ್ತೆ ಮೆಲ್ಲಗೆ ಹೇಳಿದೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತೆ ಸಲಾಮ್ ಹೇಳಿ ಹಿಂದಿರುಗಿದರು. ಅಂದರೆ ಹಝ್ರತ್ ಉಬಾದ(ರ) ಹೇಳಿದರು ಪ್ರವಾದಿ(ಸ) ಅವರು ಸಲಾಮ್ ಹೇಳುತ್ತಿದ್ದಾರೆ ನಾನು ಅದಕ್ಕೆ ಉತ್ತರವಾಗಿ ಮೆಲ್ಲಗೆ ಹೇಳಿದೆ ಪ್ರವಾದಿ(ಸ) ಅವರು ಮತ್ತೊಮ್ಮೆ ಸಲಾಮ್ ಹೇಳಲಿ ಅವರು ಹೀಗೆ ಮಾಡಿದರೆ ನಮ್ಮ ಮನೆಯಲ್ಲಿ ಶಾಂತಿ ತಲುಪುವುದು.

ಏನೇ ಇರಲಿ ಅವರು ಹೇಳುತ್ತಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿ ಹೋದರು. ಆಗ ಹಝ್ರತ್ ಸಅದ್ ಅವರನ್ನು ಹಿಂಬಾಲಿಸಿ ಹೇಳಿದರು: ಯಾ ರಸೂಲುಲ್ಲಾಹ್ ನನ್ನ ತಂದೆ ತಾಯಂದಿರು ತಮಗೆ ಬಲಿಯರ್ಪಿತರಾಗಲಿ. ನೀವು ಹೇಳಿದ ಸಲಾಮ್‌ಗಳನ್ನು ನಾನು ಆಲಿಸಿದೆ ಮತ್ತು ಉತ್ತರ ನೀಡಿದೆ. ಆದರೆ ತಮಗೆ ಕೇಳಿಸಲಿಲ್ಲ. ನಾನು ತಮ್ಮ ಅನುಗ್ರಹ ಭರಿತ ಪ್ರಾರ್ಥನೆಯನ್ನು ಹೆಚ್ಚು ಸಾರಿ ಗಳಿಸಲು ಇಚ್ಛಿಸಿದ್ದೆ. ಅನಂತರ ಹಝ್ರತ್ ಸಅದ್(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅವರನ್ನು ಸ್ನಾನ ಮಾಡಲು ಕೇಳಿಕೊಂಡರು ಪ್ರವಾದಿ(ಸ) ಸ್ನಾನ ಮಾಡಿದರು. ಸಅದ್(ರ) ಪ್ರವಾದಿ(ಸ) ಅವರಿಗೆ ಝಾಫರಾನ್ (ಕೇಸರಿ) ಅಥವಾ ವರ್ಸ್ ಎಂಬ ಗಿಡ (ಅದು ಯಮನ್ ಪ್ರದೇಶದಲ್ಲಿ ಬೆಳೆಯುವಂತಹ ಒಂದು ಕೇಸರಿ ಬಣ್ಣದ ಗಿಡವಾಗಿದೆ) ದಿಂದ ಬಟ್ಟೆಗಳನ್ನು ಬಣ್ಣವಾಗಿಸುತ್ತಾರೆ ಅದರಿಂದ ಬಣ್ಣಿಸಿರುವಂತಹ ಬಟ್ಟೆ ನೀಡಿದರು. ಪ್ರವಾದಿ(ಸ) ಅವರು ಆ ಬಟ್ಟೆ ಧರಿಸಿಕೊಂಡರು. ತದನಂತರ ಪ್ರವಾದಿ(ಸ) ಅವರು ತಮ್ಮ ಕೈಗಳನ್ನು ಎತ್ತಿ ಹೀಗೆ ಪ್ರಾರ್ಥಿಸಿದರು. ಓ ಅಲ್ಲಾಹ್! ತನ್ನ ದರೂದ್ ಹಾಗೂ ತನ್ನ ಅನುಗ್ರಹವು ಸಅದ್(ರ) ಅವರ ಸಂತಾನದ ಮೇಲಿರಲಿ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–441–442, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003, ಉಮ್‌ದತುಲ್ ಖಾರಿ ಶರಹ್ ಸಹೀಹ್ ಬುಖಾರಿ, ಸಂಪುಟ–2, ಪುಟ–222, ಕಿತಾಬುಲ್ ಇಲಮ್, ದಾರುಲ್ ಫಿಕರ್ ಬೈರೂತ್)

ಹಝ್ರತ್ ಅನಸ್(ರ) ಅವರು ಈ ವರದಿಯನ್ನು ಹೀಗೆ ಪ್ರಸ್ತಾಪಿಸಿದ್ದಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್ ಬಿನ್ ಉಬಾದರ ಮನೆಗೆ ಹೋಗಿ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್ ಎಂದು ಹೇಳಿದರು. ಹಝ್ರತ್ ಸಅದ್ ಮೆಲ್ಲಗೆ ವ ಅಲೈಕುಮುಸ್ಸಲಾಮ್ ವರಹ್ಮತುಲ್ಲಾಹ್ ಎಂದು ಉತ್ತರ ಹೇಳಿದರು. ಆದರೆ ಅವರು ಉತ್ತರವಾಗಿ ಹೇಳಿದ ಸಲಾಮ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕೇಳಿಸಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೂರು ಸಾರಿ ಸಲಾಮ್ ಹೇಳಿದರು. ಹಝ್ರತ್ ಸಅದ್(ರ) ಮೂರು ಸಾರಿ ಮೆಲ್ಲಗೆ ಉತ್ತರ ಹೇಳಿದರು. ಆದರೆ ಸಲಾಮ್‌ಗೆ ಉತ್ತರ ಕೇಳಿಸದ ಕಾರಣ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿ ಹೋದರು. ಆಗ ಹಝ್ರತ್ ಸಅದ್ ಅವರನ್ನು ಹಿಂಬಾಲಿಸಿ ಹೇಳಿದರು: ಯಾ ರಸೂಲುಲ್ಲಾಹ್ ನನ್ನ ತಂದೆ ತಾಯಂದಿರು ತಮಗೆ ಬಲಿಯರ್ಪಿತರಾಗಲಿ. ನೀವು ಹೇಳಿದ ಸಲಾಮ್‌ಗಳನ್ನು ನಾನು ಆಲಿಸಿದೆ ಮತ್ತು ಉತ್ತರ ನೀಡಿದೆ. ಆದರೆ ತಮಗೆ ಕೇಳಿಸಲಿಲ್ಲ. ನಾನು ತಮ್ಮ ಅನುಗ್ರಹ ಭರಿತ ಪ್ರಾರ್ಥನೆಯನ್ನು ಹೆಚ್ಚು ಸಾರಿ ಗಳಿಸಲು ಇಚ್ಛಿಸಿದ್ದೆ. ಅನಂತರ ಹಝ್ರತ್ ಸಅದ್(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರಿಗೆ ಒಣದ್ರಾಕ್ಷೆ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅದನ್ನು ತಿಂದು ಈ ರೀತಿ ಪ್ರಾರ್ಥಿಸಿದರು: ನಿಮ್ಮ ಆಹಾರ ಸಾತ್ವಿಕರು ತಿನ್ನುತ್ತಿರಲಿ. ದೇವದೂತರು ನಿಮಗೋಸ್ಕರ ಅನುಗ್ರಹದ ಪ್ರಾರ್ಥನೆ ಮಾಡುತ್ತಿರಲಿ. ಉಪವಾಸ ಅನುಷ್ಠಿಸುವವರು ನಿಮ್ಮ ಮನೆಯಲ್ಲಿ ಇಫ್ತಾರ್ ಮಾಡುತ್ತಾ ಇರಲಿ. (ಮಸ್‌ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–4, ಪುಟ–356–357, ಹದೀಸ್–12433, ಆಲಿಮುಲ್ ಕುತುಬ್ ಬೈರೂತ್ 1998)

ಅಲ್ಲಾಮ ಇಬ್ನು ಸಿರೀನ್ ಹೇಳುತ್ತಾರೆ: ಅಹ್ಲೆ ಸುಫ್ಫ (ಮಸ್‌ಜಿದ್ ಚಾವಡಿಯಲ್ಲಿ ವಾಸಿಸುತ್ತಿದ್ದ ಬಡ ಮುಸ್ಲಿಮರು) ಅಂತಹ ಜನರಿಗೆ ಊಟ ಮಾಡಿಸಲು ಸಾಯಂಕಾಲ ಯಾರಾದರೂ ಅವರಲ್ಲಿ ಒಬ್ಬಿಬ್ಬರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ಹಝ್ರತ್ ಸಅದ್ ಬಿನ್ ಉಬಾದ(ರ) ಎಂಬತ್ತು ಜನರನ್ನು ಊಟ ಕೊಡಲು ತಮ್ಮ ಜೊತೆ ಕರೆದುಕೊಂಡು ಹೋಗುತ್ತಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–3, ಪುಟ–56, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1995)

ಅಂದರೆ ಸಾಮಾನ್ಯವಾಗಿ ಹೀಗಾಗುತ್ತಿತ್ತು ಆದರೆ ಅಹ್ಲೆ ಸುಫ್ಫ ಹಸಿವಿನ ಪರಿಸ್ಥಿತಿಯಲ್ಲಿರಬೇಕಾದ ದಿನಗಳ ಬಗ್ಗೆಯು ವರದಿಗಳು ದೊರಕುತ್ತವೆ. ಏನೇ ಇರಲೀ ಸಹಾಬರು ಸಾಮಾನ್ಯವಾಗಿ ಪ್ರವಾದಿ(ಸ) ಅವರ ಆಸ್ಥಾನದಲ್ಲಿ ಕುಳಿತಿರುತ್ತಿದ್ದ ಈ ಬಡ ಜನರನ್ನು ನೋಡಿಕೊಳ್ಳುತ್ತಿದ್ದರು. ಅವರನ್ನು ನೋಡಿಕೊಳ್ಳುವುದರಲ್ಲಿ ಹೆಚ್ಚಿನ ಪಾತ್ರ ಹಝ್ರತ್ ಉಬಾದ(ರ) ಅವರದ್ದಾಗಿತ್ತು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಬಂದು ಒಂದು ವರ್ಷದ ನಂತರ ಸಫರ್ ತಿಂಗಳಲ್ಲಿ ಅಬ್‌ವಾ, ಈ ಸ್ಥಳ ಮದೀನದಿಂದ ಮಕ್ಕಕ್ಕೆ ಹೋಗುವ ಹೆದ್ದಾರಿಯಲ್ಲಿ ಜುಹ್‌ಫದಿಂದ 23 ಮೈಲಿ ದೂರವಿತ್ತು ಇಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತಾಯಿ ಹಝ್ರತ್ ಆಮಿನರ ಗೋರಿ ಇದೆ. ಅದರ ಕಡೆ ಹೊರಟರು. ಆಗ ಅವರ ಧ್ವಜ ಬಿಳಿ ಬಣ್ಣದಾಗಿತ್ತು. ಆ ಸಂದರ್ಭದಲ್ಲಿ ಹಝ್ರತ್ ಸಅದ್‌ರನ್ನು ಮದೀನದಲ್ಲಿ ಅಮೀರ್‌ರನ್ನಾಗಿ ನೇಮಿಸಲಾಗಿತ್ತು. (ಅತ್ತಬಖಾತುಲ್ ಕುಬ್ರ ಸಂಪುಟ–2, ಪುಟ–5, ಗಝ್ವತುಲ್ ಅಬ್ವಾ, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990, ಅಟ್‌ಲಸ್ ಸೀರತುನ್ನಬವಿ(ಸ) ಪುಟ–84, ದಾರುಸ್ಸಲಾಮ್ 1424)

ಅಬ್‌ವಾ ಯುದ್ಧಕ್ಕೆ ವದಾನ್ ಯುದ್ಧ ಎಂಬ ಹೆಸರು ಸಹ ಇದೆ. ಸೀರತ್ ಖಾತಮನ್ನಬೀಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ ವದ್ದಾನ್ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಬರೆಯುತ್ತಾರೆ:

"ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಯುದ್ಧದಲ್ಲಿ ಭಾಗವಹಿಸುವಾಗ ತಮ್ಮ ಸಂಗಡಿಗರನ್ನು(ಸಹಾಬ) ಜೊತೆಗೂಡಿಸಿಕೊಳ್ಳುತಿದ್ದರು. ಕೆಲವೊಮ್ಮೆ ಯಾವುದಾದರು ಸಹಾಬಿಯ ನೇತೃತ್ವದಲ್ಲಿ ಸೈನ್ಯ ಕಳುಹಿಸುತ್ತಿದ್ದರು. ಇತಿಹಾಸಗಾರರು ಈ ಎರಡು ತರಹದ ಯುದ್ಧಗಳಿಗೆ ಬೇರೆ ಬೇರೆ ಹೇಸರಿರಿಸಿದ್ದಾರೆ. ಹೀಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಭಾಗವಹಿಸುವಂತಹ ಯುದ್ಧವನ್ನು 'ಗಝ್ವ' ಎಂದು ಹೆಸರಿಸಿದ್ದಾರೆ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭಾಗವಹಿಸದಂತಹ ಯುದ್ಧವನ್ನು 'ಸರಿಯ್ಯ' ಅಥವಾ 'ಬಅಸ್' ಎಂದು ಹೆಸರಿಸಿದ್ದಾರೆ. ಆದರೆ ಇಲ್ಲಿ ಒಂದು ವಿಷಯು ನೆನಪಿನಲ್ಲಿಟ್ಟಕೊಳ್ಳಬೇಕು 'ಗಝ್ವ' ಅಥವಾ 'ಸರಯ್ಯ' ಈ ಎರಡು ಬಗೆಯ ಯುದ್ಧಗಳಲ್ಲಿ ಜಿಹಾದ್ ಬಿಸ್ಸೈಫ್ (ಖಡ್ಗದ ಜಿಹಾದ್) ಮಾಡುವ ಉದ್ದೇಶದಿಂದ ಹೊರಡಬೇಕೆಂದು ಅವಶ್ಯವಲ್ಲ. ಬದಲಿಗೆ ಯುದ್ಧದ ಸ್ಥಿತಿಯಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೈಗೊಂಡ ಪ್ರತಿಯೊಂದು ಪ್ರವಾಸವನ್ನು ಗಝ್ವ ಎಂದು ಕರೆಯಲಾಗುತ್ತದೆ ಅದೇ ರೀತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶದ ಮೇರೆಗೆ ತಮ್ಮ ಸಹಾಬರ ನೇತೃತ್ವದಲ್ಲಿ ಕೈಗೊಂಡ ಪ್ರವಾಸಗಳನ್ನು ಇತಿಹಾಸಗಾರರು ಸರಿಯ್ಯ ಎಂದು ಹೆಸರಿಸಿದ್ದಾರೆ. ಈ ಸಂದರ್ಭದಲ್ಲಿಯು ಯುದ್ಧ ಮಾಡುವುದು ಅವಶ್ಯಕವಲ್ಲ. ಆದರೆ ಕೆಲವರು ಅರಿವಿಲ್ಲದೆ ಪ್ರತಿಯೊಂದು ಗಝ್ವ ಅಥವಾ ಸರಯ್ಯವನ್ನು ಯುದ್ಧದ ಯೋಜನೆ ಎಂದು ತಿಳಿದುಕೊಳ್ಳುತ್ತಾರೆ ಆದರೆ ಅದು ಸರಿಯಲ್ಲ.

ಜಿಹಾದ್ ಬಿಸ್ಸೈಫ್ (ಖಡ್ಗ ಬಳಸಿ ಜಿಹಾದ್) ಬಗ್ಗೆ ಅನುಮತಿಸುವ ಪ್ರಥಮ ಪವಿತ್ರ ಖುರ್‌ಆನ್ ವಚನ ಹಿಜರಿ ಎರಡನೇ ವರ್ಷ ಸಫರ್‌ನಲ್ಲಿ ಅವತೀರ್ಣವಾಯಿತು. ಇದರ ಪ್ರಸ್ತಾವನೆ ಹಿಂದಿನ ಖುತ್‌ಬಗಳಲ್ಲಿ ಆಗಿದೆ. ಖುರೈಶರು ಕೊಲೆಗೈಯಲು ಯತ್ನಿಸಿದಾಗ ಮತ್ತು ಅವರ ಅಪಾಯಕಾರಿ ಯೋಜನೆಗಳಿಂದ ಮುಸ್ಲಿಮರನ್ನು ಸಂರಕ್ಷಿಸಲು ಯೋಜನೆ ಕೈಗೊಳ್ಳುವುದು ಅತ್ಯವಶ್ಯಕವಾಗಿತ್ತು ಆದ್ದರಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ತಿಂಗಳಲ್ಲಿಯೇ ಮುಹಾಜಿರೀನರ ಒಂದು ಗುಂಪಿನೊಂದಿಗೆ ಅಲ್ಲಾಹನ ನಾಮ ಪಠಿಸುತ್ತಾ ಮದೀನದಿಂದ ಹೊರಟರು. ಹೊರಡುವುದಕ್ಕು ಮುಂಚೆ ಪ್ರವಾದಿ(ಸ) ಅವರು ಹಝ್ರತ್ ಉಬಾದ(ರ) ಅವರನ್ನು ಮದೀನದ ಅಮೀರನ್ನಾಗಿ ನೇಮಿಸಿದರು ತದನಂತರ ಮದೀನದ ದಕ್ಷಿಣ ದಿಕ್ಕಿನ ಕಡೆ ಮಕ್ಕದ ದಿಕ್ಕಿನಲ್ಲಿ ಹೊರಟು ವದ್ದಾನ್ ಎಂಬಲ್ಲಿಗೆ ತಲುಪಿದರು. "ಇದರ ಬಗ್ಗೆ ಮುಂಚೆ ಪ್ರಸ್ತಾಪಿಸಲಾಗಿದೆ". ಈ ಪ್ರದೇಶದಲ್ಲಿ ಬನೂ ಝುಮ್ರಹ್‌ವಿನ ಜನರು ವಾಸಿಸುತ್ತಿದ್ದರು. ಈ ಗೋತ್ರದವರು ಬನು ಕನಾನ್‌ನ ಒಂದು ಶಾಖೆ ಆಗಿತ್ತು ಹೀಗೆ ಅವರೆಲ್ಲರು ಖುರೈಶರ ಚಿಕ್ಕಪ್ಪನ ಮಕ್ಕಳಾಗಿದ್ದರು. ಇಲ್ಲಿ ತಲುಪಿ ಬನೂ ಝುಮ್‌ರನ ಸರದಾರನನ್ನು ಭೇಟಿ ಆಗಿ ಮಾತನಾಡಿ ಪರಸ್ಪರ ಒಪ್ಪಿಗೆಯಿಂದ ಒಂದು ಸಂದಾನವನ್ನು ರೂಪಿಸಲಾಯಿತು ಅದರ ಶರತ್ತುಗಳು ಇಂತಿವೇ: ಬನೂ ಝುಮ್‌ರದವರು ಮುಸ್ಲಿಮರೊಂದಿಗೆ ಗೆಳೆತನದ ಸಂಬಂಧ ಇರಿಸುವರು ಮತ್ತು ಮಸ್ಲಿಮರ ವಿರುದ್ಧ ಯಾವ ಶತ್ರುಗಳಿಗೂ ಸಹಾಯ ಮಾಡುವುದಿಲ್ಲ. ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವಶ್ಯಕತೆ ಇದ್ದಾಗ "ಅಂದರೆ ಬನೂ ಝುಮ್‌ರ ಅವರನ್ನು" ಕರೆಸಿದಾಗ ಅವರು ತಕ್ಷಣ ಮುಸ್ಲಿಮರ ಸಹಾಯಕ್ಕಾಗಿ ಬರುವವರು. ಇನ್ನೊಂದು ಕಡೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರ ಕಡೆಯಿಂದ ಹೀಗೆ ಪ್ರತಿಜ್ಞೆ ಮಾಡಿದ್ದರು ಎಲ್ಲಾ ಮುಸ್ಲಿಮರು ಬನೂ ಝುಮ್‌ರ ಗೋತ್ರದವರೊಂದಿಗೆ ಗೆಳೆತನದ ಸಂಬಂಧ ಇರಿಸುವರು ಮತ್ತು ಅವಶ್ಯಕತೆ ಇದ್ದಾಗ ಅವರಿಗೆ ಸಹಾಯ ಮಾಡುವರು. ಈ ಕರಾರು ಬರೆಯಲಾಯಿತು ಹಾಗೂ ಇಬ್ಬರು ಪಕ್ಷದವರು ಇದರಲ್ಲಿ ಹಸ್ತಾಕ್ಷರ ಮಾಡಿದರು. ಹದಿನೈದು ದಿವಸದ ನಂತರ ಪ್ರವಾದಿ(ಸ) ಅವರು ಹಿಂದಿರುಗಿದರು. ವದ್ದಾನ್ ಯುದ್ಧದ ಇನ್ನೊಂದು ಹೆಸರು ಗಝ್ವಏ ಅಬ್ವಾ ಎಂದು ಸಹ ಇದೆ. ಏಕೆಂದರೆ ವದ್ದಾನಿನ ಸಮೀಪ ಅಬ್ವಾ ಎಂಬ ಸ್ಥಳವಿದೆ ಇಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತಾಯಿಯ ಗೋರಿಯು ಇದೆ. ಇತಿಹಾಸಗಾರರು ಬರೆಯುತ್ತಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಯುದ್ಧದಲ್ಲಿ ಬನೂ ಝುಮ್‌ರ ಅವರೊಂದಿಗೆ ಮಕ್ಕದ ಖುರೈಶರ ಬಗ್ಗೆಯು ಯೋಚನೆ ಇತ್ತು. ಇದರ ಅರ್ಥ ಏನೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಯೋಜನೆಯ ಉದ್ದೇಶವು ಖುರೈಶರ ಅಪಾಯಕಾರಿ ಯೋಜನೆಗಳನ್ನು ತಡೆಗಟ್ಟುವುದಾಗಿತ್ತು ಮತ್ತು ಇದರಲ್ಲಿ ಖುರೈಶರು ಮುಸ್ಲಿಮರ ವಿರುದ್ಧ ಅರಬರ ಬುಡಕಟ್ಟು ಜನಾಂಗವನ್ನು ಎತ್ತಿಕಟ್ಟುತ್ತಿರುವ ಆ ವಿಷಕಾರಿ ಮತ್ತು ಅಪಾಯಕಾರಿ ಪ್ರಭಾವದಿಂದ ಸಂರಕ್ಷಿಸುವುದಾಗಿತ್ತು. "ಖುರೈಶರು ಬುಡಕಟ್ಟು ಜನಾಂಗದವರೆಡೆ ಹೋಗಿ ಮುಸ್ಲಿಮರ ವಿರುದ್ಧ ಪ್ರಚಾರ ಮಾಡುತ್ತಿದ್ದರು" ಅವರ ಈ ಕೃತ್ಯದ ಕಾರಣದಿಂದ ಆ ಕಾಲದಲ್ಲಿ ಮುಸ್ಲಿಮರ ಸ್ಥಿತಿ ಬಹಳ ಗಂಭೀರವಾಗಿತ್ತು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–327–328)

ಹಝ್ರತ್ ಸಅದ್ ಬಿನ್ ಉಬಾದ(ರ) ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು ಎಂಬುದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ವಾಖಿದಿ, ಮದಾಯನೀ ಮತ್ತು ಇಬ್ನೆ ಕಲ್‌ಬಿ ಅವರ ಅಭಿಪ್ರಾಯದಲ್ಲಿ ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಆದರೆ ಇಬ್ನೆ ಇಸ್ಹಾಕ್ ಹಾಗು ಇಬ್ನೆ ಉಖಬ ಹಾಗೂ ಇಬ್ನೆ ಸಅದ್ ಅವರ ಪ್ರಕಾರ ಅವರು ಬದರ್ ಯುದ್ಧದಲ್ಲಿ ಭಾಗವಹಿಸಲಿಲ್ಲ.

ಇದರ ಬಗ್ಗೆ ತಬಖಾತುಲ್ ಕುಬ್ರದಲ್ಲಿ ಇದರ ವಿವರಣೆ ಹೀಗಿದೆ ಹಝ್ರತ್ ಸಅದ್ ಬಿನ್ ಉಬಾದ(ರ) ಬದರ್ ಯುದ್ಧದಲ್ಲಿ ಭಾಗವಹಿಸಲಿಲ್ಲ. ಅವರು ಯುದ್ಧಕ್ಕೆ ಹೊರಡಲು ಸಿದ್ಧತೆಗೊಳಿಸುತ್ತಿದ್ದರು, ಅನ್ಸಾರ್‌ಗಳನ್ನು ಸಹ ಸಿದ್ಧಗೊಳಿಸುತ್ತಿದ್ದರು ಆದರೆ ಹೊರಡುವುದಕ್ಕು ಮುಂಚೆ ಅವರಿಗೆ ಒಂದು ನಾಯಿ ಕಚ್ಚಿದ ಕಾರಣ ಅವರು ಬದರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ ಭಾಗವಹಿಸ ಬೇಕೆಂಬ ಆಸೆ ಅವರಿಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್(ರ) ಅವರಿಗೆ ಬದರ್ ಯುದ್ಧದಲ್ಲಿ ಲಭಿಸಿದ ಸಂಪತ್ತಿನಲ್ಲಿ ಅವರಿಗೂ ಭಾಗ ನೀಡಿದ್ದರು. ಹಝ್ರತ್ ಸಅದ್ ಬಿನ್ ಉಬಾದ(ರ) ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. (ಅಲ್‌ಇಸ್ತಿಯಾಬ್ ಸಂಪುಟ–2, ಪುಟ–594, ದಾರುಲ್‌ಜೀಲ್ ಬೈರೂತ್ 1992) (ಅತ್ತಬಖತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಸೈರುಸ್ಸಹಾಬ ಸಂಪುಟ–3, ಪುಟ–377, ದಾರುಲ್ ಇಶಾಅತ್ ಕರಾಚಿ 2004)

ಒಂದು ವರದಿ ಪ್ರಕಾರ ಬದರ್ ಯುದ್ಧದ ಸಂದರ್ಭದಲ್ಲಿ ಅನ್‌ಸಾರ್‌ಗಳ ಪತಾಕೆ ಹಝ್ರತ್ ಸಅದ್ ಬಿನ್ ಉಬಾದರ ಕೈಯಲ್ಲಿತ್ತು. ಇದು ಅಲ್‌ಮುಸ್ತದ್‌ರಿಕ್‌ನ ವರದಿ ಆಗಿದೆ. (ಅಲ್‌ಮುಸ್‌ತದ್ರಿಕ್ ಅಲಸ್ಸಹೀಹೈನ್ ಸಂಪುಟ–3, ಪುಟ–282, ಹದೀಸ್–5096, ದಾರುಲ್ ಕುತುಬ್ ಇಲ್‌ಮಿಯ ಬೈರೂತ್–2002)

ಬದರ್ ಯುದ್ಧಕ್ಕೆ ಹೊರಡುವಾಗ ಹಝ್ರತ್ ಸಅದ್ ಬಿನ್ ಉಬಾದರು ಅಝಬ್ ಎಂಬ ಹೆಸರಿನ ಖಡ್ಗವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಾರಿತೋಷಿಕವಾಗಿ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧದಲ್ಲಿ ಆ ಖಡ್ಗದೊಂದಿಗೆ ಭಾಗವಹಿಸಿದ್ದರು. (ಸಬ್‌ಲಿಲ್‌ಹುದಾ, ಸಂಪುಟ–4, ಪುಟ–24, ದಆರುಲ್‌ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಒಂದು ಕತ್ತೆ ಇತ್ತು ಅದನ್ನು ಸಹ ಸಅದ್(ರ) ಅವರು ಪಾರಿತೋಷಿಕವಾಗಿ ನೀಡಿದ್ದರು.

(ಸಬ್‌ಲುಲ್ ಹುದಾ ಸಂಪುಟ–7, ಪುಟ–406, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಏಳು ಕವಚಗಳಿದ್ದವು. ಅವುಗಳಲ್ಲಿ ಒಂದಾದ ಝಾತುಲ್ ಫುಝೂಲ್ ಎಂಬ ಕವಚವು ಹಝ್ರತ್ ಸಅದ್ ಬಿನ್ ಉಬಾದ್(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಳುಹಿಸಿದ್ದಾಗಿತ್ತು. ಅಬೂ ಶಹಮ್ ಎಂಬ ಯಹೂದಿಯಿಂದ ಮೂವತ್ತು ಸಾಅ್ ಜೋಳಕ್ಕೆ ಬದಲಾಗಿ ಒಂದು ವರ್ಷ ಅವಧಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒತ್ತೆ ಇರಿಸಿದ ಕವಚ ಇದೇ ಆಗಿತ್ತು. (ಸಬ್‌ಲುಲ್ ಹುದಾ ಸಂಪುಟ–7, ಪುಟ–368, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಇಬ್ನೆ ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆ ಹಝ್ರತ್ ಅಲಿ(ರ) ಕೈಯಲ್ಲಿತ್ತು. ಅನ್‌ಸಾರ್‌ಗಳ ಪತಾಕೆ ಹಝ್ರತ್ ಸಅದ್ ಬಿನ್ ಉಬಾದರ ಕೈಯಲ್ಲಿರುತ್ತಿತ್ತು. ಯುದ್ಧವು ತೀವ್ರವಾಗುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅನ್‌ಸಾರ್‌ಗಳ ಪತಾಕೆಯ ಕೆಳಗೆ ಇರುತ್ತಿದ್ದರು. (ಮಸ್‌ನದ್ ಅಹ್ಮದ್ ಬಿನೆ ಹಂಬಲ್ ಸಂಪುಟ–1, ಪುಟ–917, ಹದೀಸ್–3486, ಆಲಿಮುಲ್ ಕುತುಬ್ ಇಲ್‌ಮಿಯ ಬೈರೂತ್ 1998)

ಅಂದರೆ ಶತ್ರುಗಳ ತೀವ್ರತೆಯು ಸಾಮಾನ್ಯವಾಗಿ ಅನ್ಸಾರ್‌ಗಳ ಕಡೆ ಆಗುತ್ತಿತ್ತು. ಏಕೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಯೇ ಇರುತ್ತಿದ್ದರು.

ಹಝ್ರತ್ ಉಸಾಮ ಬಿನ್ ಝೈದ್ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಕತ್ತೆಯ ಮೇಲೇರಿ ಹೋಗುತ್ತಿದ್ದರು. ಅವರು ಹಝ್ರತ್ ಝೈದ್ ಅವರನ್ನು ತಮ್ಮ ಹಿಂದೆ ಕೂರಿಸಿಕೊಂಡರು. ಪ್ರವಾದಿ(ಸ) ಅವರು ಹಝ್ರತ್ ಸಅದ್ ಬಿನ್ ಉಬಾದ(ರ) ರವರ ಕ್ಷೇಮ ವಿಚಾರಣೆಗಾಗಿ ಹೋಗುತ್ತಿದ್ದರು ಅವರು ಬನು ಹಾರಿಸ್ ಬಿನ್ ಖಝ್‌ರಜ್ ಅವರ ಬಡಾವಣೆಯಲ್ಲಿದ್ದರು. ಈ ಘಟನೆಯು ಬದರ್ ಯುದ್ಧದ ಮಂಚೆಯದ್ದಾಗಿದೆ. ಹಝ್ರತ್ ಉಸಾಮ ಹೇಳುತ್ತಿದ್ದರು ಆ ಸ್ಥಳದಲ್ಲಿ ಕೆಲವು ಬಹುದೇವಾರಾಧಕರು, ಕೆಲವು ಯಹೂದಿಯರು ಮತ್ತು ಕೆಲವು ಮುಸ್ಲಿಮರು ಜೊತೆಗೂಡಿದ ಸಭೆಯ ಹತ್ತಿರ ದಾಟಿ ಹೋಗುವಾಗ ಧೂಳೆದ್ದಿತು. ಆ ಸಭೆಯಲ್ಲಿ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ಇದ್ದರು. ಆಗ ಅವರು ಇಸ್ಲಾಂ ಧರ್ಮ ಸ್ವೀಕರಿಸಿರಲಿಲ್ಲ. ಅಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಸಹ ಇದ್ದರು. ಧೂಳು ಅಲ್ಲಿದ್ದವರನ್ನು ಆವರಿಸಿದಾಗ ಅಬ್ದುಲ್ಲಾ ಬಿನ್ ಉಬಯ್ಯ್ ತನ್ನ ಮೂಗನ್ನು ಚಾದರದಿಂದ ಮುಚ್ಚಿಕೊಂಡು ಹೇಳಿದರು: ನಮ್ಮ ಮೇಲೆ ಧೂಳು ಹಾರಿಸಬೇಡಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸವಾರಿ ಮೃಗದಿಂದ ಇಳಿದು ಬಂದು ಜನರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಿ ಪವಿತ್ರ ಖುರ್‌ಆನ್ ಓದಿ ಕೇಳಿಸಿದರು. ಆಗ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ಹೇಳಿದರು: ನೀವು ಹೇಳುವ ಮಾತಿಗಿಂತ ಉತ್ತಮವಾದುದು ಬೇರೊಂದಿಲ್ಲ. ಆದರೆ ನಾವು ಕುಳಿತಿರುವಲ್ಲಿಗೆ ಬಂದು ತೊಂದರೆ ನೀಡಬೇಡಿರಿ. ನೀವು ನಿಮ್ಮ ವಾಸಸ್ಥಳಕ್ಕೆ ಹೋಗಿರಿ. ನಿಮ್ಮ ಸಮೀಪಕ್ಕೆ ಬಂದವರಿಗೆ ಮಾತ್ರ ಉಪದೇಶಿಸಿರಿ. ಆಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹೇಳಿದರು: ಅಲ್ಲಾಹನ ಸಂದೇಶವಾಹಕರೇ ನೀವು ನಮ್ಮ ಸಭೆಗಳಿಗೆ ಬಂದು ಉಪದೇಶಿಸಿರಿ ನಾವು ನಿಮ್ಮ ಮಾತುಗಳನ್ನು ಇಷ್ಟಪಡುತ್ತೇವೆ ಎಂದು ಹೇಳಿದರು. ಆಗ ಬಹುದೇವಾರಾಧಕರೂ, ಯಹೂದಿಯರೂ, ಮುಸ್ಲಿಮರೂ ಪರಸ್ಪರ ನಿಂದಿಸಲು ಪ್ರಾರಂಭಿಸಿದರು. ಅವರು ಪರಸ್ಪರ ಆಕ್ರಮಣ ಮಾಡುವ ಸಾಧ್ಯತೆಯಿತ್ತು. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಉಪದೇಶಿಸುತ್ತಾ ಅವರ ಆವೇಶ ತಗ್ಗಿಸುತ್ತಿದ್ದರು. ಅನಂತರ ಅಲ್ಲಿ ಜಗಳ ನಿವಾರಣೆಯಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಸಹಾಬರು ಸಹನೆಯಿಂದ ವರ್ತಿಸುತ್ತಿದ್ದರು. ಬಹುದೇವಾರಾಧಕರು ಮತ್ತು ಯಹೂದಿಯರು ಕಷ್ಟ ನೀಡುವಾಗ ಸಹನೆ ತೋರುತ್ತಿದ್ದರು. ತದನಂತರ ಪ್ರವಾದಿವರ್ಯರು ತಮ್ಮ ಸವಾರಿಯ ಮೇಲೆ ಸವಾರರಾಗಿ ಹಝ್ರತ್ ಸಾಅದ್ ಬಿನ್ ಉಬಾದ ಅವರ ಹತ್ತಿರ ಬಂದರು. ಪ್ರವಾದಿ(ಸ) ಅವರು ಹೇಳಿದರು ಓ ಸಾಅದ್! ಅಬು ಹುಬ್ಬಾಬನು ನನಗೆ ಏನು ಹೇಳಿದನು ಎಂದು ಕೇಳಲಿಲ್ಲವೇ? ಪ್ರವಾದಿ(ಸ) ಅವರ ಉದ್ದೇಶ ಅಬ್ದುಲ್ಲಾ ಬಿ ಉಬೈ ಸುಲೂಲ್ ಆಗಿದ್ದನು. ಹಝ್ರತ್ ಸಾಅದ್ ಬಿನ್ ಉಬಾದ(ರ) ಅವರು ಹೇಳಿದರು ಎಲೈ ಪ್ರವಾದಿ ವರ್ಯರೇ! ನೀವು ಅವನನ್ನು ಕ್ಷಮಿಸಿರಿ. ನಿಮಗೆ ಗ್ರಂಥವನ್ನು ನೀಡಿ ಕಳುಹಿಸಿರುವನ ಆಣೆ ಅಲ್ಲಾಹನು ನಿಮ್ಮ ಮೇಲೆ ಅವತರಿಸಿರುವಂತಹ ನೈಜ್ಯತೆಯನ್ನು ಇಲ್ಲಿಯ ವರೆಗೆ ತಲುಪಿಸಿದ್ದಾನೆ. ಈ ಊರಿನವರು ಅಬ್ದುಲ್ಲಾ ಬಿನ್ ಉಬೈಸುಲೂಲನ್ನು ತಮ್ಮ ಸರದಾರನನ್ನಾಗಿ ನೇಮಿಸಿ ಅವನಿಗೆ ಸರದಾರನ ಪಟ್ಟವನ್ನು ಕಟ್ಟಬೇಕೆಂದು ಬಯಸುತ್ತಿದ್ದರು. ಆದರೆ ಅಲ್ಲಾಹನು ತಮಗೆ ಆ ನೈಜ್ಯತೆಯನ್ನು ನೀಡಿದಾಗ ಅವನಲ್ಲಿ ಅಸೂಯೆಯ ಭಾವನೆ ಹುಟ್ಟಿತು. ಆ ಅಸುಯೆಯಿಂದ ಅವನು ಹೀಗೆಲ್ಲ ಮಾತಾಡಿರುವನು. ಈ ಮಾತುಗಳನ್ನು ಆಲಿಸಿ ಪ್ರವಾದಿ(ಸ) ಅವರು ಅವನನ್ನು ನಿರ್ಲಕ್ಷಿಸಿದರು. ಅದೇ ರೀತಿ ಪ್ರವಾದಿ(ಸ) ಮತ್ತು ಅವರ ಸಹಾಬರವರು ಮುಶ್ರಿಕರನ್ನು (ಬಹುದೇವಾರಾಧಕರನ್ನು) ಮತ್ತು ಅಹ್ಲೆ ಕಿತಾಬ್ ಅವರನ್ನು ಅಲ್ಲಾಹನ ಆದೇಶದ ಮೇರೆಗೆ ನಿರ್ಲಕ್ಷಿಸುತ್ತಿದ್ದರು, ಮತ್ತು ಅವರು ನೀಡುತ್ತಿದ್ದಂತ ತೊಂದರೆಗಳನ್ನು ಬಹಳ ಸಹನೆಯಿಂದ ಸಹಿಸಿಕೊಳ್ಳುತ್ತಿದ್ದರು. ಅಲ್ಲಾಹನು ಹೀಗೆ ಹೇಳಿದ್ದಾನೆ: **ವಲತಸ್‌ಮಉನ್ನ ಮಿನಲ್ಲಝೀನ ಊತುಲ್ ಕಿತಾಬ ಮಿನ್ ಖಬ್‌ಲಿಕುಮ್ ವಮಿನಲ್ಲಝೀನ ಅಶ್‌ರಕು ಅಝನ್ ಕಸೀರ.** (ಆಲಿ **ಇಮ್ರಾನ್:187**) ಅಂದರೆ: ಹಾಗೂ ನಿಮಗೆ ಮುನ್ನ ಗ್ರಂಥ ನೀಡಲ್ಪಟ್ಟವರಿಂದಲೂ ಬಹುದೇವಾರಾಧಕರಿಂದಲೂ ನೀವು ಮನನೋಯುವ ಮಾತುಗಳನ್ನು ಕೇಳುವಿರಿ. ಆದರೆ ನೀವು ಸಹನೆಯನ್ನು ತೋರಿಸಿ, ಸತ್ಕರ್ಮ ನಿರತರಾದರೆ ಅದು ಖಂಡಿತವಾಗಿಯೂ ಧೀರೋದಾತ್ತ ಕಾರ್ಯಗಳಲ್ಲಿ ಸೇರಿದ್ದಾಗಿದೆ. ಮತ್ತೆ ಅಲ್ಲಾಹನು ಹೇಳಿದನು: **ವದ್ದ ಕಸಿರುಮ್ ಮಿನ್ ಅಹ್‌ಲಿಲ್ ಕಿತಾಬಿ ಲೌ ಯರುದ್ದೂನಕುಮ್ ಮಿನ್ ಬಅದಿ ಈಮಾನಿಕುಮ್ ಕುಫ್ಫಾರನ್ ಹಸದನ್ ಮಿನ್ ಇನ್ದಿ ಅನ್ಫುಸಿಹಿಮ್.** (**ಅಲ್‌ಬಖರ: 110**) ಸತ್ಯವು ಅವರಿಗೆ ಸ್ಪಷ್ಟಪಡಿಸಲ್ಪಟ್ಟ ನಂತರವೂ ಗ್ರಂಥ ನೀಡಲ್ಪಟ್ಟವರಲ್ಲಿ ಹೆಚ್ಚಿನವರು ತಮ್ಮಲ್ಲಿರುವ ಅಸೂಯೆ ನಿಮಿತ್ತ, ನೀವು ವಿಶ್ವಾಸಿಗಳಾದ ಬಳಿಕ ನಿಮ್ಮನ್ನು ಅವಿಶ್ವಾಸಿಗಳನ್ನಾಗಿ ಮಾಡಿ ಮರಳಿ ಕೊಂಡೊಯ್ಯಲು ಬಯಸುತ್ತಾರೆ. ಆದರೆ, ಅಲ್ಲಾಹನು ತನ್ನ ಆಜ್ಞೆಯನ್ನು ಜಾರಿಗೊಳಿಸುವ ವರೆಗೆ ನೀವು ಅವರನ್ನು ಕ್ಷಮಿಸಿರಿ ಮತ್ತು ನಿರ್ಲಕ್ಷಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ತಾನಿಚ್ಛಿಸುವುದನ್ನೆಲ್ಲ ಮಾಡಲು ಶಕ್ತನು.

ಪ್ರವಾದಿ(ಸ) ಅವರು ಅಲ್ಲಾಹನು ತಮಗೆ ನೀಡಿದ ಆದೇಶದ ಮೇರೆಗೆ ಕ್ಷಮಿಸುವುದೆ ಉಚಿತ ಎಂದು ತಿಳಿಯುತ್ತಿದ್ದರು. ಕೊನೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಬಹುದೇವಾರಾಧಕರ ವಿರುದ್ಧ ಯುದ್ಧ ಮಾಡಲು ಅನುಮತಿ ನೀಡಿದನು. ಬದರ್ ಎಂಬಲ್ಲಿ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಮಕ್ಕದ ಖುರೈಶಿಗಳ ದೊಡ್ಡ ದೊಡ್ಡ ಸಕ್ರಿಯ ನಾಯಕರು ಅಲ್ಲಾಹನ ಅನುಗ್ರಹದ ಮೂಲಕ ಕೊಲ್ಲಲ್ಪಟ್ಟರು. ಆಗ ಅಬ್ದುಲ್ಲಾ ಬಿನ್ ಸುಲೂಲ್ ಮತ್ತು ಅವರ ಜೊತೆಗಿದ್ದ ಬಹುದೇವಾರಾಧಕರು ಹೇಳಿದರು: ಈಗ ಈ ಜನರು ಜಯಶಾಲಿಗಳಾಗುತ್ತಿದ್ದಾರೆ. ಅವರು ಇಸ್ಲಾಮ್ ಧರ್ಮಕ್ಕೆ ಸೇರುವುದಾಗಿ ಬೈಅತ್ ಮಾಡಿದರು. (ಸಹೀಹ್ ಬುಖಾರಿ ಕಿತಾಬುತ್ತಫ್‌ಸೀರ್ ಹದೀಸ್–4566)

ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಸಲಹೆ ಕೇಳಿದಾಗ ಹಝ್ರತ್ ಸಅದ್ ಬಿನ್ ಉಬಾದ(ರ) ಹೇಳಿದರು ಹಝ್ರತ್ ಅನಸ್(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರಿಗೆ ಅಬುಸುಫಿಯಾನ್‌ನ ಆಗಮನದ ಬಗ್ಗೆ ಅರಿವಾದಾಗ ಅವರು ಸಲಹೆ ಕೇಳಿದರು. ವರದಿಗಾರರು ಹೇಳುತ್ತಾರೆ: ಹಝ್ರತ್ ಅಬುಬಕ್ಕರ್(ರ) ಅವರು ಸಂವಾದ ಮಾಡಿದರು ಇದಕ್ಕೆ ಪ್ರವಾದಿ(ಸ) ಅವರು ಮುಖ ತಿರುಗಿಸಿಕೊಂಡರು. ನಂತರ ಹಝ್ರತ್ ಉಮರ್(ರ) ಅವರು ಸಹ ಸಂವಾದ ಮಾಡಿದರು. ಇದಕ್ಕೂ ಸಹ ಪ್ರವಾದಿ(ಸ) ಅವರು ಮುಖ ತಿರುಗಿಸಿಕೊಂಡರು. ತದನಂತರ ಹಝ್ರತ್ ಉಬಾದ(ರ) ಅವರು ಎದ್ದು ನಿಂತು ಹೀಗೆ ಹೇಳಿದರು: ಯಾ ರಸೂಲುಲ್ಲಾ! ತಾವು ನಮ್ಮೊಂದಿಗೆ ಸಲಹೆ ಕೇಳುತ್ತಿರುವಿರಿ. ನನ್ನ ಜೀವ ಯಾರ ಕೈಯಲ್ಲಿ ಇದೆಯೋ ಅವನ ಹೆಸರಲ್ಲಿ ಆಣೆಹಾಕಿ ಹೇಳುತ್ತೇನೆ. ನೀವು ನಮ್ಮೊಂದಿಗೆ ಸಮುದ್ರದೊಳಗೆ ಕುದುರೆ ಹಾಯಿಸಲು ಆಜ್ಞಾಪಿಸಿದರೆ ನಾವು ಅವುಗಳನ್ನು ಸಮುದ್ರದೊಳಗೆ ಹಾಯಿಸುವೆವು. ಒಂದು ವೇಳೆ ನೀವು ನಮ್ಮನ್ನು **ಬರ್‌ಕುಲ್ ಗಮಾದ್,** ಯಮನ್‌ನ ಒಂದು ಪಟ್ಟಣವಾಗಿದೆ ಇದು ಮಕ್ಕದಿಂದ ಐದು ರಾತ್ರಿಯಷ್ಟು ದೂರವಿದೆ ಇದು ಕಡಲತೀರದಲ್ಲಿದೆ. ಅಲ್ಲಿಯ ತನಕ ನಮ್ಮ ಕುದುರೆಗಳನ್ನು ಓಡಿಸುವುದಾಗಿ ಆಜ್ಞಾಪಿಸಿದರೆ ನಾವು ಅವಶ್ಯಕವಾಗಿ ಹೀಗೆ ಮಾಡುವೆವು. ವರದಿಗಾರ ಹೇಳುತ್ತಾರೆ: ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರನ್ನು ಕರೆದುಕೊಂಡು ಹೊರಟು ಬದರ್‌ನಲ್ಲಿ ಇಳಿದರು. ಅಲ್ಲಿ ಖುರೈಶರ ನೀರು ತರುವವರು ಬಂದರು ಅವರಲ್ಲಿ ಬನೂ ಹಜಾಜ್‌ನ ಓರ್ವ ಕಪ್ಪು ಹುಡುಗನು ಇದ್ದನು. ಮುಸ್ಲಿಮರು ಅವನನ್ನು ಹಿಡಿದುಕೊಂಡರು. ಪ್ರವಾದಿ(ಸ) ಅವರ ಸಹಾಬರು ಅವನಲ್ಲಿ ಅಬು ಸುಫಿಯಾನ್ ಹಾಗೂ ಅವನ ಸಂಗಡಿಗರ ಬಗ್ಗೆ ವಿಚಾರಿಸಿದರು. ಏಕೆಂದರೆ ಮೊದಲು ಅಬು ಸುಫಿಯಾನ್ ಹಾಗೂ ಅವನ ಸಂಗಡಿಗರು ಒಂದು ದೊಡ್ಡ ಸೈನ್ಯದೊಂದಿಗೆ ಮುಸ್ಲಿಮರ ಮೇಲೆ ದಾಳಿ ಮಾಡುವರು ಎಂದು ತಿಳಿದು ಬಂದಿತ್ತು. ಆದ್ದರಿಂದ ಅವರಿಂದ ಅವನ ಬಗ್ಗೆ ವಿಚಾರಿಸಿದರು. ಅದಕ್ಕೆ ಆ ಹುಡುಗ ನನಗೆ ಅಬುಸುಫಿಯಾನ್ ಅವನ ಬಗ್ಗೆ ವಿಚಾರಿಸುತ್ತಿದ್ದರು ಆದರೆ ಇವನು ಅಬು ಜಹಲ್, ಉತ್‌ಬ, ಶೆಬ, ಹಾಗೂ ಉಮಯ್ಯ ಬಿನ್ ಹಲಫ್ ಎಂದು ಹೇಳುತ್ತಿದ್ದನು. ಇವರೆಲ್ಲರು

ಇಲ್ಲಿ ನಿಜವಾಗಿಯು ಕುಳಿತಿದ್ದರು, ಅಬುಜಹಲ್, ಉತ್‌ಬ, ಶೇಬ, ಹಾಗೂ ಉಮಯ್ಯ ಬಿನ್ ಹಲಫ್ ಸಹ ಇಲ್ಲಿದ್ದರು. ಅವನು ಹೀಗೆ ಹೇಳಿದಾಗ ಅವರು ಆ ಹುಡುಗನಿಗೆ ಹೊಡೆದಾಗ ಅವನು ಹೇಳಿದನು ಸರಿ ನಾನು ನಿಮಗೆ ಹೇಳುವೆನು ಎಂದು ಇವನು ಅಬುಸುಫಿಯಾನ್ ಆಗಿದ್ದಾನೆ ಎಂದನು. ಹೀಗೆ ಹೇಳಿದಾಗ ಅವರು ಆ ಹುಡುಗನಿಗೆ ಬಿಟ್ಟಾಗ ಅವನು ಹೇಳಿದನು ನನಗೆ ಅಬು ಸುಫಿಯಾನ್ ಬಗ್ಗೆ ಅರಿವಿಲ್ಲ ಆದರೆ ಇವನು ಅಬು ಜಹಲ್, ಉತ್ಬ, ಶೇಬ, ಹಾಗೂ ಉಮಯ್ಯ ಬಿನ್ ಹಲಫ್ ಆ ಜನರಲ್ಲಿ ಉಪಸ್ತಿತರಿದ್ದಾರೆ ಎಂದನು. ಬದರ್ ಮೈದಾನದ ಸಮೀಪ ತಂಗಿರುವಂತಹ ಗುಂಪಿನಲ್ಲಿ ಇವರೆಲ್ಲರು ಇದ್ದಾರೆ ಆದರೆ ಅಬು ಸುಫಿಯಾನ್ ಇಲ್ಲ. ಅವನು ಹೀಗೆ ಹೇಳಿದಾಗ ಪುನಃ ಅವರೆಲ್ಲರು ಅವನಗೆ ಹೊಡೆಯಲು ಪ್ರಾರಂಭಿಸಿದರು. ರಸೂಲುಲ್ಲಾಹ್(ಸ) ಆ ಸಂದರ್ಭದಲ್ಲಿ ನಮಾಝ್ ಅನುಷ್ಠಿಸುತ್ತಿದ್ದರು. ಈ ಸನ್ನಿವೇಶ ಕಂಡಾಗ ಹುಝೂರ್(ಸ) ಅವರು ನಮಾಝ್ ಮುಕ್ತಾಯಗೊಳಿಸಿ ಹೇಳಿದರು ಅಲ್ಲಾಹನ ಆಣೆ! ಅವನು ನಮ್ಮೊಂದಿಗೆ ನಿಜ ಹೇಳುತ್ತಿರುವಾಗ ನೀವು ಅವನನ್ನು ಹೊಡೆಯುತ್ತಿದ್ದೀರಿ ಅದೇ ರೀತಿ ಅವನು ಸುಳ್ಳು ಹೇಳಿದಾಗ ಅವನನ್ನು ಬಿಡುತ್ತಿದ್ದೀರಿ. ಇದು ಬದರ್‌ನ ಮೈದಾನವಾಗಿದೆ. ಹಝ್‌ರತ್ ಅನಸ್ ವರದಿ ಮಾಡುತ್ತಾರೆ: ಬದರ್ ಯುದ್ಧದ ಸಂದರ್ಭದಲ್ಲಿ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶತ್ರುಗಳ ಹೆಸರನ್ನು ಹೇಳುತ್ತಾ ಒಬ್ಬನು ಇಲ್ಲಿ ಬೀಳುವನು. ಇನ್ನೊಬ್ಬನು ಅಲ್ಲಿ ಬೀಳುವನು ಎಂದು ಹೇಳುತ್ತಾ ತನ್ನ ಕೈಯನ್ನು ನೆಲದ ಮೇಲೆ ಇರಿಸಿ ಸ್ಥಳವನ್ನು ತೋರಿಸುತ್ತಿದ್ದರು. (ಸಹೀಹ್ ಮುಸ್ಲಿಮ್ ಕಿತಾಬುಲ್ ಜಿಹಾದ್ ವಸ್ಸೈರ್ ಬಾಬ್ ಗಝ್ವ ಬದರ್ ಹದೀಸ್–1779, ಫರ್‌ಹಂಗ್ ಸೀರತ್ ಪುಟ–57, ಝುವಾರಿ ಅಕಾಡಮಿ ಕರಾಚಿ–2003)

ಉಹುದ್ ಯುದ್ಧದ ಮೊದಲು ಒಂದು ಜುಮುಅ ದಿನದಂದು ಸಂಜೆ ಹಝ್‌ರತ್ ಸಅದ್ ಬಿನ್ ಮುಆದ್(ರ), ಹಝ್‌ರತ್ ಉಸೈದ್ ಬಿನ್ ಹಝೀರ್(ರ) ಮತ್ತು ಹಝ್‌ರತ್ ಸಅದ್ ಬಿನ್ ಉಬಾದ(ರ) ಆಯುಧಧಾರಿಗಳಾಗಿ ಮಸ್‌ಜಿದ್ ನಬವಿಗೆ ಬಂದು ಅನಂತರ ಬೆಳಗ್ಗಿನ ತನಕ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆ ಬಾಗಿಲಲ್ಲಿ ಪಹರೆ ನೀಡುತ್ತಾ ಇದ್ದರು. ಉಹುದ್ ಯುದ್ಧಕ್ಕೋಸ್ಕರ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನದಿಂದ ಹೊರಟಾಗ ಹಝ್‌ರತ್ ಸಅದ್ ಬಿನ್ ಮುಆದ್(ರ) ಮತ್ತು ಹಝ್‌ರತ್ ಸಅದ್ ಬಿನ್ ಉಬಾದ(ರ) ಅವರ ಮುಂದೆ ಓಡುತ್ತಾ ಇದ್ದರು. ಇವರಿಬ್ಬರು ಕವಚ ಧರಿಸಿಕೊಂಡಿದ್ದರು ಇನ್ನುಳಿದ ಸಹಾಬರು ಹುಝೂರ್(ಸ) ಅವರ ಎಡ ಮತ್ತು ಬಲ ಭಾಗದಲ್ಲಿ ಓಡುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–2, ಪುಟ–28–30, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್‌ರತ್ ಬಶೀರ್ ಅಹ್ಮದ್ ಸಾಹೆಬ್ ಎಂ.ಎ ಉಹದ್ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ:

"ಹಝ್‌ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಸಹಾಬರ ಒಂದು ದೊಡ್ಡ ಸೈನ್ಯದೊಂದಿಗೆ ಅಸರ್ ನಮಾಝ್ ನಂತರ ಮದೀನದಿಂದ ಹೊರಟರು. ಔಸ್, ಖಝ್‌ರಜ್ ಗೋತ್ರದ ಸರದಾರರಾದ ಸಅದ್ ಬಿನ್ ಮುಆಝ್(ರ), ಮತ್ತು ಸಅದ್ ಬಿನ್ ಉಬಾದ(ರ) ಅವರು ಪ್ರವಾದಿ(ಸ) ಅವರ ಮುಂದೆ ಓಡುತ್ತಾ ಇದ್ದರು ಮತ್ತುಳಿದ ಸಹಾಬರವರು ನಿಮ್ಮ ಎಡ ಮತ್ತು ಬಲ ಭಾಗದಲ್ಲಿ ಮತ್ತು ಹಿಂದೆ ನಡೆಯುತ್ತಿದ್ದರು. (ಸೀರತ್ ಖಾತಮನ್ನಬೀಯೀನ್ ಪುಟ–486)

ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಸ್ಥಿರ ಹೆಜ್ಜೆಯೊಂದಿಗೆ ನಿಂತಿದ್ದ ಸಹಾಬರಲ್ಲಿ ಹಝ್‌ರತ್ ಸಅದ್ ಬಿನ್ ಉಬಾದ(ರ) ಸಹ ಇದ್ದರು. (ಸಬ್‌ಲುಲ್‌ಹುದಾ ಸಂಪುಟ–4, ಪುಟ–197, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದಿಂದ ಮರಳಿ ಬಂದು ತಮ್ಮ ಕುದುರೆಯಿಂದ ಕೆಳಗೆ ಇಳಿದಾಗ ಅವರು ಹಝ್‌ರತ್ ಸಅದ್ ಬಿನ್ ಮುಆಝ್(ರ) ಮತ್ತು ಹಝ್‌ರತ್ ಸಅದ್ ಬಿನ್ ಉಬಾದ(ರ)ರ ಸಹಾಯ ಪಡೆದು ಮನೆಯೊಳಗೆ ಪ್ರವೇಶಿಸಿದರು. (ಸಬ್‌ಲುಲ್ ಹುದಾ ಸಂಪುಟ–4, ಪುಟ–229, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) ಪ್ರವಾದಿ(ಸ) ಗಾಯಾಳು ಆಗಿದ್ದರು. ಈ ಪರಿಸ್ಥಿತಿಯಲ್ಲಿ ಕುದುರೆಯಿಂದ ಇಳಿದಾಗ ಹುಝೂರ್(ಸ) ಅವರು ಅವರಿಬ್ಬರ ಸಹಾಯ ತೆಗೆದುಕೊಂಡರು.

ಹಝ್‌ರತ್ ಜಾಬಿರ್ ಬಿನ್ ಅಬ್ದುಲ್ಲಾ ಹೇಳುತ್ತಾರೆ: ಹಮ್‌ರಾ ಉಲ್ ಅಸದ್ ಯುದ್ಧದ ಸಂದರ್ಭದಲ್ಲಿ ನಮ್ಮ ದಾರಿ ಖರ್ಚಿಗೆ ಇದ್ದುದು ಖರ್ಜೂರವಾಗಿತ್ತು. ಹಮ್‌ರಾ ಉಲ್ ಅಸದ್ ಯುದ್ಧವು ಶವ್ವಾಲ್ 3 ಹಿಜರಿಯಲ್ಲಾಯಿತು. ಇಲ್ಲಿ ಖುರೈಶರು ಮುಸ್ಲಿಮರಿಗೆ ಬಹಳ ಹಾನಿ ಉಂಟಾಗಿದೆ ಎಂದು ತಿಳಿದಿದ್ದರು. ಆದ್ದರಿಂದ ಮದೀನಕ್ಕೆ ತಕ್ಷಣ ಹಿಂದಿರುಗಿ ಹಲ್ಲೆ ಮಾಡಬೇಕು ಎಂದು ಯೋಚಿಸಿದರು ಹೀಗೆ ಮಾಡಿದ್ದಲ್ಲಿ ಮುಸ್ಲಿಮರು ಯುದ್ಧವಾಡುವುದಿಲ್ಲ ಏಕೆಂದರೆ ಅವರಿಗೆ ಬಹಳ ಹಾನಿವುಂಟಾಗಿದೆ. ಇಲ್ಲಿ ಪ್ರವಾದಿ(ಸ) ಖುರೈಶರನ್ನು ಹಿಂಬಾಲಿಸುತ್ತ ಹಮ್‌ರಾಉಲ್ ಅಸದ್ ಎಂಬಲ್ಲಿಗೆ ತಲುಪಿದರು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಇರಾದೆಯ ಬಗ್ಗೆ ತಿಳಿದಾಗ ಅವರು ನಾವು ಅವರನ್ನು ಹಿಂಬಾಲಿಸುವೆವು ಎಂದು ಹೇಳಿದರು. ಹಮ್‌ರಾಉಲ್ ಅಸದ್ ಮದೀನದಿಂದ 'ಝುಲ್ ಹಲೀಫ'ನ ಕಡೆ 8 ಮೈಲಿ ದೂರದಲ್ಲಿತ್ತು. ಖುರೈಶರಿಗೆ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ತಿಳಿದು ಬಂದಾಗ ಅವರು ಮಕ್ಕದ ಕಡೆ ಓಡಿಹೋದರು. ಮುಸ್ಲಿಮರು ದುರ್ಬಲವಾಗಿದ್ದರು ಅವರ ಮೇಲೆ ಹಲ್ಲೆ ಮಾಡಲು ಬರುತ್ತಿದ್ದಾರೆ ಎಂದು ತಿಳಿದಾಗ ಅವರು ಅಲ್ಲಿಂದ ಓಡಿ ಹೋದರು. ಹಝ್‌ರತ್ ಸಅದ್ ಬಿನ್ ಉಬಾದ(ರ) 30 ಒಂಟೆಗಳು ಹಾಗೂ ಖರ್ಜೂರಗಳನ್ನು ನೀಡಿದರು. ಅದು ಹಮ್‌ರಾಉಲ್ ಅಸದ್ ಎಂಬ ಸ್ಥಳಕ್ಕೆ ತಲಪುವವರೆಗೆ ನಮಗೆ ಧಾರಾಳವಾಗಿತ್ತು. ವರದಿಗಾರರು ಹೇಳುತ್ತಾರೆ: ಅವರು ಒಂಟೆಗಳು ತೆಗೆಕೊಂಡು ಬಂದಿದ್ದರು ಅದನ್ನು ಎರಡು ಅಥವಾ ಮೂರು ದಿವಸಕ್ಕೊಮ್ಮೆ ಝಿಬಹ್ ಮಾಡಿ ಸೇವಿಸುತ್ತಿದ್ದರು. (ಸಬ್‌ಲುಲ್ ಹುದಾ ಸಂಪುಟ–4, ಪುಟ–310, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993, ಫರ್‌ಹಂಗ್ ಸೀರತ್ ಪುಟ–106, ಝುವಾರಿ ಅಕಾಡಮಿ ಕರಾಚಿ 2003, ಸೀರತ್ ಖಾತಮನ್ನಬಿಯೀನ್, ಹಝ್‌ರತ್ ಮಿರ್ಝ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–354, ಶರಹ್ ಅಝ್ಝುರ್‌ಖನಿ, ಸಂಪುಟ–2, ಪುಟ–464, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1996)

ಬನೂ ನಝೀರ್ ಯುದ್ಧ ಹಿಜರಿ ವರ್ಷ ನಾಲ್ಕು ರಬೀಉಲ್ ಅವ್ವಲ್‌ನಲ್ಲಿ ನಡೆಯಿತು. ಯಹೂದಿಯರಾದ ಬನೂ ನಝೀರದ ಕೋಟೆಗಳನ್ನು 15 ದಿನಗಳ ಕಾಲ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮುತ್ತಿಗೆ ಹಾಕಿದರು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಜನರನ್ನು ಖೈಬರ್ ಕಡೆಗೆ ಬಹಿಷ್ಕರಿಸಿದ್ದರು. ಆ ಸಂದರ್ಭದಲ್ಲಿ ಗನೀಮತ್ ಸಂಪತ್ತು ದೊರೆತಾಗ ಅವರು ಹಝ್‌ರತ್ ಸಾಬಿತ್ ಬಿನ್ ಖೈಸ್‌ರನ್ನು ಕರೆದು ಹೇಳಿದರು– ನನ್ನ ಬಳಿಗೆ ನಿಮ್ಮ ಕೋಮಿನವರನ್ನು ಕರೆಯಿರಿ. ಹಝ್‌ರತ್ ಖೈಸ್ ಬಿನ್ ಸಾಬಿತ್ ಹೇಳಿದರು ಯಾ ರಸೂಲುಲ್ಲಾಹ್! ಖಝ್‌ರಜರನ್ನು? ಅದಕ್ಕೆ ಪ್ರವಾದಿ(ಸ) ನುಡಿದರು ಇಲ್ಲ ಎಲ್ಲಾ ಅನ್ಸಾರ್‌ಗಳನ್ನು. ಹಾಗೆ ಔಸ್ ಮತ್ತು ಖಝ್‌ರಜ್ ಗೋತ್ರದ ಜನರನ್ನು ಕರೆದುಕೊಂಡು ಬರಲಾಯಿತು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಮ್‌ದ್ ಮತ್ತು ಸನಾ ಉಚ್ಚರಿಸಿ ಅನ್‌ಸಾರ್‌ಗಳು ಮುಹಾಜಿರ್‌ಗಳಿಗೆ ಮಾಡಿದ ಉಪಕಾರಗಳನ್ನು ವಿವರಿಸಿದರು. ನೀವೆಲ್ಲರು ಮುಹಾಜಿರೀನರ ಮೇಲೆ ಹೇಗೆ ಉಪಕಾರ ಮಾಡಿರುವಿರಿ ಎಂದರೆ ಅವರನ್ನು ನಿಮ್ಮ ಮನೆಗಳಲ್ಲಿ ಇರಿಸಿದ್ದೀರಿ ಹೀಗೆ ಮುಹಾಜಿರೀನರನ್ನು ತಮ್ಮ ಮೇಲೆ ಆದ್ಯತೆ ನೀಡಿದ್ದೀರಿ. ಅನಂತರ ಹೇಳಿದರು: ನೀವು ಇಚ್ಚೈಸುವುದಾದರೆ ಬನೂ ನಝೀರ್‌ರಿಂದ ಲಭಿಸಿದ ಸಂಪತ್ತನ್ನು ನಿಮ್ಮ ಮತ್ತು ಮುಹಾಜಿರ್‌ಗಳ ಮಧ್ಯೆ ಸಮಾನವಾಗಿ ಹಂಚುವೆನು. ಹೀಗೆ ಮಾಡಿದರೆ ಮುಹಾಜಿರ್‌ಗಳು ಹಿಂದೆ ಇದ್ದ ಹಾಗೆಯೇ ನಿಮ್ಮ ಮನೆಯಲ್ಲಿ ವಾಸಿಸುವರು. ಅಥವಾ ನಾನು ಈ ಎಲ್ಲಾ ಸಂಪತ್ತು ಮುಹಾಜಿರ್‌ಗಳಿಗೆ ಮಾತ್ರ ಹಂಚಿದರೆ ಅವರು ನಿಮ್ಮ ಮನೆಗಳಿಂದ ಹೊರಗೆ ಹೋಗಿ ವಾಸಿಸುವರು. ಆಗ ಹಝ್‌ರತ್ ಸಅದ್ ಬಿನ್ ಉಬಾದ(ರ) ಮತ್ತು ಹಝ್‌ರತ್ ಸಅದ್ ಬಿನ್ ಮುಆದ್(ರ) ಈ ಇಬ್ಬರು ಜೊತೆ ಸೇರಿ ಹೇಳಿದರು: ಯಾ ರಸೂಲುಲ್ಲಾಹ್, ತಾವು ಈ ಸಂಪತ್ತನ್ನು ಮುಹಾಜಿರ್‌ಗಳಿಗೆ ಹಂಚಿಕೊಡಿರಿ. ಆದರೆ ಅನಂತರ ಸಹ ಅವರು ನಮ್ಮ ಮನೆಗಳಲ್ಲಿ ಹಿಂದೆ ವಾಸಿಸುತ್ತಿದ್ದ ಹಾಗೆಯೇ ವಾಸಿಸುವರು. ಆಗ ಎಲ್ಲಾ ಅನ್‌ಸಾರ್‌ಗಳು ಉಚ್ಚ ಧ್ವನಿಯಲ್ಲಿ ಹೇಳಿದರು: ಯಾ ರಸೂಲುಲ್ಲಾಹ್ ನಾವು ಸಮ್ಮತಿ ಸೂಚಿಸುತ್ತಾ ತಲೆ ಬಾಗುತ್ತೇವೆ. ಆಗ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಾರ್ಥಿಸಿದರು: ಓ ಅಲ್ಲಾಹ್, ಅನ್‌ಸಾರ್ ಮತ್ತು ಅವರ ಮಕ್ಕಳ ಮೇಲೆ ಕಾರುಣ್ಯ ದೋರು.

ಅಲ್ಲಾಹನು ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಶತ್ರುಗಳಿಂದ ಲಭಿಸಿದ ಸಂಪತ್ತು (ಮಾಲೆ ಫೈ) ನೀಡಲಾಯಿತು ಅದನ್ನು ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಹಾಜಿರೀನರಲ್ಲಿ ಮತ್ತು ಎರಡು ಅನ್ಸಾರ್‌ಗಳ ನಡುವೆ ಅದನ್ನು ಹಂಚಿದರು. ಆ ಇಬ್ಬರು ಅನ್ಸಾರ್ ಸಹಾಬರು ಬಡವರಾಗಿದ್ದರು. ಹಝ್‌ರತ್ ಸಹಲ್ ಬಿನ್ ಹುನೈಫ್(ರ), ಹಝ್‌ರತ್ ಅಬುದಜಾನ(ರ) ಹಾಗೂ ಹಝ್‌ರತ್ ಸಅದ್ ಬಿನ್ ಮುಆಝ್(ರ) ಅವರನ್ನು ಇಬ್ನೆ ಅಬಿ ಹಖೀಖ್ ಅವರ ಖಡ್ಗ ನೀಡಿದರು. (ಸಬ್‌ಲುಲ್ ಹುದಾ, ಸಂಪುಟ–4, ಪುಟ–325, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1993, ಅಟ್‌ಲಸ್ ಸೀರ್‌ತ್ ನಬವಿ(ಸ) ಪುಟ–264–265, ದಾರುಸ್ಸಲಾಮ್ 1424, ಉಮ್‌ದತುಲ್ ಖಾರಿ ಶರಹ್ ಸಹೀಹ್ ಅಲ್‌ಬುಖಾರಿ ಸಂಪುಟ–12, ಪುಟ–204, ದಾರ್ ಅಹ್ಯಾ ಉತ್ತುರಾಸುಲ್ ಅರಬಿ ಬೈರೂತ್ 2003)

ಹಜ್ರತ್ ಸಅದ್ ಬಿನ್ ಉಬಾದ(ರ)ರ ತಾಯಿ ಹಜ್ರತ್ ಹಮ್‌ರ ಬಿನ್ತ್ ಮಸ್‌ಊದ್ ನಿಧನ ಹೊಂದಿದ ಸಮಯದಲ್ಲಿ ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ದೂಮತುಲ್ ಜಿಂದಲ್ ಯುದ್ಧಕ್ಕೆ ಹೋಗಿದ್ದರು. ಈ ಯುದ್ಧ ಹಿಜರಿ ವರ್ಷ 5 ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆಯಿತು. ಹಜ್ರತ್ ಸಅದ್ ಈ ಯುದ್ದದಲ್ಲಿ ಅವರ ಜೊತೆ ಸವಾರರಾಗಿದ್ದರು.

ಸಯೀದ್ ಬಿನ್ ಮುಸಯ್ಯಿಬ್(ರ) ಅವರು ವರದಿ ಮಾಡುತ್ತಾರೆ ಹಜ್ರತ್ ಸಅದ್(ರ) ಹೇಳಿದರು: ನನ್ನ ತಾಯಿ ನಿಧನ ಹೊಂದಿದಾಗ ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಹೊರ ಇದ್ದರು. ಸಅದ್ ಹೇಳುತ್ತಾರೆ ನನ್ನ ತಾಯಿ ನಿಧನ ಹೊಂದಿದರು. ನನ್ನ ಆಸೆ ತಾವು ನಮಾಝು ಜನಾಝು ನಿರ್ವಹಿಸಬೇಕೆಂದಾಗಿದೆ. ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನಾಝು ನಮಾಝ್ ನಿರ್ವಹಿಸಿದರು. ಆ ಸಮಯದಲ್ಲಿ ಹಜ್ರತ್ ಸಅದ್‌ರ ತಾಯಿ ಮೃತರಾಗಿ ಒಂದು ತಿಂಗಳು ದಾಟಿ ಹೋಗಿತ್ತು. ಹಜ್ರತ್ ಸಈದ್ ಬಿನ್ ಮುಸಯ್ಯಿಬ್ ವರದಿ ಮಾಡುತ್ತಾರೆ: ಹಜ್ರತ್ ಸಅದ್ ಬಿನ್ ಉಬಾದ(ರ) ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನನ್ನ ತಾಯಿ ವಸಿಯ್ಯತ್ ಮಾಡಿರಲಿಲ್ಲ. ನಾನು ಅವರ ಪರವಾಗಿ ಸದಖ ನೀಡಿದರೆ ಅದು ಅವರಿಗೆ ಪ್ರಯೋಜನಕರವಾಗುವುದೇ? ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹೌದು ಪ್ರಯೋಜನಕರವಾಗುವುದು. ಹಜ್ರತ್ ಸಅದ್ ಕೇಳಿದರು: ಯಾವ ವಸ್ತುವಿನ ಸದಖ ತಮಗೆ ಹೆಚ್ಚು ಪ್ರಿಯವಾಗಿದೆ. ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀರು ಕುಡಿಸುವ ವ್ಯವಸ್ಥೆ ಮಾಡಿರಿ. (ಅತ್ತಬಖಾತುಲ್‌ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–461–462, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಆಗ ನೀರಿನ ಅವಶ್ಯಕತೆ ಇದ್ದಿರಬಹುದು. ಒಂದು ವರದಿಯ ಪ್ರಕಾರ ಹಜ್ರತ್ ಸಅದ್ ಒಂದು ಬಾವಿಯನ್ನು ತೋಡಿ ಹೇಳಿದರು: ಇದು ಉಮ್ಮು ಸಅದ್‌ಗೋಸ್ಕರವಾಗಿದೆ.

ಅಲ್ಲಾಮ ಅಬೂ ತಯ್ಯಿಬ್ ಶಮ್ಸುಲ್ ಹಖ್ ಅಝೀಮಾಬಾದಿ, ಅಬೂ ದಾಊದ್ ಹದೀಸು ಗ್ರಂಥದ ವ್ಯಾಖ್ಯಾನದಲ್ಲಿ ಹೀಗೆ ಬರೆದಿದ್ದಾರೆ: ಹಜ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಎಲ್ಲದಕ್ಕಿಂತಲೂ ಉತ್ತಮ ಸದಖ ನೀರು ಒದಗಿಸುವುದಾಗಿದೆ ಎಂದು ಹೇಳಲು ಕಾರಣ ಆ ಕಾಲದಲ್ಲಿ ನೀರು ಬಹಳ ಕಡಿಮೆ ದೊರಕುತ್ತಿತ್ತು. ನೀರನ್ನು ಸದಖವಾಗಿ ನೀಡುವುದು ಅತ್ಯುತ್ತಮ ಸದಖ ಎಂದು ಹೇಳಿದುದರ ಇನ್ನೊಂದು ಕಾರಣವೇನೆಂದರೆ ಧಾರ್ಮಿಕ ಮತ್ತು ಲೌಕಿಕ ಕಾರ್ಯಗಳಿಗೆ ಇತರ ಎಲ್ಲಾ ವಸ್ತುಗಳಿಗಿಂತ ಹೆಚ್ಚು ಪ್ರಯೋಜನಕರವಾದ ವಸ್ತು ನೀರು ಆಗಿದೆ. ವಿಶಿಷ್ಟವಾಗಿ ಶುಷ್ಕ ವಾತಾವರಣದ ದೇಶಗಳಲ್ಲಿ. ಮದೀನದಲ್ಲಿ ಸೆಖೆಯ ತೀವ್ರತೆ, ಆವಶ್ಯಕತೆಗನುಸಾರವಾಗಿ ನೀರು ದೊರಕದೆ ಇದ್ದುದು ಮೊದಲಾದ ಕಾರಣಗಳಿಂದ ನೀರು ಬಹಳ ಬೆಲೆ ಬಾಳುವಂತಹದೆಂದು ಗಣಿಸಲ್ಪಡುತ್ತಿತ್ತು. ಆದ್ದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು **ವನ್‌ಜಲ್‌ನ ಮಿನಸ್ಸಮಾಯಿ ಮಾಅ ತುಹೂರ** ಅಂದರೆ ನಾವು ಆಕಾಶದಿಂದ ಶುದ್ಧ ನೀರನ್ನು ಇಳಿಸಿದ್ದೇವೆ. ಅಲ್ಲಿ ಮದೀನದಲ್ಲಿ ನೀರು ಬಹಳ ಅಮೂಲ್ಯವೆಂದು ಗಣಿಸಲಾಗುತ್ತಿತ್ತು. ಬಿಸಿಲಿನ ತೀವ್ರತೆಯ ಕಾರಣ ಹಾಗೂ ನೀರು ಬಹಳ ಕಮ್ಮಿ ಸಿಗುವ ಕಾರಣದಿಂದ ನೀರು ಬಹಳ ಅಮುಲ್ಯವಾಗಿತ್ತು. (ಔನುಲ್‌ಮಅ್‌ಬುದ್ ಶರಹ್ ಸನನ್ ಅಬುದಾಊದ್ ಸಂಪುಟ–3, ಪುಟ–65–66, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಪ್ರಸ್ತುತ ಕಾಲದಲ್ಲಿಯು ಸರಕಾರಗಳು ಸಹ ಅದರ ಬಗ್ಗೆ ಶ್ರದ್ಧೆ ನೀಡಲು ಗಮನ ಹರಿಸುತ್ತಾ ಇರುತ್ತವೆ.

ಹಜ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಜ್ರತ್ ಸಅದ್ ಬಿನ್ ಉಬಾದ(ರ) ಅವರ ತಾಯಿ ನಿಧನ ಹೊಂದಿದಾಗ ನಾನು ಅವರೊಂದಿಗೆ ಇದ್ದೆ ಅವರು ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ಯಾ ರಸೂಲುಲ್ಲಾ! ನನ್ನ ತಾಯಿ ನಿಧನ ಹೊಂದಿದಾಗ ನಾನು ಅವರ ಬಳಿ ಇರಲಿಲ್ಲ ನಾನು ಹಿಂದಿರುಗಿ ಬಂದ ನಂತರ ಇದರ ಬಗ್ಗೆ ತಿಳಿಯಿತು. ನಾನು ನನ್ನ ತಾಯಿಯ ಪರವಾಗಿ ಏನಾದರೂ ಸದಖ ನೀಡಿದರೆ ಅದ ಫಲ ಅವರಿಗೆ ಲಭಿಸುವುದೇ? ಹಜ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೌದು ಎಂದು ಹೇಳಿದರು: ಆಗ ಹಜ್ರತ್ ಸಅದ್ ಹೇಳಿದರು: ನನ್ನ ಮುಖ್‌ರಾಫ್ ಎಂಬ ತೋಟವನ್ನು ನನ್ನ ತಾಯಿಗೋಸ್ಕರ ನಾನು ಸದಖವಾಗಿ ನೀಡುತ್ತೇನೆ. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ವಸಾಯ, ಹದೀಸ್–2762)

ಸದಖ ಮತ್ತು ಬಡವರಿಗೆ ಸಹಾಯ ಮಾಡುವುದರಲ್ಲಿ ವಿಶಾಳ ಹೃದಯವುಳ್ಳವರಾಗಿದ್ದರು. ಇನ್ನಷ್ಟು ಅವರ ಬಗ್ಗೆ ವಿವರಿಸಲಿಕ್ಕಿದೆ. **ಇನ್‌ಶಾಅಲ್ಲಾಹ್** ಮುಂದೆ ವಿವರಿಸುವೆನು.

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಂದು ನಮ್ಮ ಅಸ್ತಿತ್ವಕ್ಕಿಂತಲೂ ಮುಂಚೆ ನಮ್ಮ ಅಗತ್ಯಗಳಿಗೆ ಅನುಗುಣವಾಗಿ ಪ್ರಾಥಮಿಕ ಹಂತವಾಗಿ ಸೃಷ್ಟಿಸಿದ್ದಾನೆ. ಅದು ನಮ್ಮ ಸೇವೆಯಲ್ಲಿ ನಿರತವಾಗಿವೆ. ನಮ್ಮ ಈ ಎಲ್ಲಾ ಬೇಡಿಕೆಗಳು ಪ್ರಾರ್ಥನೆಯ ಮುಂಚಿತವಾಗಿ ರಹ್ಮಾನಿಯತ್ ಗುಣದಿಂದಾಗಿ ಲಭಿಸಿದೆ.

ಇನ್ನೊಂದು ರೀತಿಯ ಕರುಣೆ **"ರಹೀಮಿಯತ್"** ಆಗಿದೆ. ಅರ್ಥಾತ್ ನಾವು ಪ್ರಾರ್ಥಿಸಿದಾಗ ಅಲ್ಲಾಹನು ನಮಗೆ ನೀಡುತ್ತಾನೆ. ವಿಚಾರಿಸಿ ನೋಡಿದರೆ ತಿಳಿದುಬರುವುದೇನಂದರೆ ದೈವಿಕ ನಿಯಮಗಳ ಸಂಬಂಧವು ಪ್ರಾರ್ಥನೆಯೊಂದಿಗೆ ಇದೆ. ಕೆಲವು ಇಂದು ಇದನ್ನು ಬಿದ್‌ಅತ್ ಎನ್ನುತ್ತಾರೆ. ನಮ್ಮ ಪ್ರಾರ್ಥನೆಗಳ ಸಂಬಂಧ ಯಾವ ರೀತಿ ಅಲ್ಲಾಹನೊಡನೆ ಸಂಬಂಧಪಟ್ಟಿದ್ದಾಗಿದೆ ಎಂದು ಕುರಿತು ಹೇಳುವೆನು.

ಓರ್ವ ಕೂಸು ಹಸಿವಿನಿಂದ ಬಳಲಿ ಹಾಲಿಗೋಸ್ಕರ ಅಳುತ್ತದೆ ಮತ್ತು ಆ ಕೂಸಿನ ಚೀರಿಕೊಂಡಾಗ ತಾಯಿಯ ಎದೆಯಿಂದ ಹಾಲು ಉಕ್ಕಿ ಬರುತ್ತದೆ. ಮಗುವಿಗೆ ಪ್ರಾರ್ಥನೆ ಏನೆಂಬುದೇ ತಿಳಿದಿರುವುದಿಲ್ಲ. ಆದರೆ ಅವನ ಚೀರುವಿಕೆ ಹಾಲನ್ನು ಹೇಗೆ ಸೆಳೆದುಕೊಳ್ಳುತ್ತದೆ? ಇದು ಎಲ್ಲರ ಅನುಭವದ ಮಾತಾಗಿದೆ. ಕೆಲವೊಮ್ಮೆ ತಾಯಿಯವರಿಗೆ ಅನುಭೂತಿಯೇ ಇರುವುದಿಲ್ಲ. ಆದರೆ ಮಗುವಿನ ಚೀರುವಿಕೆ ಹಾಲನ್ನು ಸೆಳೆಯುತ್ತದೆ. ಹೀಗಿರುವಾಗ ನಾವು ದೇವರ ಮುಂದೆ ಅಳಲು ತೋಡಿಕೊಂಡಾಗ ಏನು ಸೆಳೆಯಲು ಸಾಧ್ಯವಿಲ್ಲವೇ? ಬರುತ್ತದೆ. ಎಲ್ಲವು ದೊರೆಯುತ್ತದೆ. ಆದರೆ ಕಣ್ಣಿದ್ದು ಕಾಣದಂತೆ ಕುರುಡರ ಹಾಗೆ ಕುಳಿತಿರುವಂತಹ ತತ್ವಜ್ಞಾನಿಗಳು ಕಾಣುವುದಿಲ್ಲ. ತಾಯಿ ಮಗುವಿನ ಈ ಸಂಬಂಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಮನುಷ್ಯನು ಪ್ರಾರ್ಥನೆಯ ಅಗತ್ಯ ತಿಳಿಯಬಹುದಾಗಿದೆ. ಎರಡನೆ ರೀತಿಯು ಈ ಕರುಣೆ ನಮಗೆ ತಿಳಿಯಪಡಿಸುವುದೇನೆಂದರೆ, ಒಂದು ಕರುಣೆ ಬೇಡಿಕೆಯ ನಂತರ ಉತ್ಪನ್ನವಾಗುತ್ತದೆ. ಬೇಡಿದರೆ ಪಡೆಯುವಿರಿ **"ಉದ್‌ವೂನಿ ಅಸ್ತಜಿಬ್ ಲಕುಮ್"** (ಅಲ್‌ಮೋಯಿನ್–61) ಇದು ವಾದಪ್ರತಿವಾದವಲ್ಲ. ಬದಲಾಗಿ ಮನುಷ್ಯನ ಸಹಜ ಪ್ರವೃತ್ತಿಯ ಒಂದು ಅಂಗವಾಗಿದೆ.

**(ಮಲ್ಫೂಝಾತ್ ಸಂಪುಟ–1, ಪುಟ–109 ರಿಂದ 111, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 15ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

ನೆಷ್ನಲ್ ಮಜ್ಲಿಸ್ ಆಮೀಲದ ಈ ಸಭೆಯು ಮಧ್ಯಾಹ್ನ ಒಂದು ಗಂಟೆಗೆ ಮುಗ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಹುಝೂರ್(ಅ.ಬಿ.ಅ.) ರೊಡನೆ ಭಾವಚಿತ್ರ(ಫೋಟೊ) ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರ್(ಅ.ಬಿ.ಅ.) ಅವರೊಡನೆ ನೆಷ್ನಲ್ ಮಜ್ಲಿಸ್ ಆಮೀಲ ಖುದ್ದಾಮುಲ್ ಅಹ್ಮದಿಯಾ ಹಾಲೆಂಡ್ ಇವರ ಸಭೆ (Meeting) ಕಾರ್ಯಕ್ರಮಗಳನ್ವಯ ನ್ಯಾಷ್ನಲ್ ಮಜ್ಲಿಸ್ ಆಮೀಲ ಖುದ್ದಾಮುಲ್ ಅಹ್ಮದಿಯಾ ಹಾಲೆಂಡ್ ಅವರ ಹುಝೂರ್(ಅ.ಬಿ.ಅ.) ಅವರ ಜೊತೆ ಸಭೆ ದುಆದೊಂದಿಗೆ ಪ್ರಾರಂಭಗೊಂಡಿತು.

ಹುಝೂರ್(ಅ.ಬಿ.ಅ.) ರವರ ಪ್ರಶ್ನೆಗೆ ಉತ್ತರಿಸುತ್ತಾ ಮೊತಮಿದ್ ಹೇಳಿದರು. ನಮ್ಮಲ್ಲಿ 10 ಮಜಾಲಿಸ್‌ಗಳಿವೆ. 370 ತಜ್‌ನೀದ್ ಇದೆ. ಮತ್ತು ನಮ್ಮ ಎಲ್ಲ ಮಜಾಲಿಸ್‌ಗಳಿಂದ ವರದಿಗಳು ಬರುತ್ತಿವೆ.

ಮುಹತಮಿಮ್ ತರ್‌ಬಿಯತ್ ಅವರಿಗೆ ಹುಝಾರ್ ಕೇಳಿದರು. ತಮ್ಮ ಕಾರ್ಯಕ್ರಮವೇನದೆ. ಒಂದು ವರ್ಷದಲ್ಲಿ ಎಷ್ಟು Target ಸಾಧಿಸಿದ್ದೀರಿ. ಒಂದು ವರ್ಷದಲ್ಲಿ ಎಷ್ಟು ಜನರನ್ನು ಜಮಾಅತ್ ಸಹಿತ ನಮಾಝ್ ನಿರ್ವಹಿಸುವಂತೆ ಮಾಡಿದ್ದೀರಿ. ಆಗ ಅವರು ಹೇಳಿದರು. 40% ಖುದ್ದಾಮ್ ಒಂದು ನಮಾಝ್ ಜಮಾಅತ್‌ಸಹಿತ ನಿರ್ವಹಿಸುತ್ತಾರೆ. ಆಗ ಹುಝಾರ್ ಹೇಳಿದರು. ತಮ್ಮ ನೆಷ್ನಲ್ ಆಮೀಲ ಮತ್ತು ಸ್ಥಳೀಯ ಮಜಾಲಿಸಿನ ಆಮೀಲವನ್ನು ಜಮಾಅತ್ ಸಹಿತ ನಮಾಝ್ ಮಾಡುವಂತೆ ಮಾಡಿರಿ. ಬಾಕಿ ಎಲ್ಲ ತಂತಾನೆ ಸುಧಾರಿಸುವುದು.

ಹುಝೂರ್(ಅ.ಬಿ.ಅ.) ಹೇಳಿದರು. ನಿಮ್ಮ ನ್ಯಾಷ್ನಲ್ ಆಮೀಲ ಮತ್ತು ಸ್ಥಳೀಯ ಮಜಾಲಿಸಿನ ಆಮಿಲಾ ಸದಸ್ಯರೆಲ್ಲ ಸೇರಿ ಸಂಖ್ಯೆ 100 ಆಯಿತು. ಇವರೆಲ್ಲರೂ ಜಮಾಅತ್ ಸಹಿತ ನಮಾಝ್ ನಿರ್ವಹಿಸುವವರಾದರೆ ಸಂಖ್ಯೆ 100 ಆಗುತ್ತದೆ ಈ ನೂರು ಜನರನ್ನು ನೋಡಿ ಇನ್ನೂ 50, 60 ಜನರು ಬಂದು ಸೇರಬಹುದು. ಆಗ ನೀವು 40 ಪ್ರತಿಶತ ಸಮೀಪಕ್ಕೆ ತಲುಪುವಿರಿ. ಮತ್ತು ನಿಧಾನವಾಗಿ 50% 60% ಆಗಬಹುದು.

ಹುಝೂರೆ ಅನ್ವರ್ ಹೇಳಿದರು. ಎಷ್ಟೆಲ್ಲ ಮುಬಲ್ಲಿಗ್‌ರಿದ್ದಾರೆ. ಅವರು ಖುದ್ದಾಮರಿಗೆ ನಮಾಝ್ ನಿರ್ವಹಿಸುವ ಕಡೆ ಗಮನವಹಿಸುವಂತೆ ಹೇಳಬೇಕು.

**(ಮುಂದುವರಿಯುವುದು)**

# ಜುಮುಅ ಖುತ್‌ಬ

"ಅಲ್ಲಾಹನನ್ನು ಪ್ರೀತಿಸುವವನು ಭಾಗ್ಯಶಾಲಿಯಾಗಿದ್ದಾನೆ."

**ವಕ್ಫೇ ಜದೀದಿನ 62ನೇ ವರ್ಷದಲ್ಲಿ ವಿಶ್ವದಾದ್ಯಂತ ಅಹ್ಮದಿಯ ಜಮಾಅತ್ 96 ಲಕ್ಷ 43 ಸಾವಿರ ಪೌಂಡ್ ಚಂದವಾಗಿ ತ್ಯಾಗ ನೀಡಿದಾದೆರ.**

**ಕೇವಲ ಧನ ಸಂಗ್ರಹ ಮಾಡುವುದು ಚಂದದ ಉದ್ದೇಶವಲ್ಲ. ಅಲ್ಲಾಹನ ಪ್ರೀತಿ ಗಳಿಸಲು ಅವನ ಧರ್ಮಕ್ಕೋಸ್ಕರ ಖರ್ಚು ಮಾಡುವುದೇ ಉದ್ದೇಶವಾಗಿದೆ.**

**ಹೊಸದಾಗಿ ಜಮಾಅತಿಗೆ ಪ್ರವೇಶಿಸುವವರನ್ನು ನಮ್ಮ ಜಮಾಅತಿನ ಆರ್ಥಿಕ ವ್ಯವಸ್ಥೆಯಲ್ಲಿ ನಿಶ್ಚಯವಾಗಿಯೂ ಸೇರಿಸಬೇಕು**

**ಓರ್ವ ವ್ಯಕ್ತಿ ತಾನು ತೊಂದರೆಯಲ್ಲಿ ಇದ್ದು, ಬಡತನವಿದ್ದರೂ ಅಲ್ಲಾಹನ ಸಂಪ್ರೀತಿಗಳಿಸುವ ಉದ್ದೇಶದಿಂದ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ತ್ಯಾಗ ಮಾಡುವುದು ನಿಜವಾದ ತ್ಯಾಗವಾಗಿದೆ ಇದು ಅಲ್ಲಾಹನ ಸಂಪ್ರೀತಿಗಳಿಸುವ ಮಾರ್ಗವಾಗಿದೆ.**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಂತೆಂತಹ ಜನರನ್ನು ಅಲ್ಲಾಹನು ನೀಡಿದನೆಂದರೆ ಅವರು ಅಲ್ಲಾಹನ ಪ್ರೀತಿಯನ್ನು ಗಳಿಸಲು ಪ್ರತಿಯೊಂದು ರೀತಿಯ ತ್ಯಾಗ ಮಾಡಲು ಸಿದ್ಧರಾಗಿದ್ದರು.**

**ಅಲ್ಲಾಹನ ಮಾರ್ಗದಲ್ಲಿ ನಿಷ್ಠೆಯಿಂದ ನೀಡಿದ ಕಮ್ಮಿ ಪ್ರಮಾಣದಲ್ಲಿದ್ದರೂ ಸಹ ಅಲ್ಲಾಹನು ಅದನ್ನು ಸ್ವೀಕರಿಸಿ ಅದನ್ನು ಅನೇಕ ಪಟ್ಟು ಹೆಚಾಗಿ ಮರಳಿ ಪಾವತಿಸುತ್ತಾನೆ.**

**ಈ ಘಟನೆಗಳು ಬೇರೆ ಬೇರೆ ಪ್ರದೇಶಗಳದ್ದಾಗಿದೆ, ಆಫ್ರಿಕಾ, ಅಮೇರಿಕಾ, ಯುರೋಪ್, ದಕ್ಷಿಣ. ಉತ್ತರ ಭಾಗಗಳಿಂದ ಇವೆ ಅವರ ಸಂಬಂಧವೂ ಏನೂ ಇಲ್ಲದಿದ್ದರೂ ಘಟನೆಗಳು ಒಂದಕ್ಕೊಂದು ಹೋಲುತ್ತದೆ.**

**ಇದು ಸಾಮಾನ್ಯವಾದ ಮಾತುಗಳಲ್ಲ ಇದು ಅಲ್ಲಾಹನ ಮೇಲೆ ದೃಢ ನಂಬಿಕೆ ಇರಿಸುವವರೊಂದಿಗೆ ಅಲ್ಲಾಹನ ವರ್ತನೆ ಆಗಿದೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯತೆಗೆ ಸಾಕ್ಷಿಯಾಗಿದೆ.**

"ವಕ್ಫೇ ಜದೀದಿನ ಹೊಸ ವರ್ಷದ ಸುವರ್ಣ ಸಂದರ್ಭದಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಸಾಂಪತ್ತಿಕ ತ್ಯಾಗಗಳ ಪ್ರಸ್ತಾವನೆ."

**ಮಕ್ಕಳಾಗಲಿ, ಹಿರಿಯರಾಗಲಿ, ಹೊಸ ಅಹ್ಮದಿ ಆಗಲಿ ಅಥವಾ ಹಳೆಯ ಅಹ್ಮದಿ ಆಗಲಿ ಅವರೆಲ್ಲರಿಗೂ ಅಲ್ಲಾಹನ ಸಾಮಿಪ್ಯಗಳಿಸಬೇಕಾದರೆ ಅದಕ್ಕಿರುವ ಒಂದೇ ದಾರಿ ಅದು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಮಾತ್ರ ಎಂದು ತಿಳಿದಿದೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ **03–01–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಖ್‌ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಶ್ರೇಷ್ಠ ಕೃತಿಯಾದ 'ಇಸ್ಲಾಮೀ ಉಸೂಲ್ ಕಿ ಫಿಲಾಸಫಿ' (ಇಸ್ಲಾಮ್ ಧರ್ಮ ತತ್ವಜ್ಞಾನ) ಎಂಬ ಗ್ರಂಥದಲ್ಲಿ ಅಲ್ಲಾಹನನ್ನು ಗಳಿಸಲು, ಅವನನ್ನು ಗುರುತಿಸಲು, ಅವನ ಬಗ್ಗೆ ವಿಶ್ವಾಸವನ್ನು ಬಲಿಷ್ಠಗೊಳಿಸಲು ಎಂಟು ಮಾರ್ಗಗಳನ್ನು ವಿವರಿಸಿದ್ದಾರೆ. ಅವು ಮನುಷ್ಯನ ಸೃಷ್ಟಿಯ ಉದ್ದೇಶವನ್ನು ಈಡೇರಿಸುವಂತಹಗಳು ಸಹ ಆಗಿವೆ. ಈಗ ನಾನು ಅವುಗಳ ಪೈಕಿ ಒಂದು ಮಾರ್ಗದ ಬಗ್ಗೆ ಉಲ್ಲೇಖಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಗುರಿ ಸಾಧನೆಯ ಐದನೆಯ ಮಾರ್ಗ ಮುಜಾಹಿದ (ಧರ್ಮಕಾರ್ಯಕ್ಕಾಗಿ ಪರಿಶ್ರಮ) ಆಗಿದೆ. ಅಂದರೆ ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು, ತಮ್ಮ ಶಕ್ತಿಯನ್ನು, ತಮ್ಮ ಜೀವವನ್ನು ಹಾಗೂ ತಮ್ಮ ಯೋಚನೆಗಳನ್ನು ಖರ್ಚು ಮಾಡುವುದಾಗಿದೆ. ಅಲ್ಲಾಹನು ಹೇಳುತ್ತಾನೆ: **ವ ಜಾಹಿದೂ ಬಿ ಅಮ್‌ವಾಲಿಕುಮ್ ವ ಅನ್‌ಫುಸಿಕುಮ್ ಫೀ ಸಬೀಲಿಲ್ಲಾಹಿ– (ಅತ್ತೌಬ:41)** ಅಲ್ಲಾಹನ ಮಾರ್ಗದಲ್ಲಿ ನಿಮ್ಮ ಸಂಪತ್ತಿನಿಂದಲೂ ದೇಹದಿಂದಲೂ ಹೋರಾಡಿರಿ. **ವಮಿಮ್ಮಾ ರಝಖ್‌ನಾಹುಮ್ ಯುನ್‌ಫಿಖೂನ್** (ಅಲ್‌ಬಖರ: 4) ಅವರಿಗೆ ನಾವು ಏನನ್ನು ನೀಡಿರುವೆವೋ ಅದರಿಂದ ಅವರು ಖರ್ಚು ಮಾಡುತ್ತಾರೆ. **ವಲ್ಲಝೀನ ಜಾಹದೂ ಫೀನಾ ಲನಹ್‌ದಿಯನ್ನಹುಮ್ ಸುಬುಲುನಾ–** (ಅಲ್‌ಅನ್‌ಖಬೂತ್:70) ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಮಾಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ಎಂದರೆ ನಿಮ್ಮ ಸಂಪತ್ತು, ನಿಮ್ಮ ಜೀವ ಮತ್ತು ನಿಮ್ಮ ದೇಹ ಇವುಗಳನ್ನು ಅವುಗಳ ಎಲ್ಲಾ ಶಕ್ತಿಗಳೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ. ನಿಮಗೆ ನಾವು ನೀಡಿದ ಬುದ್ಧಿ, ಜ್ಞಾನ, ತಿಳುವಳಿಕೆ, ನೈಪುಣ್ಯತೆ ಮೊದಲಾದುವುಗಳನ್ನೆಲ್ಲಾ ಅಲ್ಲಾಹನ ಮಾರ್ಗದಲ್ಲಿ ವಿನಿಯೋಗಿಸಿರಿ. ಯಾರು

ನಮ್ಮ ಮಾರ್ಗದಲ್ಲಿ ಪ್ರತಿಯೊಂದು ರೀತಿಯಲ್ಲಿ ಪ್ರಯತ್ನ ಮಾಡುತ್ತಾರೋ ಅಂತಹ ಜನರಿಗೆ ನಮ್ಮ ಮಾರ್ಗಗಳನ್ನು ತೋರಿಸಿಕೊಡುತ್ತೇವೆ ಎಂದು ಅಲ್ಲಾಹನು ಹೇಳುತ್ತಾನೆ. (ಇಸ್‌ಲಾಮಿ ಉಸೂಲ್ ಕಿ ಫಿಲಾಸಫಿ, ರೂಹಾನಿ ಖಝಾಯೀನ್, ಸಂಪುಟ–10, ಪುಟ–418–419)

ಅಲ್ಲಾಹನ ಪ್ರೀತಿಯನ್ನು ಗಳಿಸುವ ವಿಧಾನವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳಿದರು:

"ನೀವು ಸಂಪತ್ತನ್ನೂ ಅಲ್ಲಾಹನನ್ನೂ ಒಟ್ಟಿಗೆ ಪ್ರೀತಿಸಲು ಸಾಧ್ಯವಿಲ್ಲ. ಕೇವಲ ಒಂದರಿಂದ ಮಾತ್ರ ಪ್ರೀತಿಸಲು ಸಾಧ್ಯ. ಅಲ್ಲಾಹನನ್ನು ಪ್ರೀತಿಸುವವನು ಭಾಗ್ಯಶಾಲಿಯಾಗಿದ್ದಾನೆ. ನಿಮ್ಮ ಪೈಕಿ ಯಾರಾದರೂ ಅಲ್ಲಾಹನನ್ನು ಪ್ರೀತಿಸಿ ಅವನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುವುದಾದರೆ, ನಾನು ದೃಢವಾಗಿ ನಂಬುತ್ತೇನೆ, ಅವನ ಸಂಪತ್ತಿನಲ್ಲಿ ಇತರರಿಗಿಂತ ಹೆಚ್ಚು ಅನುಗ್ರಹ ನೀಡಲ್ಪಡುವುದು. ಏಕೆಂದರೆ ಸಂಪತ್ತು ತಾನಾಗಿ ಬರುವುದಿಲ್ಲ. ಆದುದರಿಂದ ಯಾರು ಅಲ್ಲಾಹನಿಗೋಸ್ಕರ ತನ್ನ ಸಂಪತ್ತಿನ ಒಂದು ಭಾಗ ನೀಡುತ್ತಾನೋ ಅವನು ಖಂಡಿತವಾಗಿಯೂ ಅದನ್ನು ಮರಳಿ ಪಡೆಯುವನು. ಆದರೆ ಯಾರು ಸಂಪತ್ತನ್ನು ಪ್ರೀತಿಸಿ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಸೇವೆ ಸಲ್ಲಿಸಲು ಖರ್ಚು ಮಾಡಬೇಕಾದ ರೀತಿಯಲ್ಲಿ ಖರ್ಚು ಮಾಡುವುದಿಲ್ಲವೋ ಅವನು ಖಂಡಿತವಾಗಿ ತನ್ನ ಸಂಪತ್ತನ್ನು ಕಳೆದುಕೊಳ್ಳುವನು. (ಮಜ್‌ಮುಆ ಇಶ್ತಿಹಾರಾತ್, ಸಂಪುಟ–3, ಪುಟ–497)

ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಪ್ರತಿಜ್ಞೆ ಮಾಡಬೇಕು, ನಾನು ಇಷ್ಟು ಚಂದ ಕೊಡುವೆನು ಎಂದು. ಅಲ್ಲಾಹನಿಗೋಸ್ಕರ ಪ್ರತಿಜ್ಞೆ ಮಾಡುವವನ ಜೀವನಾಧಾರದಲ್ಲಿ ಅಲ್ಲಾಹನು ಅನುಗ್ರಹ ನೀಡುತ್ತಾನೆ. (ಮಲ್‌ಫೂಝಾತ್ ಸಂಪುಟ–6, ಪುಟ–41)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಗಮನ ಸೆಳೆಯುವುದೇನೆಂದರೆ, ಯಾವ ವ್ಯಕ್ತಿಗೆ ಇತ್ತ ಕಡೆ ಗಮನವಿಲ್ಲವೊ, ಹೊಸದಾಗಿ ಸೇರ್ಪಡೆ ಆಗುವವರು ಗಮನಹರಿಸುವುದಿಲ್ಲವೊ ಅವರಿಗೆ ಕೆಲವೊಮ್ಮೆ ಸಾಂಪತ್ತಿಕ ತ್ಯಾಗದ ಬಗ್ಗೆ ತಿಳಿ ಹೇಳುವ ಅವಶ್ಯಕತೆ ಇದೆ ಅವರಿಗೆ ತಿಳಿಸಬೇಕಾದ ವಿಷಯುವೇನೆಂದರೆ ನೀವು ಅಲ್ಲಾಹನಲ್ಲಿ ನಿಜವಾದ ಸಂಬಂಧ ಇರಿಸುವವರಾಗಿದ್ದರೆ ನೀವು ಅಲ್ಲಾಹನ ಮಾರ್ಗದಲ್ಲಿ ಇಂತಿಷ್ಟು ಚಂದ ನೀಡುವೆನು ಎಂದು ಅವನಲ್ಲಿ ನಿಜವಾದ ಪ್ರತಿಜ್ಞೆ ಮಾಡಿಕೊಳ್ಳಿರಿ. ಅಲ್ಲಾಹನ ಅನುಗ್ರಹದಿಂದ ಲಕ್ಷಾಂತರ ಜನರು ಹೇಗಿದ್ದಾರೆಂದರೆ, ಅವರ ಗಮನವನ್ನು ಚಂದ ಕೊಡುವುದರ ಮಹತ್ವದ ಕಡೆಗೆ ಹರಿಯಿಸಿದಾಗ ಅವರು ಅಲ್ಲಾಹನ ಪ್ರೀತಿ ಗಳಿಸಲು ಸಾಂಪತ್ತಿಕ ತ್ಯಾಗದಲ್ಲಿ ಮುಂದೆ ಸಾಗಲು ಪ್ರಯತ್ನಿಸುತ್ತಿದ್ದಾರೆ. ಇದೇ ಕಾರಣದಿಂದ ನಾನು ಕಳೆದ ಕೆಲವು ವರ್ಷಗಳಿಂದ ನಮ್ಮ ಜಮಾಅತಿನ ನಿಝಾಮ್‌ನೊಂದಿಗೆ ಹೇಳುತ್ತಾ ಇದ್ದೇನೆ, ಹೊಸದಾಗಿ ಜಮಾಅತಿಗೆ ಪ್ರವೇಶಿಸುವವರನ್ನು ನಮ್ಮ ಜಮಾಅತಿನ ಆರ್ಥಿಕ ವ್ಯವಸ್ಥೆಯಲ್ಲಿ ನಿಶ್ಚಯವಾಗಿಯೂ ಸೇರಿಸಬೇಕು ಎಂದು. ಒಬ್ಬನಿಗೆ ಕೇವಲ ಒಂದು ಪೆನ್ಸ್ ಮಾತ್ರ ನೀಡಲು ಸಾಧ್ಯವಿದ್ದರೆ ಅವನು ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಚಂದ ನೀಡಲಿ. ಕೆಲವು ಸ್ಥಳಗಳಲ್ಲಿ ಹೀಗೆ ಸಹ ನೋಡಿದ್ದೇನೆ, ಕೆಲವು ಸಾರಿ ಆರ್ಥಿವಾಗಿ ಸಂಪನ್ನರಾಗಿರುವವರು ತಮ್ಮ ಬಡವರಾದ ಸಂಬಂಧಿಕರ ಪರವಾಗಿ ಚಂದ ನೀಡುತ್ತಾರೆ. ಇದು ಒಂದು ಸತ್ಕರ್ಮವೇ ಆಗಿದೆ. ಆದರೆ ಆ ಬಡ ಜನರು ಸಹ ಸ್ವತಃ ತಮ್ಮ ಆರ್ಥಿಕ ಸ್ಥಿತಿಗನುಸಾರವಾಗಿ ಚಂದದಲ್ಲಿ ಭಾಗವಹಿಸಬೇಕು. ಕೇವಲ ಧನ ಸಂಗ್ರಹ ಮಾಡುವುದು ಚಂದದ ಉದ್ದೇಶವಲ್ಲ. ಅಲ್ಲಾಹನ ಪ್ರೀತಿ ಗಳಿಸಲು ಅವನ ಧರ್ಮಕ್ಕೋಸ್ಕರ ಖರ್ಚು ಮಾಡುವುದೇ ಉದ್ದೇಶವಾಗಿದೆ. ಆದುದರಿಂದ ಚಂದವನ್ನು ಈ ರೀತಿ ವಸೂಲು ಮಾಡುವುದು ಎಂದರೆ ಒಬ್ಬನಿಂದ ವಸೂಲು ಮಾಡಿ ಇನ್ನೊಬ್ಬನ ಹೆಸರಿನಲ್ಲಿ ಹಾಕುವುದು ತಪ್ಪಾದ ಕ್ರಮವಾಗಿದೆ. ಕೆಲವು ಸಾರಿ ಇಂತಹ ವಿಷಯಗಳು ನನ್ನ ಗಮನಕ್ಕೆ ಬರುತ್ತವೆ.

ಸಾಮಾನ್ಯವಾಗಿ ನಾನು ನೋಡುತ್ತಿರುತ್ತೇನೆ ಅದಲ್ಲದೆ ಸಾಂಪತ್ತಿಕ ತ್ಯಾಗದ ಬಗ್ಗೆ ಬರುವ ವರದಿಗಳಲ್ಲಿ ವಿಶಿಷ್ಟವಾಗಿ ಕಾಣಿಸುವುದೇನೆಂದರೆ ಬಡ ಜನರು ಮಾಡಿದ ಸಾಂಪತ್ತಿಕ ತ್ಯಾಗಗಳ ಬಗ್ಗೆ ಹೆಚ್ಚು ಪ್ರಸ್ತಾಪಿಸಲ್ಪಡುತ್ತವೆ. ಅವರಿಗೆ ತಾವು ಸಾಂಪತ್ತಿಕ ತ್ಯಾಗ ಮಾಡುವ ಬಗ್ಗೆ ಹೆಚ್ಚಿನ ಆಸಕ್ತಿ ಕಾಣಿಸುತ್ತಾ ಇದೆ. ಅವರಿಗೆ ತಾವು ಸಾಂಪತ್ತಿಕ ತ್ಯಾಗ ಮಾಡಬೇಕೆಂದು ಬಹಳ ಉತ್ಸಾಹವಿರುತ್ತದೆ. ನಾನು ಸಾಮಾನ್ಯವಾಗಿ ಅದರ ಬಗ್ಗೆ ನನ್ನ ಖುತ್‌ಬಗಳಲ್ಲಿ ಪ್ರಸ್ತಾಪಿಸುತ್ತಿರುತ್ತೇನೆ. ಕೆಲವೊಮ್ಮೆ ಕೆಲವು ತ್ಯಾಗಗಳ ಬಗ್ಗೆ ಆಶ್ಚರ್ಯವಾಗುತ್ತದೆ. ಓರ್ವ ವ್ಯಕ್ತಿಯ ಹತ್ತಿರ ಸಾಕಷ್ಟು ಸಂಪತ್ತಿದೆ ಅದರಿಂದ ಅವನು ನೀಡಿದರೆ ಅದು ಅಷ್ಟು ಆಶ್ಚರ್ಯ ಎನಿಸುವುದಿಲ್ಲ. ಆದರೆ ಓರ್ವ ವ್ಯಕ್ತಿ ತಾನು ತೊಂದರೆಯಲ್ಲಿ ಇದ್ದು, ಬಡತನವಿದ್ದರೂ ಅಲ್ಲಾಹನ ಸಂಪ್ರೀತಿಗಳಿಸುವ ಉದ್ದೇಶದಿಂದ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ತ್ಯಾಗ ಮಾಡುವುದು ನಿಜವಾದ ತ್ಯಾಗವಾಗಿದೆ ಇದು ಅಲ್ಲಾಹನ ಸಂಪ್ರೀತಿಗಳಿಸುವ ಮಾರ್ಗವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿಯೂ ಇಂತಹ ಉದಾಹರಣೆಗಳು ಕಾಣಲು ಸಿಗುತ್ತವೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೆಲ ಪುಸ್ತಕಗಳನ್ನು ಪ್ರಕಟಿಸಲು ಸ್ವಲ್ಪ ಹಣದ ಆವಶ್ಯಕತೆ ತಲೆದೋರಿದಾಗ ಅವರು ತನ್ನ ಒಬ್ಬ ಸ್ನೇಹಿತರೊಂದಿಗೆ ತಮ್ಮ ಜಮಾಅತಿನಿಂದ ಆ ಹಣವನ್ನು ಸಂಗ್ರಹಿಸಿ ಕೊಡಲು ಹೇಳಿದರು. ಆದರೆ ಆ ಸ್ನೇಹಿತ ಅವರಿಗೆ ತೊಂದರೆ ಇದ್ದರೂ, ಬಡತನವಿದ್ದರೂ ಸ್ವತಃ ತನ್ನ ಕೈಯಿಂದ ಆ ಹಣ ನೀಡಿದರು ಹಾಗೂ ಆ ಹಣ ತನ್ನ ಜಮಾಅತಿನಿಂದ ಸಂಗ್ರಹಿಸಿ ನೀಡಲಾಯಿತೆಂಬ ಭಾವನೆ ಹುಟ್ಟುವಂತೆ ಮಾಡಿದರು. ಅದು ಆ ಸ್ನೇಹಿತ ಸ್ವತಃ ನೀಡಿದ ಹಣವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ತಿಳಿದಿರಲಿಲ್ಲ. ಆದರೆ ಆ ಜಮಾಅತಿನ ಇನ್ನೊಬ್ಬರೊಂದಿಗೆ ಕೃತಜ್ಞತೆ ಅರ್ಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಹೇಳಿದರು: ನಿಮ್ಮ ಜಮಾಅತಿನವರು ಆವಶ್ಯಕವಿದ್ದ ಸಂದರ್ಭದಲ್ಲಿ ಸಹಾಯ ನೀಡಿದರು. ಅದು ಬಹಳ ಉಪಕಾರವಾಯಿತು ಎಂದು ಹೇಳಿದರು. ಆ ಹಣವನ್ನು ಒಬ್ಬನೇ ನೀಡಿದರು ಎಂದು ತಿಳಿದಾಗ ಜಮಾಅತಿನ ಇತರರು ಕೋಪಗೊಂಡರು. ತಮಗೆ ಈ ಸೇವೆ ಮಾಡಲು ಏಕೆ ಅವಕಾಶ ನೀಡಲಿಲ್ಲ ಎಂದು ಅವರು ಅತೃಪ್ತರಾದರು. ಹೀಗೆ ಸ್ವತಃ ಹಣ ನೀಡಿದ ವ್ಯಕ್ತಿ ಮುನ್‌ಶೀ ಝಫರ್ ಅಹ್ಮದ್ ಸಾಹಿಬ್ ಆಗಿದ್ದರು. ಅವರು ತಮ್ಮ ಪತ್ನಿಯ ಆಭರಣವನ್ನು ಮಾರಿ ಆ ಹಣ ನೀಡಿದ್ದರು. ನಿಶ್ಚಯವಾಗಿಯೂ ಅವರ ಪತ್ನಿ ಸಹ ಈ ತ್ಯಾಗದಲ್ಲಿ ಸೇರಿದವರಾಗಿದ್ದಾರೆ. ಮುನ್‌ಶೀ ಅರೋಡೆ ಖಾನ್ ಸಾಹೇಬರು ಮುನ್‌ಶೀ ಝಫರ್ ಅಹ್ಮದ್ ಸಾಹೇಬರ ಸೇಹಿತರಾಗಿದ್ದರು ಅವರಿಗೆ ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮ್ ಅವರಿಂದ ಈ ವಿಷಯ ತಿಳಿದಾಗ ಅವರು ಮುನ್‌ಶಿ ಝಫರ್ ಅಹ್ಮದ್ ಸಾಹೇಬರೊಂದಿಗೆ ಎಷ್ಟೋ ತಿಂಗಳು ನಮಗೆ ಈ ವಿಷಯ ಏಕೆ ತಿಳಿಸಲಿಲ್ಲ ಅವರು ಸ್ವತಃ ಹಣ ಏಕೆ ನೀಡಿದ್ದರು ಎಂದು ಕೋಪಗೊಂಡಿದ್ದರು. (ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–97–98)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಂತೆಂತಹ ಜನರನ್ನು ಅಲ್ಲಾಹನು ನೀಡಿದನೆಂದರೆ ಅವರು ಅಲ್ಲಾಹನ ಪ್ರೀತಿಯನ್ನು ಗಳಿಸಲು ಪ್ರತಿಯೊಂದು ರೀತಿಯ ತ್ಯಾಗ ಮಾಡಲು ಸಿದ್ಧರಾಗಿದ್ದರು. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಸ್ಥಾಪಿಸಿದ ಉದಾಹರಣೆಗಳಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರು ಇಂದು ಆ ಉದಾಹರಣೆಗಳನ್ನು ಅನುಷ್ಠಾನಕ್ಕೆ ತಂದರು. ಇದು ಆ ಕಾಲಕ್ಕೆ ಸೀಮಿತವಾದ ಮಾತಲ್ಲ ಈಗ ಸಹ ಅಂತಹ ತ್ಯಾಗ ಜಾರಿಯಲ್ಲಿದೆ. ನಾವು ನೊಡುತ್ತೇವೆ ಜನರು ಹೇಗೆ ಬೇರೆ ಬೇರೆ ಯೋಜನೆಗಳಲ್ಲಿ ಭಾಗವಹಿಸಿ ಸಾಂಪತ್ತಿಕ ತ್ಯಾಗಗಳನ್ನು ಮಾಡುತ್ತಾರೆ ಮತ್ತು ತಮ್ಮ ತೊಂದರೆಗಳನ್ನು ಪರಿಗಣಿಸದೆ ಸಾಂಪತ್ತಿಕ ತ್ಯಾಗಗಳನ್ನು ಮಾಡುತ್ತಾರೆ ಆದರೆ ಅಲ್ಲಾಹನು ಸಹ ಯಾರ ಸಾಲ ಇಟ್ಟುಕೊಳ್ಳುವುದಿಲ್ಲ ಅದನ್ನು ಮರಳಿ ಅವರಿಗೆ ಪಾವತಿಸುತ್ತಾನೆ. ಅದರ ಕೆಲವು ಉದಾಹರಣೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಇಂದು ವಕ್ಫೇ ಜದೀದ್‌ನ ಹೊಸ ವರ್ಷ ಆರಂಭವಾಗುತ್ತಿದೆ ಈ ಸಂದರ್ಭದಲ್ಲಿ ನಾನು ಸಾಮಾನ್ಯವಾಗಿ ವಕ್ಫೇ ಜದೀದ್ ಸಂಬಂಧ ಘಟನೆಗಳನ್ನು ಪ್ರಸ್ತಾಪಿಸುವೆನು.

ಗ್ಯಾಂಬಿಯಾದ ಮಿಶಿನರಿ ಕೆಬ್ಬ ಜಾಲ್ಲೊ ಸಾಹೆಬರು ಒಂದು ಘಟನೆ ವಿವರಿಸುತ್ತಾರೆ. ಈ ಘಟನೆಯಿಂದ ನಮಗೆ ತಿಳಿದು ಬರುವುದೇನಂದರೆ ಹೇಗೆ ಅಲ್ಲಾಹನು ಸಾಂಪತ್ತಿಕ ತ್ಯಾಗಗಳನ್ನ ಮಾಡುವ ದಾಸರೊಂದಿಗೆ ವರ್ತಿಸುತ್ತಾನೆ ಎಂದು. ಅವರು ಹೇಳುತ್ತಾರೆ ಓರ್ವ ನೌಮುಬಾಯೆ (ನವ ಅಹ್ಮದಿ) ಅಬ್ದುಲ್ಲಾಇ ಜಾವೊ ಸಾಹೆಬ್, ಅವರು ಒಂದು ಹಳ್ಳಿಯವರು ಜೋಳ ಮತ್ತು ಶೇಂಗ ಬೆಳೆ ಬಿತ್ತನೆ ಮಾಡುತ್ತಿದ್ದರು ಆದರೆ ಕೆಲವು ವರ್ಷಗಳಿಂದ ಅವರಿಗೆ ಒಳ್ಳೆಯ ಬೆಳೆ ಬರುತ್ತಿರಲಿಲ್ಲ. ಅಲ್ಲಾಹನು ಕೃಷಿ ಕೆಲಸದಲ್ಲಿ ಬರ್‌ಕತ್ ನೀಡಲಿ ಎಂಬ ಉದ್ದೇಶದಿಂದ ಈ ವರ್ಷ ಅವರು ಶೇಂಗದ ಬೆಳೆ ಮಾರಿ ಆ ಹಣವನ್ನು ವಕ್ಫೇ ಜದೀದ್‌ನ ಚಂದ ನೀಡಿದರು ಅದು ಸುಮಾರು 700 ಡಲ್ಲಾಸಿ ಆಗಿತ್ತು. ಅವರು ಹೇಳುತ್ತಾರೆ ಈ ಸಾಂಪತ್ತಿಕ ತ್ಯಾಗದ ಬರ್‌ಕತ್ತ್‌ನಿಂದ ಅಲ್ಲಾಹನು ಅವರ ಬೆಳೆಯಲ್ಲಿ ಕಳೆದ ವರ್ಷಗಳಿಗಿಂತ ಮೂರು ಪಟ್ಟು ಹೆಚ್ಚು ಲಾಭ ಈ ಬೇಳೆಯಲ್ಲಿ ನೀಡಿದನು. ಬೆಳೆ ಮಾರಿದ ನಂತರ ಅವರು ಪುನಃ ಒಂದು ಸಾವಿರ ಡಲ್ಲಾಸಿ ಹಣವನ್ನು ವಕ್ಫೇ ಜದೀದಿನಲ್ಲಿ ನೀಡಿದರು.

ದಕ್ಷಿಣ ಗ್ಯಾಂಬಿಯದ ಒಂದು ಹಳ್ಳಿಯ ಓರ್ವ ಗೆಳೆಯರಾದ ಉಸ್ಮಾನ್ ಸಾಹೆಬ್ ಅವರು ಹೇಳುತ್ತಾರೆ: ಕಳೆದ ವರ್ಷ ಅವರು ಒಂದು ಬಕ್ಕೆಟ್ ಜೋಳ ವಕ್ಫೇ ಜದೀದಿನಲ್ಲಿ ನೀಡುವೆನು ಎಂದು ವಾಗ್ದಾನ ಮಾಡಿದ್ದರು. ಓರ್ವ ಶ್ರೀಮಂತ ವ್ಯಕ್ತಿಗೆ ಲಕ್ಷಾಂತರ ಹಣ ಅಥವಾ ಸಾವಿರಾರು ಡಾಲರ್ ಹಣ ನೀಡುವುದು ಕಷ್ಟದ ವಿಷಯವಲ್ಲ. ಆದರೆ ಇಂತಹ ಜನರು, ತಮ್ಮ ಆಹಾರಕ್ಕಾಗಿ ತಮ್ಮ ಬೆಳೆಯ ಮೇಲೆ ಅವಲಂಬಿತರಾಗಿರುವುದರಿಂದ ಅವರು ಅದರಿಂದ ಒಂದು ಬಕ್ಕೆಟ್ ಜೋಳ ನೀಡುವುದು ಯೂರೋಪಿನಲ್ಲಿ ವಾಸಿಸುವ

ವ್ಯಕ್ತಿಗೆ ಇದು ಸಾಮಾನ್ಯ ವಿಷಯವಾಗಿರುತ್ತದೆ. ಆದರೆ ಇವರಿಗೆ ಇದು ಬಹಳ ದೊಡ್ಡ ವಿಷಯ ಬಹಳ ದೊಡ್ಡ ತ್ಯಾಗವಾಗಿರುತ್ತದೆ. ಅವರು ಹೇಳುತ್ತಾರೆ ಕಳೆದ ವರ್ಷ ಬೆಳೆ ಬಹಳ ಕಮ್ಮಿ ಆಗಿತ್ತು. ಸುಮಾರು ಹನ್ನೆರಡು ಚೀಲದಷ್ಟು ಆಗಿರಬಹುದು ಅದು ಅವರ ಮನೆ ಖರ್ಚಿಗೂ ಸಾಲದು ಆದರೂ ಅವರು ಅದರಿಂದ ಒಂದು ಬಕ್ಕೆಟ್ ಬೆಳೆ ವಕ್ಫೇ ಜದೀದಿಗೆ ನೀಡಿದ್ದರು. ಅವರು ಹೇಳುತ್ತಾರೆ ಅದರ ಪ್ರತಿಫಲವಾಗಿ ಈ ವರ್ಷ ನನಗೆ ಮೂವತ್ತು ಚೀಲ ಜೋಳ ಬೆಳೆ ಆಯಿತು. ಹೀಗೆ ಅಲ್ಲಾಹನ ಮಾರ್ಗದಲ್ಲಿ ನಿಷ್ಠೆಯಿಂದ ನೀಡಿದ ಕಮ್ಮಿ ಪ್ರಮಾಣದಲ್ಲಿದ್ದರೂ ಸಹ ಅಲ್ಲಾಹನು ಅದನ್ನು ಸ್ವೀಕರಿಸಿ ಅದನ್ನು ಅನೇಕ ಪಟ್ಟು ಹೆಚ್ಚಾಗಿ ಮರಳಿ ಪಾವತಿಸುತ್ತಾನೆ. ಹೀಗೆ ಇದು ಅಲ್ಲಾಹನೊಂದಿಗೆ ತಮ್ಮ ಸಂಬಂಧ ದೃಢಗೊಳಿಸುವ ಒಂದು ಮಾರ್ಗವಾಗುತ್ತದೆ.

ಕೆಮೆರೋನಿನ ಓರ್ವ ಮುಅಲ್ಲಿಮ್ ಸಾಹೇಬರು ಅಲ್ಲಾಹನ ಅನುಗ್ರಹದ ಇನ್ನೊಂದು ಉದಾಹರಣೆ ಬರೆಯುತ್ತಾರೆ. ಡಗೋಯಿ ಎಂಬ ಹಳ್ಳಿಯ ಓರ್ವ ನವ ಅಹ್ಮದಿ ಅಹ್ಮದೋ ಸಾಹೇಬರಿಗೆ ವಕ್ಫೇ ಜದೀದ್ ಚಂದದ ಕುರಿತು ಹೇಳಿದಾಗ ಅವರು ಎರಡು ಬಕ್ಕೆಟ್ ಜೋಳ ಚಂದದಲ್ಲಿ ನೀಡಿದರು. ಇದು ಜನರು ನಿಷ್ಠೆಯಿಂದ ನೀಡುತ್ತಿರುವ ಚಿಕ್ಕ ಚಿಕ್ಕ ತ್ಯಾಗಗಳಾಗಿವೆ. ಅವರು ಮುಅಲ್ಲಿಮ್ ಸಾಹೇಬರಿಗೆ ಹೇಳಿದರು ನನ್ನ ಒಂದು ಫಾರಮ್ ಇದೆ. ಆದರೆ ಅದು ಹಾಳಾಗಿದೆ. ನನ್ನ ಹತ್ತಿರ ಹಣವಿಲ್ಲದ ಕಾರಣ ನನಗೆ ಅದನ್ನು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗಲಿಲ್ಲ. ಸರಕಾರವು ನನಗೆ ಸಹಾಯ ಮಾಡಲು ಸಿದ್ಧವಿದೆ ಆದರೆ ಅದಕ್ಕೆ ನಾನು ಸ್ವಲ್ಪ ಹಣ ಪಾವತಿಸಬೇಕಾಗಿದೆ ಹೀಗೆ ಸರಕಾರವು ಸಹ ಹಣ ನೀಡುವುದು. ಆದರೆ ಅವರಿಗೆ ಹಣ ನೀಡಲು ನನಗೆ ಸಾಧ್ಯವಾಗುತ್ತಿರಲ್ಲ. ನನ್ನ ಹೆಸರು ಪಟ್ಟಿಯಲ್ಲಿದೆ ಆದರೆ ನನಗೆ ಏನು ಸಿಗುವುದಿಲ್ಲ ಏಕೆಂದರೆ ನಾನು ಹಣ ನೀಡಲಿಲ್ಲ. ಮುಅಲ್ಲಿಮ್ ಸಾಹೇಬರು ಅವರಿಗೆ ಪ್ರತಿ ದಿವಸ ತಹಜ್ಜುದ್ ನಮಾಝ್ ಅನುಷ್ಠಿಸಿ ಅಲ್ಲಾಹನಲ್ಲಿ ದುಆ ಮಾಡಿದರೆ ಅಲ್ಲಾಹನು ಅನುಗ್ರಹಿಸುವನೆಂದು ಹೇಳಿದರು. ಅವರು ಹಾಗೆಯೇ ಮಾಡಿದರು. ಅದರ ಕಾರಣ ಕೆಲವೇ ದಿವಸದಲ್ಲಿ ಅವರು ನನ್ನ ಬಳಿಗೆ ಬಂದು ಹೇಳಿದರು "ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಸ್ವೀಕರಿಸಿದ ನಾನು ಸರಕಾರಕ್ಕೆ ಹಣ ನೀಡದಿದ್ದರೂ ಸಹ ಸರಕಾರವು ಕೃಷಿ ಕಾರ್ಯಕ್ಕೆ ತೋಟಗಳಿಗೆ ನೀರಿನ ಪಂಪ್‌ಗಳು ನೀಡುತ್ತಿತ್ತು ಅದು ನನಗೂ ಸಹ ನೀಡಲಾಯಿತು ಅದಲ್ಲದೆ ಐದು ಲಕ್ಷ ಫರಾಹಂಕ್ ಸೀಫ ಬೆಳೆಯ ಬೀಜಗಳನ್ನು ಸಹ ನೀಡಿದರು". ಅವರು ಅವರ ಫಾರಮ್‌ನಲ್ಲಿ ಬಹಳ ಶ್ರಮವಹಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಬೇಳೆ ಉನ್ನತವಾಗಿ ಬರಬಹುದು ಎಂದು ಭರವಸೆ ಇದೆ. ಹೇಳುತ್ತಾರೆ "ಅಲ್ಲಾಹನು ನನ್ನ ಈ ಚಿಕ್ಕ ತ್ಯಾಗವನ್ನು ಸ್ವೀಕರಿಸಿ ನನಗೆ ಬಹಳ ದೊಡ್ಡ ಬಹುಮಾನವನ್ನು ನೀಡಿದ್ದಾನೆ." ಹೀಗೆ ಅವರು ವಕ್ಫೇ ಜದೀದಿನ ಚಂದ ಎರಡು ಪಟ್ಟು ಹೆಚ್ಚಾಗಿ ನೀಡಿದರು.

ಇನ್ಡೋನೇಶೀಯಾದ ಓರ್ವ ಮುರಬ್ಬಿ ನೂರ್ ಖೈರ್ ಸಾಹೇಬರು ಹೇಳುತ್ತಾರೆ ಒಂದು ದಂಪತಿ ಸಾಮಾನ್ಯ ಜೀವನ ಸಾಗಿಸುತ್ತಿದ್ದರು ಅವರು ಚಂದ ಸಹ ಖಡ್ಡಾಯವಾಗಿ ನೀಡುತ್ತಿದ್ದರು. ಅವರಿಗೆ ಬರುವಂತಹ ಆದಾಯದಿಂದ ಸ್ವಲ್ಪ ಹಣ ಚಂದಗೋಸ್ಕರ ಒಂದು ಡಬ್ಬದಲ್ಲಿ ಹಾಕುತ್ತಿದ್ದರು. ಮುಬಲ್ಲಿಗ್ ಸಾಹೇಬರು ಅವರ ಬಳಿಗೆ ಹೋದಾಗ ಆ ಹಣ ಚಂದದಲ್ಲಿ ನೀಡುತ್ತಿದ್ದರು. ಒಮ್ಮೆ ಒಂದು ವರ್ಷಕ್ಕಿಂತ ಹೆಚ್ಚು ಸಮಯದಿಂದ ಯಾವ ಮುಬಲ್ಲಿಗರು ಅವರ ಬಳಿಗೆ ಹೋಗಲು ಸಾಧ್ಯವಾಗಲಿಲ್ಲ ಆದರೂ ಅವರು ಚಂದದ ಹಣ ಖಡ್ಡಾಯವಾಗಿ ಸಂಗ್ರಹಿಸುತ್ತಿದ್ದರು ಒಂದು ವರ್ಷದ ನಂತರ ಅವರ ಬಳಿ ಮುಬಲ್ಲಿಗರು ಹೋದಾಗ ಆ ಡಬ್ಬದಲ್ಲಿ ಬಹಳಷ್ಟು ಹಣ ಸಂಗ್ರಹವಾಗಿತ್ತು. ಅವರು ಹೇಳಿದರು ಈ ವರ್ಷ ನಮಗೆ ಬಹಳ ಲಾಭ ಲಭಿಸಿದೆ ಆದ್ದರಿಂದ ನಮಗೆ ಚಂದದ ಬರ್‌ಕತ್ ಏನು ಎಂದು ಸಹ ತಿಳಿಯಿತು ಮತ್ತು ಅದರ ಮೇಲೆ ವಿಶ್ವಾಸವು ಉಂಟಾಯಿತು. ಅವರು ಹೇಳುತ್ತಾರೆ ಒಮ್ಮೆ ನಮಗೆ ಯಾರೋ ದ್ರೋಹ ಮಾಡಿದ್ದರು ಆಗ ನಾವು ಯೋಚಿಸಿದೆವು ಇದಕ್ಕೆ ಕಾರಣ ಏನು ಎಂದು ಆಗ ನಮಗೆ ತಿಳಿಯಿತು ನಾವು ಚಂದ ಖಡ್ಡಾಯವಾಗಿ ಕ್ರಮಬದ್ಧವಾಗಿ ನೀಡಿರಲಿಲ್ಲ ಆದ್ದರಿಂದ ನಮಗೆ ಹೀಗೆ ನಷ್ಟ ಉಂಟಾಗಿದೆ ಎಂದು. ಆದ್ದರಿಂದ ಅಂದಿನಿಂದಲೇ ಅವರು ಸರಿಯಗಿ ಕ್ರಮಬದ್ಧವಾಗಿ ಹಣ ಸಂಗ್ರಹಿಸಲು ಪ್ರಾರಂಭಿಸಿದರು. ಅವರು ಹೇಳುತ್ತಾರೆ ನಾವು ಎಂದಿನವರೆಗೆ ಚಂದದ ಹಣ ತೆಗೆಯುವುದಿಲ್ಲವೋ ಅಲ್ಲಿಯವರೆಗೆ ನಮಗೆ ನೆಮ್ಮದಿ ಇರುವುದಿಲ್ಲ. ಹೀಗೆ ಅವರ ನಷ್ಟಗಳು ಅವರನ್ನು ತಿದ್ದುವ ಮಾರ್ಗವಾಗುತ್ತದೆ ಮತ್ತು ಅವರ ವಿಶ್ವಾಸ ಇನ್ನೂ ದೃಢವಾಗುತ್ತದೆ.

ಇನ್ಡೋನೇಶಿಯಾದ ಮುಬಲ್ಲಿಗರು ಬಶೀರುದ್ದೀನ್ ಸಾಹೇಬರು ಹೇಳುತ್ತಾರೆ. ಓರ್ವ ಗೆಳೆಯರು ವಕ್ಫೇ ಜದೀದಿನ ಚಂದದಲ್ಲಿ ಐದು ಲಕ್ಷ ಇಂಡೋನೇಶಿಯನ್ ಹಣ ನೀಡಿದರು. ಇಂಡೋನೇಶಿಯನ್‌ನ ಹಣದ ಮೌಲ್ಯ ಬಹಳ ಕಡಿಮೆ ಇದೆ. ಏನೇ ಇರಲಿ ಅವರ ಪ್ರಕಾರ ಇದು ಒಂದು ಬಹಳ ದೊಡ್ಡ ಮೊತ್ತವಾಗಿದೆ. ಕೆಲವು ದಿವಸಗಳ ನಂತರ ಓರ್ವರು ಭೂಮಿ ಮಾರಿದ್ದರು ಅದನ್ನು ಅವರು ಹದಿನೈದು ಮಿಲಿಯನ್‌ಗೆ ಖರೀದಿಸಿದರು ಅದರ ಕೆಲವೇ ವಾರಗಳ ನಂತರ ಅವರಿಂದ ಓರ್ವರು ಐವತ್ತು ಮಿಲಿಯನ್‌ಗೆ ಆ ಬೂಮಿ ಖರೀದಿಸಿದರು. ಅವರು ಹೇಳುತ್ತಾರೆ ನನಗೆ ವಿಶ್ವಾಸವಾಯಿತು ವಕ್ಫೇ ಜದೀದಿನ ಚಂದದ ಬರ್‌ಕತ್ತಿನಿಂದ ಕೆಲವೇ ವಾರಗಳಲ್ಲಿ ಮೂವತ್ತೈದು ಮಿಲಿಯನ್ ಲಾಭವಾಯಿತು. ನೋಡಿರೀ! ಓರ್ವ ಲೌಕಿಕ ಮನುಷ್ಯ ತೊಳಿಯುವುದೇನಂದರೆ ಕೆಲವೇ ದಿನಗಳಲ್ಲಿ ನನ್ನ ಚಾತುರ್ಯದಿಂದ ಹದಿನೈದು ಮಿಲಿಯನ್‌ನಂದ ಮೂವತ್ತೈದು ಮಿಲಿಯನ್ ಲಾಭಗಳಿಸಿದ್ದೇನೆ ಎಂದು ಆದರೆ ಅಲ್ಲಾಹನ ಸಂಪ್ರೀತಿಗಳಿಸುವವರು ಮತ್ತು ಅವನ ಮಾರ್ಗದಲ್ಲಿ ತ್ಯಾಗಗಳನ್ನ ಮಾಡುವವರ ಮನಸ್ಸಿನಲ್ಲಿ ಎಂತಹ ಭಾವನೆ ಬರುತ್ತದೆ? ಅಲ್ಲಾಹನ ಮಾರ್ಗದಲ್ಲಿ ಅಲ್ಲಾಹನಿಗೋಸ್ಕರ ತ್ಯಾಗ ಮಾಡಿದ್ದರಿಂದ ಅಲ್ಲಾಹನು ನನಗೆ ಹೆಚ್ಚಾಗಿ ಲಾಬ ನೀಡಿದ್ದಾನೆ ಎಂದು ಭಾವಿಸುತ್ತಾರೆ.

ದೃಢ ವಿಶ್ವಾಸದ ಇನ್ನೊಂದು ಉದಾಹರಣೆ ಇಂಡೋನೇಶಿಯಾದಿಂದಲೇ ಇದೆ. ಮಸೂಮ್ ಸಾಹೆಬ್ ಅಲ್ಲಿನ ಓರ್ವ ಮುಬಲ್ಲಿಗ್ ಆಗಿದ್ದಾರೆ ಅವರು ಬರೆಯುತ್ತಾರೆ ಓರ್ವ ಅಹ್ಮದಿ ತನ್ನ ಉದ್ಯೋಗಕ್ಕಾಗಿ ಸೋಲಬೇಸಿ ಎಂಬ ದ್ವೀಪಕ್ಕೆ ಹಿಜ್ರತ್ ಮಾಡಿದ್ದರು. ಪ್ರಾರಂಭದಲ್ಲಿ ಬಹಳ ಕಠಿಣ ಪರಿಸ್ಥಿತಿಯಲ್ಲಿದ್ದರು. ಅವರಿಗೆ ವಾಸಿಸಲೂ ಸಹ ಜಾಗವಿರಲಿಲ್ಲ ಮಿಶನ್ ಹೌಸ್‌ನಲ್ಲಿ ವಾಸಿಸಬೇಕಾಯಿತು. ಅವರು ಮೀನುಗಳನ್ನು ಖರೀದಿಸಿ ಮಾರಲು ಪ್ರಾರಂಭಿಸಿದರು. ಬಹಳ ಶ್ರಮವಹಿಸಿದರು. ಬಹಳ ಕಡಿಮೆ ಆದಾಯವಿದ್ದರೂ ಸಾಂಪತ್ತಿಕ ತ್ಯಾಗ ಮಾಡಲು ಹಿಂಜರಿಯಲಿಲ್ಲ. ಕೆಲವೇ ದಿನಗಳಲ್ಲಿ ಅವರ ಪರಿಸ್ಥಿತಿ ಬದಲಾಗಲು ಪ್ರಾರಂಭವಾಯಿತು. ಇವರು ಹೇಳುತ್ತಾರೆ ಈಗ ವಕ್ಫೇ ಜದೀದ್ ಚಂದದ ಇವರ ತ್ಯಾಗವು ಅವರ ಪ್ರದೇಶದಲ್ಲಿ ಎಲ್ಲರಿಗಿಂತ ಹೆಚ್ಚಾಗಿದೆ, ಮೂಸಿ ಸಹ ಆಗಿದ್ದಾರೆ. ಅವರು ಹೇಳುತ್ತಾರೆ ಇದು ನನ್ನ ಸಾಂಪತ್ತಿಕ ತ್ಯಾಗಗಳ ಕಾರಣದಿಂದಾಗಿದೆ.

ಗ್ಯಾಂಬಿಯಾದ ಓರ್ವ ಗೆಳೆಯ ಅಬ್ದುರ್ರಹ್ಮಾನ್ ಸಾಹಿಬ್‌ರಿಗೆ ತನ್ನ ಮಕ್ಕಳ ಸ್ಕೂಲ್ ಫೀಸ್ ಪಾವತಿ ಮಾಡಲು ಬಹಳ ಕಷ್ಟವಾಗುತ್ತಿತ್ತು. ಅವರು ತನ್ನ ಕಷ್ಟವನ್ನು ಕೇಂದ್ರ ಮುಬಲ್ಲಿಗ್ ಸಾಹಿಬರೊಂದಿಗೆ ಹೇಳಿದರು. ಮುಬಲ್ಲಿಗ್ ಸಾಹಿಬ್ ಹೇಳಿದರು: ನೀವು ಸಾಂಪತ್ತಿಕ ತ್ಯಾಗ ಮಾಡಿರಿ, ಅಲ್ಲಾಹನು ನಿಮಗೆ ಅನುಗ್ರಹ ನೀಡುವನು. ಆಗ ಅವರು ಇನ್ನೂರ ಐವತ್ತು ಡಲಾಸಿ ವಕ್ಫೇ ಜದೀದ್ ಚಂದವಾಗಿ ಕೊಟ್ಟರು. ಅವರು ಹೇಳುತ್ತಾರೆ: ಚಂದ ಕೊಟ್ಟ ನಂತರ ಒಂದು ವಾರ ಕಳೆದ ಕೂಡಲೆ ಅವರಿಗೆ ಐದು ಸಾವಿರ ಡಲಾಸಿ ಹಣ ಮಾಸಿಕ ಸಂಬಳ ಸಿಗುವ ಕೆಲಸ ದೊರೆಯಿತು. ಆ ಕಾರಣದಿಂದ ಅವರಿಗೆ ತಮ್ಮ ಮಕ್ಕಳ ಸ್ಕೂಲ್ ಫೀಸ್ ಸುಲಭವಾಗಿ ನೀಡಲು ಸಾಧ್ಯವಾಗುತ್ತಿದೆ. ಅದಲ್ಲದೆ ದಿನನಿತ್ಯದ ವೆಚ್ಚಗಳು ಸಹ ದೊರೆಯಿತು. ಹೀಗೆ ಅವರು ಎಲ್ಲಾ ಜನರಿಗೆ ಚಂದದ ಬರ್‌ಕತ್ತಿನ ಬಗ್ಗೆ ಮತ್ತು ಅಲ್ಲಾಹನ ಅನುಗ್ರಹದ ಬಗ್ಗೆ ಹೇಳಲು ಪ್ರಾರಂಭಿಸಿದರು.

ಬಡವರು ಹೇಗೆ ತ್ಯಾಗ ಮಾಡಿ ಅನಂತರ ಅಲ್ಲಾಹನ ಮೇಲೆ ಭರವಸೆ ಇಡುತ್ತಾರೆ ಮತ್ತು ಅಲ್ಲಾಹನು ಅವರ ಭರವಸೆಯನ್ನು ಹೇಗೆ ಈಡೇರಿಸುತ್ತಾನೆ ಎಂಬುದರ ಬಗ್ಗೆ ಒಂದು ಉದಾಹರಣೆ ಗಿನಿ ಬಸಾವೋ ದೇಶದ ಮಿಶನರಿ ಸಾಹಿಬ್ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಮೊಂತೇರೊ ಕಮಾರಾ ಸಾಹಿಬ್‌ರೊಂದಿಗೆ ಅವರ ವಕ್ಫೇ ಜದೀದ್ ಚಂದದ ಬಗ್ಗೆ ಗಮನ ಹರಿಸಲಾಯಿತು. ಆಗ ಅವರು ಹೇಳಿದರು: ಈಗ ನನ್ನ ಬಳಿ ನಾಲ್ಕು ಸಾವಿರ ಫ್ರಾಂಕ್ ಸೈಫಗಳಿವೆ. ಅದು ಈ ದಿನದ ಆಹಾರಕ್ಕಾಗಿ ಇರಿಸಲಾಗಿದೆ. ಅದರ ಮೌಲ್ಯ ಬಹಳ ಕಡಿಮೆ ಆಗಿದೆ. ಅವರ ಕುಟುಂಬಗಳು ಸಹ ಬಹಳ ದೊಡ್ಡದಾಗಿರುತ್ತವೆ ಅವರ ಆಹಾರಕ್ಕೋಸ್ಕರ ಅವರು ಆ ದುಡ್ಡು ಇರಿಸಿದ್ದರು. ಅವರು ಆ ಹಣವನ್ನು ಚಂದವಾಗಿ ನೀಡಿದರು ಮತ್ತು ಆಹಾರ ಪದಾರ್ಥಗಳನ್ನು ಸಾಲವಾಗಿ ಪಡೆದರು. ಅವರು ಹೇಳುತ್ತಾರೆ: ಮರುದಿನ ಅವರ ಪುತ್ರಿ ನಗರದಿಂದ ಆಗಮಿಸಿದಳು. ಆಕೆ ಎರಡು ಗೋಣಿ ಚೀಲ ಅಕ್ಕಿ, ಎಣ್ಣೆ ತುಂಬಿದ ಕ್ಯಾನ್ ಹಾಗೂ ಬೇರೆ ಸಾಮಗ್ರಿಗಳನ್ನೂ ಸ್ವಲ್ಪ ಹಣವನ್ನೂ ತಂದಿದ್ದಳು. ಆಗ ಅವರಿಗೆ ದೃಢವಾಯಿತು ನಾನು ಆಹಾರಕ್ಕೋಸ್ಕರ ಇರಿಸಿದ ಹಣವನ್ನು ಚಂದವಾಗಿ ಕೊಟ್ಟ ಕಾರಣದಿಂದ ನನಗೆ ಇಷ್ಟೊಂದು ಆಹಾರ ವಸ್ತುಗಳು ಮರುದಿನವೇ ದೊರೆಯಿತು ಎಂದು. ಅಂದರೆ ಇವರು ಹಸಿದು ತ್ಯಾಗಗಳನ್ನು ಮಾಡುವ ಜನರಾಗಿದ್ದಾರೆ.

ಮತ್ತೊಂದು ಉದಾಹರಣೆ ಇದೆ ಫ್ರಾನ್ಸ್‌ನ ಅಮೀರ್ ಸಾಹೆಬ್ ಹೇಳುತ್ತಾರೆ. ಫ್ರಾನ್ಸ್‌ನ ಓರ್ವ ಅರಬ್ ಸ್ನೇಹಿತರು ಹೇಳುತ್ತಾರೆ ನಾನು ಹಿಂದಿನ ವರ್ಷದ ವಕ್ಫೇ ಜದೀದಿನ ಖುತ್‌ಬ ಆಲಿಸಿದೆ. (ಅದರಲ್ಲಿ ನಾನು ಸಾಂಪತ್ತಿಕ ತ್ಯಾಗ ಮಾಡುವವರ ಉದಾಹರಣೆಗಳನ್ನು ಪ್ರಸ್ತಾಪಿಸಿದ್ದೆ) ಆ ಖುತ್‌ಬ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಅವರಿಗೆ 46 ವರ್ಷ ಪ್ರಾಯವಾಗಿದೆ. ಹೇಳುತ್ತಾರೆ ನಾನು ಬಹಳ ಸಾಂಪತ್ತಿಕ ತೊಂದರೆಗೆ ಸಿಲುಕಿದ್ದೆ. ಇದಕ್ಕು ಮುಂಚೆ ನನಗೆ ಎಂದೂ ಇಷ್ಟು ತೊಂದರೆ ಆಗಿರಲಿಲ್ಲ. ಬ್ಯಾಂಕ್‌ನಿಂದಲೂ

ಸಾಲ ಪಡೆಯಬೇಕಾಯಿತು. ಬ್ಯಾಂಕ್ ಸಿಬ್ಬಂದಿಯರು ಸಾಲ ತೀರಿಸಿ ಎಂದು ನನ್ನ ಹಿಂದೆ ಬಿದ್ದಿದ್ದರು. ನನಗೆ ಸೂಚನೆ ಸಹ ನಡಲಾಗಿತ್ತು ನೀವು ನಿಮ್ಮ ಲೆಕ್ಕಚಾರ ಕ್ಲಿಯರ್ ಮಾಡದಿದ್ದರೆ ನಮ್ಮ ಖಾತೆ ಬಂದ್ ಮಾಡಲಾಗುವುದು ಎಂದು ಕೆಲವೊಮ್ಮೆ ದಂಡ ಸಹ ವಿಧಿಸಲಾಗುತ್ತದೆ. ಆ ದಿನಗಳಲ್ಲಿಯೇ ನಮ್ಮ ಪ್ರದೇಶದಲ್ಲಿ ಒಂದು ಸಭೆ ನಡೆಯಿತು. ಸಭೆಯ ಸ್ವಲ್ಪ ಹೊತ್ತಿನ ಮುಂಚೆ ನನ್ನ ಓರ್ವ ಸ್ನೇಹಿತ ಬಲವಂತವಾಗಿ ನನಗೆ 20 ಯುರೋ ಕೊಟ್ಟನು. ನಾನು ಆ ಹಣವನ್ನು ಮುಂದಿನ ದಿನಗಳಲ್ಲಿ ಉಪಯೋಗಕ್ಕೆ ಬರುವುದು ಎಂದು ನನ್ನ ಜೋಬಿನಲ್ಲಿರಿಸಿದ್ದೆ. ಇದಲ್ಲದೆ ಮತ್ತೇನು ನನ್ನ ಹತ್ತಿರ ಉಳಿದಿರಲಿಲ್ಲ. ನಾನು ಆ ಸಭೆಯಲ್ಲಿ ಭಾಗವಹಿಸಿದಾಗ ಸೆಕ್ರೇಟರಿ ಮಾಲ್ ಚಂದದ ಬಗ್ಗೆ ಮಾತನಾಡಿದಾಗ ನಾನು ನನ್ನಲ್ಲಿದ್ದ ಆ ಹಣವನ್ನು ಚಂದದಲ್ಲಿ ನೀಡಿದೆ. ಕೆಲವು ದಿನಗಳ ನಂತರ ನನಗೆ ನನ್ನ ಬ್ಯಾಂಕ್‌ನಿಂದ ಒಂದು ಕರೆ ಬಂತು. ನಾನು ಅದನ್ನು ನೋಡಿ ಏನೋ ಕೆಟ್ಟ ಸುದ್ದಿ ಬಂದಿರಬಹುದೆಂದು ಬಾವಿಸಿದೆ. ಆದರೆ ಅವರು ನನಗೆ ಹೇಳಿದರು ಸಂಬಂಧಿತ ಇಲಾಖೆಯವರು ನನ್ನ ಬ್ಯಾಂಕ್ ಖಾತೆ ಬಂದ್ ಮಾಡಬಾರದಾಗಿ ಮತ್ತು ನಕಾರಾತ್ಮಕವಾಗಿದ್ದ 600 ಯುರೋ ಹಣವನ್ನು ಖಾತ್ರಿಗೊಳಿಸಲು ಆದೇಶಿಸಿದ್ದಾರೆ ಎಂದು. ಅವರು ಹೇಳುತ್ತಾರೆ ಇದು ನನಗೆ ಬಹಳ ಆಶ್ಚರ್ಯ ಉಂಟು ಮಾಡಿತು. ಏಕೆಂದರೆ ಬ್ಯಾಂಕ್‌ನವರು ಬಹಳ ಕಠಿಣವಾಗಿ ವರ್ತಿಸುತ್ತಾರೆ. ಮತ್ತೆ ಅವರು ಹೇಳುತ್ತಾರೆ ಕೆಲವೇ ದಿವಸಗಳ ನಂತರ ನನ್ನ ಕೆಲಸದ ಜಾಗದಲ್ಲಿ ಇಂಶೂರೆನ್ಸ್‌ನವರು ತಡೆದಿಟ್ಟಿದ ಒಂದು ಬಹಳ ದೊಡ್ಡ ಮೊತ್ತ ನನಗೆ ನೀಡಿದರು. ಈ ಎಲ್ಲಾ ಘಟನೆಗಳು ವಕ್ಫೇ ಜದೀದಿನ ಖುತ್‌ಬಗಳನ್ನು ಆಲಿಸಿ ಸ್ವಲ್ಪ ಹಣವನ್ನು ಚಂದದಲ್ಲಿ ನೀಡಿದ ನಂತರ ದೊರೆಯಿತು. ಮೊದಲು ನಾನು ಯೋಚಿಸುತ್ತಾ ಇದ್ದೆ ಖುತ್‌ಬದಲ್ಲಿ ಪ್ರಸ್ತಾಪಿಸುತ್ತಿರುವ ಪವಾಡಗಳು ನನ್ನೊಂದಿಗೆ ಸಂಭವಿಸಲು ಸಾಧ್ಯವೇ? ಎಂದು ಆದರೆ ಈಗ ಅಲ್ಲಾಹನು ನನಗೆ ಚಂದದ ಬರ್‌ಕತ್ತಿನ ಪವಾಡ ತೋರಿಸಿದನು. ಹೀಗೆ ನನಗೆ ಪವಾಡಗಳು ಸಂಭವಿಸುತ್ತವೆ ಎಂದು ಖಚಿತವಾಯಿತು.

ಹೇಟಿಯ ಮುಬಲ್ಲಿಗ್ ಖೈಸರ್ ಸಾಹೆಬ್ ಬರೆಯುತ್ತಾರೆ. ಇದು ಸಹ ಅಲ್ಲಾಹನ ವರ್ತನೆ ಮತ್ತು ಈಮಾನ್ (ವಿಶ್ವಾಸ) ದೃಢಿಕರಿಸುವಂತಹ ಘಟನೆ ಆಗಿದೆ. ಈ ಘಟನೆಗಳು ಬೇರೆ ಬೇರೆ ಪ್ರದೇಶಗಳದ್ದಾಗಿದೆ, ಆಫ್ರಿಕಾ, ಅಮೇರಿಕಾ, ಯುರೋಪ್, ದಕ್ಷಿಣ. ಉತ್ತರ ಭಾಗಗಳಿಂದ ಇವೆ ಅವರ ಸಂಬಂಧವೂ ಏನೂ ಇಲ್ಲದಿದ್ದರೂ ಘಟನೆಗಳು ಒಂದಕ್ಕೊಂದು ಹೋಲುತ್ತದೆ. ಪೋರ್ಟ್ ಆಫ್ ಪ್ರಿನ್ಸ್‌ನ ಓರ್ವ ನವ ಅಹ್ಮದಿ ಇಬ್ರಾಹೀಮ್ ಸಾಹೆಬ್ ಕೆಲವು ದಿವಸಗಳ ಮುಂಚೆ ತನ್ನ ಕಚೇರಿಯಿಂದ ಮನೆಗೆ ಹೋಗುತ್ತಿದ್ದರು. ದಾರಿಯಲ್ಲಿ ಅವರು ಒಂದು ಫೈಲ್ ಬಿಳಿಸಿಕೊಂಡಿದ್ದರು. ಅದರಲ್ಲಿ ಬಹಳ ಅವಶ್ಯಕ ಕಾಗದಗಳಿದ್ದವು ಮತ್ತು 13,000 ಗೋರದ್ ಹಣವಿತ್ತು. ಅವರು ಹಿಂದಿರುಗಿ ಸಂಪೂರ್ಣ ಮಾರ್ಗ ಹುಡುಕಿದರು ಅವರಿಗೆ ಆ ಫೈಲ್ ಸಿಗಲಿಲ್ಲ. ಅವರು ಹೇಳುತ್ತಾರೆ: ನಾನು ಮನಸ್ಸಿನಲ್ಲಿ ಸಂಕಲ್ಪ ಮಾಡಿದೆ ವಕ್ಫೇ ಜದೀದಿಗೆ ಮಾಡಿರುವಂತಹ 1000 ಗೋರದ್‌ನ ವಾಗ್ದಾನವನ್ನು ನನ್ನ ಬಳಿ ಹಣ ಇರಲಿ ಅಥವಾ ಇಲ್ಲದಿರಲಿ ಸಂಪೂರ್ಣವಾಗಿ ಪಾವತಿಸುವೆನೆಂದು ವಾಗ್ದಾನ ಮಾಡಿದೆ. ಆದ್ದರಿಂದ ನಾನು ಯಾರಿಂದಲೋ ಹಣ ಸಾಲವಾಗಿ ತೆಗೆದುಕೊಂಡು ಚಂದೆ ನೀಡಿದೆ. ಅವರು ಹೇಳುತ್ತಾರೆ ಚಂದ ನೀಡಿದ ದಿವಸವೆ ಓರ್ವ ಅಪರಿಚಿತನಿಂದ ಕರೆ ಬಂತು. ನಿಮ್ಮ ಫೈಲ್ ನನ್ನ ಬಳಿ ಇದೆ ನೀವು ಬಂದು ಅದನ್ನು ತೆಗೆದುಕೊಳ್ಳಿರಿ ಎಂದು. ಅವರು ಹೇಳುತ್ತಾರೆ ನಾನು ತಕ್ಷಣ ಅವನ ಬಳಿ ಹೋದಾಗ ಅವನು ಆ ಫೈಲ್ ನನಗೆ ನೀಡಿ ಹೀಗೆ ಹೇಳಿದನು. ನನಗೆ ನಿಮ್ಮ ವಿಳಾಸ ಹುಡುಕುವುದಕ್ಕೆ ಫೈಲ್ ತೆಗೆದು ನೋಡುವ ಅವಶ್ಯಕತೆ ಇತ್ತು, ಹಣ ಮತ್ತು ಕಾಗದಗಳನ್ನು ಪರಿಶೀಲಿಸಿಕೊಳ್ಳಿರಿ ಎಂದು. ನಾನು ಪರಿಶೀಲಿಸಿದಾಗ ಎಲ್ಲಾ ಕಾಗದಗಳು ಮತ್ತು ಹಣ ಸುರಕ್ಷಿತವಾಗಿತ್ತು. ಅವರು ಹೇಳುತ್ತಾರೆ ನಾನು ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಿದೆನು ಮತ್ತು ಇದು ಕೇವಲ ಆ ಚಂದದ ಬರ್‌ಕತ್ತಿನಿಂದ ಸಾಧ್ಯವಾಯಿತು ಎಂದು ನನಗೆ ದೃಢವಾಯಿತು.

ಗನಕರಿಯ ಮುಬಲ್ಲಿಗ್ ಇನ್‌ಚಾರ್ಜ್ ಸಾಹೇಬರು ಹೇಳುತ್ತಾರೆ ಕಮಡ್ಯಾ ರೀಜನ್ನಿನ ಒಂದು ಹಳ್ಳಿಯ ಅಹ್ಮದಿ ಸ್ನೇಹಿತ ಅಬೂಬಕ್ಕರ್ ಸಾಹೇಬರಿಗೆ ವಕ್ಫೇ ಜದೀದ್ ಪಾವತಿಸುವ ಬಗ್ಗೆ ತಿಳಿಸಲಾಯಿತು. ಮೊದಲಿಗೆ ಅವರು ಹಿಂಜರಿಯುತ್ತಿದ್ದರು ನಂತರ ಅವರು ತನ್ನ ವಗ್ದಾನವನ್ನು ನೀಡಿದರು. ಚಂದ ನೀಡಿದ ಕೆಲವು ದಿನ ಬಳಿ ಅವರು ನಮ್ಮ ಸ್ಥಳೀಯ ಮಿಶಿನರಿ ಸಾಹೇಬರಿಗೆ ಹೇಳಿದರು ಜಮಾಅತೆ ಅಹ್ಮದಿಯ ನಿಜವಾಗಿಯು ಅಲ್ಲಾಹನ ಕಡೆಯಿಂದ ಇದೆ. ಅವರು ಹೇಳುತ್ತಾರೆ ನಾನು ಸರಕಾರಿ ಉದ್ಯೋಗಿ ಆಗಿದ್ದೇನೆ. ಕೆಲ ವರ್ಷಗಳ ಮುಂಚೆ ನನ್ನ ಕಾಲು ಒಂದು ಅಪಘಾತದಲ್ಲಿ ಮುರಿದು ಹೋಗಿತ್ತು ಸರಿಯಾಗಿ ಚಿಕಿತ್ಸೆ ಮಾಡದ ಕಾರಣ ನನ್ನ ಒಂದು ಕಾಲು ಚಿಕ್ಕದಾಗಿ ಉಳಿಯಿತು ಅದರಿಂದ ನನಗೆ ಬಹಳ ತೊಂದರೆ ಉಂಟಾಯಿತು. ಆದ್ದರಿಂದ ನಾನು ಕೆಲ ದಿನಗಳಿಂದ ಆಪರೇಶನ್‌ಗಾಗಿ ಹಣ ಸಂಗ್ರಹಿಸಲು ಪ್ರಾರಂಭಿಸಿದೆ ಅಷ್ಟರಲ್ಲಿ ನಮ್ಮ ಮಿಶಿಸರಿ ಸಾಹೇಬರು ನನ್ನ ಬಳಿ ಬಂದು ಚಂದದ ಮಹತ್ವದ ಬಗ್ಗೆ ತಿಳಿಸಿದರು ಆದರೂ ನಾನು ಮೊದಲು ಚಿಕಿತ್ಸೆ ಮಾಡಿಕೊಳ್ಳೋನ ಎಂದು ಭಾವಿಸಿದೆ. ಮಾರನೇಯ ದಿವಸ ನಾನು ಮನಸ್ಸಿನಲ್ಲಿ ಯೋಚಿಸಿದೆ ಅಲ್ಲಾಹನ ಅನುಗ್ರಹಗಳಿಸಲು ಈ ಹಣ ನಾನು ಚಂದದಲ್ಲಿ ನೀಡುವೆನು ಎಂದು. ನಾನು ಆ ಸಂಗ್ರಹಿಸಿದ ಸಂಪೂರ್ಣ ಹಣವನ್ನು ಚಂದದಲ್ಲಿ ನೀಡಿದೆನು. ಅವರು ಹೇಳುತ್ತಾರೆ ಇನ್ನು ಆ ಘಟನೆ ನಡೆದು ಕೇವಲ ಎರಡು ದಿನ ಮಾತ್ರ ಆಗಿತ್ತು ನನ್ನ ಕಚೇರಿಯಿಂದ ಒಂದು ಪತ್ರ ತಲುಪಿತು ಅದರಲ್ಲಿ ನನ್ನ ಆಪರೇಶನ್‌ಗಾಗಿ ಸಂಪೂರ್ಣ ವೆಚ್ಚವು ಸರಕಾರ ನೀಡುವುದು ಮತ್ತು ನಿಮಗೆ ಅನುಮತಿ ಇದೆ ನೀವು ಎಲ್ಲಿ ಬೇಕಾದರು ಆಪರೇಶನ್ ಮಾಡಿಸಕೊಳ್ಳಬಹುದು ಎಂದು ಬರೆಯಲಾಗಿತ್ತು. ಅವರು ಹೇಳುತ್ತಾರೆ ಇದು ಕೇವಲ ಚಂದದ ಬರಕತ್ತಿನಿಂದಲೇ ಸಾಧ್ಯ. ಇದು ಸಾಮಾನ್ಯವಾದ ಮಾತುಗಳಲ್ಲ ಇದು ಅಲ್ಲಾಹನ ಮೇಲೆ ದೃಢ ನಂಬಿಕೆ ಇರಿಸುವವರೊಂದಿಗೆ ಅಲ್ಲಾಹನ ವರ್ತನೆ ಆಗಿದೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯತೆಗೆ ಸಾಕ್ಷಿಯಾಗಿದೆ.

ಖಾದಿಯಾನ್‌ನಿಂದ ವಕ್ಫೇ ಜದೀದ್ ಸೆಕ್ರೆಟರಿ ಮಾಮೂನ್ ರಶೀದ್ ಸಾಹಿಬ್ ಬರೆಯುತ್ತಾರೆ: ಸಲೀಜ ಸಾಹಿಬ್ ಎಂಬವರಿಗೆ ಕಾರಣಾಂತರಗಳಿಂದ ಈ ವರ್ಷದ ವಕ್ಫೇ ಜದೀದ್ ಚಂದ ಪಾವತಿಸಲಾಗಲಿಲ್ಲ. ಅವರ ಸಹೋದರ ಹೇಳಿದರು: ವರ್ಷಾಂತ್ಯವಾಗಲಿದೆ ಬೇಗನೆ ಚಂದ ನೀಡಿರಿ. ಆದರೆ ಅವರ ಬ್ಯಾಂಕ್ ಅಕೌಂಟ್‌ನಲ್ಲಿದ್ದ ಹಣದಿಂದ ಚಂದದ ಶೇಕಡಾ ಮೂವತ್ತರಷ್ಟು ಮಾತ್ರ ನೀಡಲು ಸಾಧ್ಯವಿತ್ತು. ಅವರಿಗೆ ಪೂರ್ಣ ಹಣ ಕೊಡುವ ಬಗ್ಗೆ ಚಿಂತೆ ಇದ್ದರೂ ಬ್ಯಾಂಕ್‌ನಲ್ಲಿದ್ದ ಹಣವನ್ನು ಪಾವತಿ ಮಾಡಿದರು. ಅವರು ಹೇಳುತ್ತಾರೆ: ಅದ್ಭುತಕರವಾಗಿ ಕೆಲವೇ ಕ್ಷಣಗಳಲ್ಲಿ ಅವರ ಅಕೌಂಟಿಗೆ ಎಷ್ಟು ಹಣ ಬಂತೆಂದರೆ ಅವರು ಬಾಕಿ ಚಂದದ ಹಣ ಸಹ ನೀಡಲು ಸಾಧ್ಯವಿತ್ತು. ಅವರು ತನ್ನ ವಾಗ್ದಾನ ಪ್ರಕಾರ ಪೂರ್ಣವಾಗಿ ಚಂದ ನೀಡಿದರು. ಅವರು ಹೇಳುತ್ತಾರೆ: ನಾನು ಯಾವಾಗಲೂ ಚಂದ ವರ್ಷಾಂತ್ಯದ ಮೊದಲು ನೀಡುತ್ತಿದ್ದೆ. ಈ ವರ್ಷ ಮಕ್ಕಳು ರೋಗ ಪೀಡಿತರಾದ ಕಾರಣ ಚಂದದ ಹಣ ನೀಡದೆ ಬಾಕಿಯಾಯಿತು. ಅಲ್ಲಾಹನು ಅದ್ಭುತಕರವಾಗಿ ಚಂದ ನೀಡುವ ವ್ಯವಸ್ಥೆ ಮಾಡಿದನು. ಅವರು ಹೇಳುತ್ತಾರೆ: ನನ್ನ ವಿಶ್ವಾಸ ಬಲಿಷ್ಠವಾಗಲು ಇದು ಕಾರಣವಾಯಿತು.

ಭಾರತದ ಅಬ್ದುಲ್ ಮಹ್‌ಮೂದ್ ಸಾಹಿಬ್ ಎಂಬ ವಕ್ಫೇ ಜದೀದ್ ಇನ್ಸ್‌ಪೆಕ್ಟರ್ ಬರೆಯುತ್ತಾರೆ: ಪೀರ್‌ಭೂಮ್ ಜಿಲ್ಲೆ ಬಂಗಾಳದ ಒಂದು ಊರಾಗಿದೆ. ಅಲ್ಲಿ ಒಬ್ಬರು ಹೋಲ್‌ಸೇಲ್ ಕಿರಾಣಿ ವ್ಯಾಪಾರಿಯಾಗಿದ್ದಾರೆ. ಅವರು ಪ್ರತಿ ದಿನ ಅಂಗಡಿ ತೆರೆದ ಕೂಡಲೇ ಒಂದು ನೂರು ರೂಪಾಯಿ ಒಂದು ಪೆಟ್ಟಿಗೆಯೊಳಗೆ ಹಾಕಿ ಅದರಿಂದ ತನ್ನ ವಾಗ್ದಾನ ಪ್ರಕಾರ ಚಂದ ನೀಡುತ್ತಿದ್ದರು. ಅವರು ಹೇಳುತ್ತಾರೆ: ಒಂದು ದಿವಸ ಬಹಳ ಕಡಿಮೆ ಗ್ರಾಹಕರು ಬಂದಿದ್ದರು. ಮರುದಿನ ಅವರು ಅಂಗಡಿ ತೆರೆದ ಕೂಡಲೇ ಮುನ್ನೂರು ರೂಪಾಯಿ ಪೆಟ್ಟಿಗೆಗೆ ಹಾಕಿ ಅಲ್ಲಾಹನ ಅನುಗ್ರಹದ ಪ್ರತೀಕ್ಷೆಯಲ್ಲಿದ್ದರು. ಅಲ್ಲಾಹನು ಆ ದಿನ ಹೇಗೆ ಅನುಗ್ರಹಿಸಿದನೆಂದರೆ ಆ ದಿನ ಮಧ್ಯಾಹ್ನದ ನಂತರ ಎಂಟು ಜನ ಖರೀದಿಗೋಸ್ಕರ ಬಂದರು. ಅವರು ಹೇಳುತ್ತಾರೆ ಅಂದು ಬಹಳ ಕೆಲಸವಿತ್ತು ಆ ಎಂಟು ಜನರಲ್ಲಿ ಓರ್ವನನ್ನು ನಾಳೆ ಬರಲು ಹೇಳಿ ಅವನಿಗೆ ಹಿಂದಿರುಗಿಸಿದರು. ಅಲ್ಲಾಹನ ಅನುಗ್ರಹದಿಂದ ಆ ದಿನ ಸಾಕಷ್ಟು ಲಾಭ ಸಂಪಾದನೆ ಆಯಿತು. ಅವರು ಹೇಳುತ್ತಾರೆ: ಅಲ್ಲಾಹನು ಮನುಷ್ಯನ ಬಗ್ಗೆ ಸಂತೋಷಗೊಂಡರೆ ಅವನು ಎಷ್ಟು ನೀಡುತ್ತಾನೆಂದರೆ ಅವುಗಳನ್ನು ಎರಡು ಕೈಗಳಿಂದ ಬಾಚಿಕೊಳ್ಳಲಾಗದು.

ಗನಿಬಸಾಊ ಓಇಯೋ ರೀಜನ್ನಿನ ಮಿಶಿನರಿ ಅಬ್ದುಲ್ ಅಝೀಝ್ ಸಾಹೆಬ್ ಹೇಳುತ್ತಾರೆ. ಓರ್ವ ಹಿರಿಯ ಮಹಿಳೆ ಮಸ್ಕೂತ ಸಾಹಿಬ ಅವರಿಗೆ ವಕ್ಫೇ ಜದೀದಿನ ಚಂದ ಪಾವತಿಸುವ ಕಡೆಗೆ ಗಮನ ಸೆಳೆಯಲಾಯಿತು. ಅದಕ್ಕೆ ಅವರು ಹೇಳಿದರು ನಾನು ನನ್ನ ವಾಗ್ದಾನದ ಪ್ರಕಾರ ಹಣ ಸಂಗ್ರಹಿಸಿದ್ದೆ ಆದರೆ ನಿನ್ನೆ ರಾತ್ರಿ ನನ್ನ ಸಹೋದರನ ಕಡೆಗೆ ಹೋದಾಗ ಆ ಹಣ ದಾರಿಯಲ್ಲಿ ಕಳೆದು ಹೋಗಿದೆ ಅದು ಸಿಕ್ಕಿದ ತಕ್ಷಣ ಹಣ ಪಾವತಿಸುವೆನು ಎಂದು ಹೇಳಿ ಆ ಹಣದ ಚೀಲ ಹುಡುಕಾಡಲು ಪ್ರಾರಂಭಿಸಿದರು. ಆದರೆ ಅದು ಅವರಿಗೆ ಸಿಗಲಿಲ್ಲಾ ಆಗ ಅವರು ತನ್ನ ಪುತ್ರಿಯ ಹತ್ತಿರ ಚಂದದ ಮೊತ್ತವನ್ನು ಸಾಲವನ್ನಾಗಿ ತೆಗೆದುಕೊಂಡು ಬಂದು ಆ ಹಣ ವಕ್ಫೇ ಜದೀದಿನ ಚಂದದಲ್ಲಿ ನೀಡಿ ಕಳೆದು ಹೋದಂತಹ ಹಣದ ಚೀಲವನ್ನು ಪುನಃ ಹುಡುಕಾಡಲು ಪ್ರಾರಂಭಿಸಿದರು. ಅವರು ಹೇಳುತ್ತಾರೆ ನಾನು ಹುಡುಕಾಡುತ್ತಾ ಇನ್ನು ಕೆಲವೇ ಮೀಟರ್ ದೂರ ಹೋಗಿರಬಹುದು ನನ್ನ ಆ ಹಣದ ಚೀಲ ದಾರಿಯಲ್ಲಿ ಬಿದ್ದಿರುವುದನ್ನು ಕಂಡೆನು. ಅದನ್ನು ಕಂಡು ಅವರು ಬಹಳ ಸಂತೋಷಗೊಂಡರು ಮಾರನೇಯ ದಿವಸವೇ ಬಂದು ತಮ್ಮ ವಾಗ್ದಾನದ ಪ್ರಕಾರ ವಕ್ಫೇ ಜದೀದಿನ ಚಂದ ನೀಡಿದರು. ಹೀಗೆ ಅವರು ಜನರಲ್ಲಿ ಇದು ಚಂದದ ಬರ್‌ಕತ್ ಆಗಿದೆ, ವಕ್ಫೇ

ಜದೀದ್ ಚಂದದ ಬರ್‌ಕತ್ ಆಗಿದೆ ಅಲ್ಲಾಹನು ನನಗೆ ಈ ಕಳೆದು ಹೋದಂತಹ ಹಣವನ್ನು ದೊರಕಿಸಿದನು ಎಂದು ಜನರಲ್ಲಿ ಹೇಳುತ್ತಿದ್ದರು.

ಮಾಲಿ ರೀಜನ್ನಿನ ಸಕಾಸೋನ ಮುಬಲ್ಲಿಗ್ ಅಹ್ಮದ್ ಬಿಲಾಲ್ ಸಾಹೇಬರು ಹೇಳುತ್ತಾರೆ ಓರ್ವ ನವ ಅಹ್ಮದಿ ಅಹ್ಮದ್ ಜಲಾಲ್ ಸಾಹೆಬ್ ಮಿಶನ್ ಹೌಸ್‌ಗೆ ಬಂದು ಹೇಳಿದರು. ಅವರು ಕ್ರಮಬದ್ಧವಾಗಿ ಕಡ್ಡಾಯವಾಗಿ ಚಂದ ನೀಡುತ್ತಿದ್ದರು ಆದರೆ ಕೆಲವು ಸಾಂಪತ್ತಿಕ ತೊಂದರೆಯಿಂದ ಚಂದ ನೀಡಲು ಸಾಧ್ಯವಾಗಲಿಲ್ಲ. ಒಮ್ಮೆ ಅವರು ಸ್ವಪ್ನದಲ್ಲಿ ನೋಡಿದರು ಅವರೆಲ್ಲರು ಜನಸಮೂಹದೊಂದಿಗೆ ಒಂದು ವಿಶಾಲವಾದ ದಾರಿಯಲ್ಲಿ ನಡೆಯುತ್ತಿದ್ದಾರೆ ಈ ದಾರಿ ಮುಂದೆ ಅನೇಕ ದಾರಿಯಾಗಿ ವಿಭಜನೆಗೊಳ್ಳುತ್ತದೆ ಆದರೆ ಆ ವಿಬಜನೆಗೊಂಡಂತಹ ದಾರಿಗಳು ಬಹಳ ಕೆಟ್ಟದ್ದಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಅವರು ಪ್ರಾರ್ಥಿಸಿದಾಗ ಆಕಾಶದಿಂದ ಒಂದು ಗಾಡಿ ಬಂದು ಅವರನ್ನು ಕರೆದುಕೊಂಡು ಆಕಾಶದ ಕಡೆಗೆ ಹೋಗುತ್ತದೆ. ಆ ಹಾಳಾದ ರಸ್ತೆ ಮುಕ್ತಾಯವಾದಾಗ ಅವರನ್ನು ಆ ಗಾಡಿ ಪುನಃ ಆ ಹೆದ್ದಾರಿಗೆ ಬಿಡುತ್ತದೆ. ಅವರು ಹೇಳುತ್ತಾರೆ ಅಲ್ಲಿ ಅವರು ಓರ್ವ ಹಿರಿಯರೊಬ್ಬರನ್ನು ಕಂಡರು ಅವರು ಹೇಳಿದರು ಈ ಗಾಡಿಯು ನಿಮಗೆ ಚಂದ ಪಾವತಿಸಿದ ಕಾರಣವಾಗಿ ಕರೆದುಕೊಂಡು ಹೋಗಿತ್ತು. ಹೇಳುತ್ತಾರೆ ಕೆಲವೊಮ್ಮೆ ತೊಂದರೆಗಳು ಬರುತ್ತವೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಕಡ್ಡಾಯವಾಗಿ ಚಂದ ನೀಡುವ ಓರ್ವ ಅಹ್ಮದಿಗೆ ಅಲ್ಲಾಹನು ತೊಂದರೆಯ ಸಮಯದಲ್ಲಿ ಸೌಲಭ್ಯ ಕಲ್ಪಿಸುತ್ತಾನೆ. ಹೀಗೆ ಆ ನವ ಅಹ್ಮದಿ ತನ್ನ ಚಂದ ನೀಡಿ ಇನ್ಮುಂದೆ ಎಂದೂ ಏನೆ ತೊಂದರೆ ಎದುರಾಗಲಿ ಚಂದ ನೀಡುವುದರಲ್ಲಿ ಸೊಮಾರಿತನ ತೋರುವುದಿಲ್ಲ ಎಂದು ಹೇಳಿದರು. ಇದು ಆಕಸ್ಮಿಕವಾದ ಘಟನೆಯೇ...

ಟಾಂಝಾನಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಅರೂಶಾ ರೀಜನಿನ ಒಂದು ಜಮಾಅತಿನಲ್ಲಿ ಚಂದದ ಬಗ್ಗೆ ಹೇಳಿದಾಗ ಫಾತಿಮ ಎಂಬ ಬಾಳೆಹಣ್ಣು ಮತ್ತು ಇತರ ಹಣ್ಣುಗಳ ಮಾರಾಟಗಾರ್ತಿ ತನ್ನ ಎರಡು ದಿನಗಳ ಎಲ್ಲಾ ಸಂಪಾದನೆಯನ್ನು ವಕ್ಫೇ ಜದೀದ್ ಚಂದವಾಗಿ ನೀಡಿದರು. ತನ್ನ ಕುಟುಂಬವನ್ನೂ ವಕ್ಫೇ ಜದೀದ್‌ಗೆ ಸೇರಿಸಿದರು. ಅದೇ ರೀತಿ ಇನ್ನೊಬ್ಬ ಬಲಹೀನ ಮಹಿಳೆಗೆ ಚಂದದ ಬಗ್ಗೆ ಹೇಳಿದಾಗ ಅವರು ಮರುದಿನ ಬೆಳಗ್ಗೆ ಎಂಟು ಗಂಟೆಗೆ ಮಿಶನ್ ಹೌಸಿಗೆ ಆಗಮಿಸಿ ಐದು ಸಾವಿರ ಶಿಲ್ಲಿಂಗ್ ವಕ್ಫೇ ಜದೀದ್ ಚಂದವಾಗಿ ನೀಡಿದರು. ಇಂತಹ ಜನರ ಬಗ್ಗೆಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದರು: ಈ ಜನರನ್ನು ನೋಡುವಾಗ ಈ ಜನರು ಹೇಗೆ ತ್ಯಾಗ ಮಾಡುತ್ತಾರೆ ಎಂಬುದರ ಬಗ್ಗೆ ಆಶ್ಚರ್ಯವಾಗುತ್ತದೆ. (ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಯೀನ್. ಸಂಪುಟ–11, ಪುಟ–313 ಅಡಿ ಟಿಪ್ಪಣಿ) ಅವರನ್ನು ಗಮನಿಸಿದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಈ ಜನರು ತ್ಯಾಗಗಳು ಮಾಡುತ್ತಾರೆ.

ಟಾಂಝಾನಿಯಾದ ಅಮೀರ್ ಸಾಹೆಬ್ ಮತ್ತೊಂದು ಘಟನೆ ಬರೆಯುತ್ತಾರೆ ಕಳೆದ ಅನೇಕ ವರ್ಷಗಳಿಂದ ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಬಹಳ ಹಾಳಾಗಿದೆ ಆದರೆ ಅಹ್ಮದಿಯರು ಬಹಳ ನಿಷ್ಠೆಯಿಂದ ಸಾಂಪತ್ತಿಕತ್ಯಾಗ ಮಾಡುತ್ತಾರೆ. ಅರೂಶ ಎಂಬ ಪಟ್ಟಣದ ನಿವಾಸಿ ವಝೀರಿ ಸಾಹೆಬ್ ಅವರು ಪತ್ರಿಕೆಗಳನ್ನು ಮಾರಿ ತನ್ನ ಜೀವನ ಸಾಗಿಸುತ್ತಾರೆ ಅವರಿಗೆ ವಕ್ಫೇ ಜದೀದಿನ ಮಹತ್ವದ ಕುರಿತು ಗಮನಸೆಳೆದಾಗ ಅವರು ತಮ್ಮ ಸಾಮರ್ಥ್ಯಕ್ಕನುಸಾರ ಹಣ ನೀಡುತ್ತಾ ಹೇಳಿದರು ನಾನು ಇನ್ಮುಂದೆ ಪ್ರತಿದಿನ ಒಂದು ಲೋಟ ಟೀ ಕಡಿಮೆ ಮಾಡಿ ಆ ಹಣ ಚಂದದಲ್ಲಿ ನೀಡುವೆನು ಎಂದು ಹೇಳಿದರು. ನೋಡಿರಿ! ಇವರು ಬಡವರಾಗಿದ್ದರು ಅಲ್ಲಾಹನ ಸಂಪ್ರೀತಿ ಹೇಗೆ ಗಳಿಸಬೇಕು ಎಂಬ ಭಾವನೆ ಅವರಲ್ಲಿದೆ.

ಟಾಂಝಾನಿಯಾದ ಅಮೀರ್ ಸಾಹೆಬ್ ಮತ್ತೊಮ್ಮೆ ಬರೆಯುತ್ತಾರೆ ಮಾರಾ ರೀಜನ್ನಿನ ಜಮಾಅತ್ತಿನ ಓರ್ವ ಯುವಕ ಸಾಮಾನ್ಯವಾಗಿ ವಕ್ಫೇ ಜದೀದಿನ ಚಂದ ವರ್ಷ ಮುಗಿಯುವುದಕ್ಕಿಂತ ಮುಂಚೆಯೇ ಪಾವತಿಸುತ್ತಿದ್ದರು ಆದರೆ ಈ ವರ್ಷ ಆರ್ಥಿಕ ಪರಿಸ್ಥಿತಿ ಚನ್ನಾಗಿಲ್ಲದಿದ್ದ ಕಾರಣ 15000 ಶೀಲ್ಲಂಗ್ ಬಾಕಿ ಆಗಿತ್ತು. ಅವರ ಬಳಿ ಸ್ವಲ್ಪ ಹಣ ಮಾತ್ರ ಇತ್ತು. ಶಿಲ್ಲಂಗ್‌ನ ಮೌಲ್ಯವು ಬಹಳ ಕಡಿಮೆ ಇದೆ. ಅವರು ಲೆಕ್ಕ ಮಾಡಿ ಯೋಚಿಸಿದರು ಈ ಹಣ ನಾನು ಈ ತಿಂಗಳು ಮುಗಿಯುವುದಕ್ಕು ಮುಂಚೆ ಚಂದಕ್ಕೆ ನೀಡಿದರೆ ನನಗೆ ಜೀವನ ಸಾಗಿಸುವುದಕ್ಕೆ ಇನ್ನು ಏನು ಉಳಿಯುವುದಿಲ್ಲ ಎಂದು. ಅವರು ಹೇಳುತ್ತಾರೆ ಅಲ್ಲಾಹನ ಮೇಲೆ ಭರವಸೆ ಮಾಡಿ ಈ ಹಣ ಅಲ್ಲಾಹನ ಮಾರ್ಗದಲ್ಲಿ ನೀಡಿದೆನು. ಮಾರನೇಯ ದಿವಸವೇ ಅವರ ಕಚೇರಿಯಿಂದ ಕರೆ ಬಂತು ಕಳೆದ ಮೂರು ತಿಂಗಳ ಅವರ ಕೆಲವು ಬಿಲ್ ಬಾಕಿ ಉಳಿದಿತ್ತು ಅದು ಕ್ಲಿಯರ್ ಆಗಿದೆ ಅದೇ ರೀತಿ ಹೊಸ ವರ್ಷದಿಂದ ಅವರ ವೇತನವು ಹೆಚ್ಚಾಗಿದೆ ಎಂದು. ಅವರ ವಿಶ್ವಾಸವು ಇದು ಚಂದದ ಬರ್‌ಕತ್ತಿನಿಂದ ಸಾಧ್ಯವಾಯಿತು ಎಂದಾಗಿದೆ ತದನಂತರ ಕೆಲವೇ ದಿನಗಳಲ್ಲಿ ಅವರಿಗೆ ಆರು ಪಟ್ಟು ಹೆಚ್ಚು ಹಣ ದೊರಕಿತು. ಇದು ಅಲ್ಲಾಹನ ಅನುಗ್ರಹವಾಗಿದೆ.

ಬುರ್‌ಕಿನೋಫಾಸೊದ ಕಾಯಾರ್ ರೀಜನ್ನಿನ ಮುಬಲ್ಲಿಗ್ ಬರೆಯುತ್ತಾರೆ ಓರ್ವ ಅಹ್ಮದಿ ಅಬ್ದು ಸಾಹೆಬ್ ಹೇಳುತ್ತಾರೆ: ನಾನು ಸಾಂಪತ್ತಿಕ ತ್ಯಾಗಗಳಲ್ಲಿ ಭಾಗವಹಿಸುತ್ತಿದ್ದೆ ಆದರೆ ಕಡ್ಡಾಯವೆಂದು ಭಾವಿಸುತ್ತಿರಲಿಲ್ಲ. ಕಳೆದ ವರ್ಷ ನಾನು ಇನ್ಮುಂದೆ ಎಲ್ಲಾ ಚಂದಗಳಲ್ಲಿ ಕಡ್ಡಾಯವಾಗಿ ಭಾಗವಹಿಸಲು ಪ್ರಯತ್ನ ಮಾಡುವೆನು ಎಂದು ಪ್ರತಿಜ್ಞೆ ಮಾಡಿದೆನು. ಈ ಪ್ರತಿಜ್ಞೆ ಮಾಡಿದ ನಂತರ ಅಲ್ಲಾಹನ ಅನುಗ್ರಹದಿಂದ ನಾನು ಎಲ್ಲಾ ಚಂದಗಳಲ್ಲಿ ಕಡ್ಡಾಯವಾಗಿ ಭಾಗವಹಿಸುತ್ತಿದ್ದೇನೆ ಅದೇ ರೀತಿ ನನ್ನ ಎಲ್ಲಾ ವ್ಯವಹಾರ, ಸಂಪತ್ತು, ಜಾನುವಾರುಗಳು, ಹಾಗೂ ಬೆಳೆ ಮುಂತಾದ ಎಲ್ಲದರಲ್ಲಿಯು ಅಲ್ಲಾಹನ ಅನುಗ್ರಹ ಪ್ರಾರಂಭವಾಯಿತು. ಓಟ್ಟಿನಲ್ಲಿ ನನ್ನ ಎಲ್ಲಾ ಸಮಸ್ಯೆಗಳ ಪರಿಹಾರವು ಆಯಿತು. ಮುಂದುವರಿದು ಅವರು ಹೇಳುತ್ತಾರೆ: ಕಳೆದ ತಿಂಗಳು ನನ್ನ ಪತ್ನಿ ಗರ್ಭಿಣಿ ಆಗಿದ್ದರು ಅವರ ಚಿಕಿತ್ಸೆಗಾಗಿ ನನ್ನ ಹತ್ತಿರ ಹಣವಿರಲಿಲ್ಲ. ಆದರೆ ಹೆರಿಗೆ ಸಂದರ್ಭದಲ್ಲಿ ಅಲ್ಲಾಹನು ಸಹಾಯ ಮಾಡಿದನು. ಹೀಗೆ ನನ್ನ ಮನೆಯಲ್ಲಿ ಹೆಣ್ಣು ಮಗು ಜನಿಸಿತು ಮತ್ತು ಪತ್ನಿಯು ಆರೋಗ್ಯವಾಗಿದ್ದಾರೆ. ಅವರು ಹೇಳುತ್ತಾರೆ ಅವೆಲ್ಲವು ಚಂದದ ಬರ್‌ಕತ್ತಿನಿಂದ ಸಾಧ್ಯವಾಯಿತು.

ರಶ್ಯದ ಮುಬಲ್ಲಿಗ್ ಸಾಹೆಬ್ ಬರೆಯುತ್ತಾರೆ ಬದಾಯಾಂ ಅದ್ವಾರದ್ ಸಾಹೆಬ್ ಆರ್‌ಮೇನಿಯನ್ ಆಗಿದ್ದಾರೆ ಆದರೆ ರಶ್ಯದ ನಿವಾಸಿ ಆಗಿದ್ದಾರೆ ಅವರು ಬಹಳ ಅಧ್ಯಯನ ಮಾಡಿ ಮತ್ತು ಆಲೋಚಿಸಿದ ನಂತರ ಅಹ್ಮದಿ ಆಗಿದ್ದರು. ಅಹ್ಮದಿಯ್ಯತ್ ಸ್ವೀಕರಿಸಿದಾಗಲೇ ಅವರಿಗೆ ಜಮಾಅತ್ತಿನ ಸಾಂಪತ್ತಿಕ ತ್ಯಾಗದ ವ್ಯವಸ್ಥೆಯ ಬಗ್ಗೆ ಹೇಳಲಾಯಿತು. ತದನಂತರ ಅವರು ಪ್ರತೀ ತಿಂಗಳು ಚಂದ ವಕ್ಫೇ ಜದೀದ್, ಚಂದ ತಹ್‌ರೀಕೆ ಜದೀದ್ ಪಾವತಿಸಲು ಪ್ರಾರಂಭಿಸಿದರು. ಕೆಲಸಕ್ಕಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಪ್ರಯಾಣ ಮಾಡುತ್ತಾರೆ. ಪ್ರಯಾಣದಲ್ಲಿದ್ದರೂ ಸಹ ಚಂದ ಪಾವತಿಸುವಲ್ಲಿ ಕಡ್ಡಾಯವಾಗಿದ್ದಾರೆ.

ಅದ್ವಾರದ್ ಸಾಹೆಬ್ ಹೇಳುತ್ತಾರೆ ಜನವರಿ 2020ರಲ್ಲಿ ತನ್ನ ಕೆಲಸದ ಮೆರೆಗೆ ಅವರಿಗೆ ಆರ್‌ಮೇನಿಯಕ್ಕೆ ಹೋಗಬೇಕಾಗಿತ್ತು ಅಲ್ಲಿಂದ ಕಾಝಾನ್‌ಗೆ ಹೋಗಬೇಕಾಗಿತ್ತು. ಈ ಕೆಲಸ ಅವರಿಗೆ ಬಹಳ ಅವಶ್ಯವಾಗಿತ್ತು. ಆದರೆ ಪ್ರಯಾಣ ಮಾಡಲು ಅವರ ಹತ್ತಿರ ಹಣವಿರಲಿಲ್ಲ. ಬಹಳ ಚಿಂತೆಯು ಇತ್ತು ದುಆ ಸಹ ಮಾಡುತ್ತಿದ್ದರು. ಅವರು ಹೇಳುತ್ತಾರೆ 30 ಡಿಸಂಬರ್‌ಗೆ ಒಂದು ಕಂಪನಿಯು ಫೆಬ್ರವರಿಯಲ್ಲಿ ನೀಡಬೇಕಾದ ಹಣ ಅಂದು ಅವರ ಅಕೌಂಟಿಗೆ ಕಳುಹಿಸಿದರು. ಅವರಿಗಲ್ಲದೆ ಇನ್ಯಾರಿಗೂ ಹಣ ನೀಡಲಿಲ್ಲ. ಇದು ಸಾಧ್ಯವಾದದ್ದು ಕೇವಲ ಚಂದದ ಬರ್‌ಕತ್ತಿನಿಂದ ಮಾತ್ರ. ಮುಂದೆ ಅವರು ಬರೆಯುತ್ತಾರೆ ಅಲ್ಲಾಹನ ಸಂಪ್ರೀತಿ ಮತ್ತು ಪ್ರೀತಿಯ ವರ್ತನೆಯನ್ನು ಕೇವಲ ಓರ್ವ ಅಹ್ಮದಿ ಕಾಣಲು ಸಾಧ್ಯ. ಹೀಗೆ ಅಲ್ಲಾಹನು ಅವರ ವಿಶ್ವಾಸ ಮತ್ತಷ್ಟು ದೃಢಗೊಳಿಸಿದನು.

ಐವರಿಕೊಷ್ಟ್‌ನ ಸಾನ್‌ಪಿದ್ರೋ ರೀಜನ್ನಿನ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ. ಇಲ್ಲಿ ಪಿದ್ರೋ ರೀಜನ್ನಿನಲ್ಲಿ 2014ರಲ್ಲಿ ಫತಹಾಕರೋ ಎಂಬ ಊರಿನಲ್ಲಿ 20 ಜನರ ಒಂದು ಜಮಾಅತ್ ಖಾಯೆಮ್ ಆಗಿತ್ತು ಇಲ್ಲಿ ಓರ್ವ ವ್ಯಕ್ತಿ ಜಾರಹ್ ಸಾಹೆಬ್ ಎಂಬವರು. ಅವರ ಸಂಬಂಧ ಬುರ್‌ಕಿನೊಫಾಸೋದಿಂದಿತ್ತು. ಆ ಜಮಾಅತ್ತಿನಲ್ಲಿ ಕೇವಲ ಅವರು ಓರ್ವ ಎಕ್ಟಿವ್ ಸದಸ್ಯರಾಗಿದ್ದರು. ಅವರು ಬುರ್‌ಕಿನಾಫಾಸೋಗೆ ಹಿಂದಿರುಗಿದರು. ಅವರು ಹಿಂದಿರುಗಿದ್ದರಿಂದ ಬಹಳ ಚಿಂತೆ ಆಗುತ್ತಿತ್ತು ಏಕೆಂದರೆ ಉಳಿದ ಜನರ ತರಬೇತಿ ಅಷ್ಟಿರಲಿಲ್ಲ. ಅವರ ತರಬೇತಿ ಆಗಬೇಕಾಗಿತ್ತು. ಅವರ ಪುತ್ರ ಈಸಜಾರ ಅವರು ವಿವಾಹಿತರಗಿದ್ದರು ಕೃಷಿ ಕೆಲಸ ಮಾಡುತ್ತಿದ್ದರು. ಅವರನ್ನು ಭೇಟಿ ಮಾಡಿ ಅವರಿಗೆ ಖುದ್ದಾಮುಲ್ ಅಹ್ಮದಿಯಾದ ರಾಷ್ಟ್ರೀಯ ಇಜ್‌ತಿಮಾದಲ್ಲಿ ಭಾಗವಹಿಸಲು ಹೇಳಲಾಯಿತು. ಅದೇ ರೀತಿ ಅವರಿಗೆ ಜಮಾಅತ್ತಿನ ಬಗ್ಗೆ ಮತ್ತು ಜಮಾಅತ್ತಿನ ನಿಝಾಮಿನ ಕುರಿತು ಹಾಗೂ ಜಮಾಅತ್ತಿನೊಂದಿಗೆ ದೃಢ ಸಂಬಂಧವಿರಿಸಲು ಅದೇ ರೀತಿ ದುಆ ಮಾಡುತ್ತಿರಲು ಹೇಳಲಾಯಿತು. ಅವರು ಹೇಳುತ್ತಾರೆ ತದನಂತರ ಅವರು ಡಿಸಂಬರ್‌ನಲ್ಲಿ ವಾರ್ಷಿಕ ಸಮ್ಮೇಳನದ ಮುಂಚೆ ನನ್ನ ಬಳಿ ಬಂದು 10000 ಫ್ರಾಂಕ್ ಸೀಫಾ ಹಣ ಚಂದ ನೀಡಿದರು. ಇದಕ್ಕೆ ನಾನು ಆಶ್ಚರ್ಯ ಚಕಿತನಾಗಿ ಅವರೊಂದಿಗೆ ಹೇಳಿದೆ ನಿಮಗೆ ಈ ಹಣ ನೀಡಲು ಹೇಗೆ ಸಾಧ್ಯವಾಯಿತು? ಅದಕ್ಕೆ ಅವರು ಹೇಳಿದರು ನಾನು ಚಂದ ನೀಡಲು ಪ್ರಾರಂಭಿಸಿದಾಗ ಅಲ್ಲಾಹನ ಅನುಗ್ರಹ ನನ್ನ ಮೇಲೆ ಬಹಳಷ್ಟು ಆಯಿತು. ನನ್ನ ಕೃಷಿ ಕಾರ್ಯಗಳಲ್ಲಿ ನನಗೆ ಅನ್ಯರಿಂದ ಹೆಚ್ಚು ಆದಾಯ ಲಭಿಸಿತು. ಕಳೆದ ದಿನಗಳ ಮುಂಚೆ ನಾನು ಒಂದು ಸ್ವಪ್ನ ಕಂಡೆನು ಅದರಲ್ಲಿ ಓರ್ವ ಜ್ಯೋತಿರ್ಮಯ ಹಿರಿಯ ವ್ಯಕ್ತಿ ಜನರನ್ನು ಒಳಿತಿನ ಕಡೆ ಆಹ್ವಾನಿಸುತ್ತಿದ್ದಾರೆ. ಅವರು ಹೇಳುತ್ತಾರೆ ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದರು. ಅವರು ಜಗತ್ತನ್ನು ಒಳಿತಿನ ಕಡೆ

ಕರೆಯುತ್ತಿದ್ದರು. ಅಲ್ಲಾಹನಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ನನಗೆ ಅಲ್ಲಾಹನು ಜಮಾಅತೆ ಅಹ್ಮದಿಯಾದಲ್ಲಿ ಸೇರಲು ಸೌಭಾಗ್ಯ ಕಲ್ಪಿಸಿಕೊಟ್ಟನು. ಈಗ ನಾನು ಕಡ್ಡಾಯವಾಗಿ ಚಂದ ನೀಡುವೆನು ಎಂದು ಹೇಳಿದರು.

ಭಾರತದ ಒಬ್ಬ ಇನ್ಸಪೆಕ್ಟರ್ ವಕ್ಫೇ ಜದೀದ್ ಬರೆಯುತ್ತಾರೆ: ಒಬ್ಬ ಮಾತನಾಡಲಾರದ ಕಿವಿ ಕೇಳಿಸದ ಬಾಲಿಕೆ ವಕ್ಫೇ ಜದೀದ್ ಚಂದ ತಪ್ಪದೆ ನೀಡುತ್ತಿದ್ದಾಳೆ. ಅವಳು ಒಂದು ಚೀಲದಲ್ಲಿ ತನಗೆ ದೊರೆತ ಹಣ ಸಂಗ್ರಹಿಸುತ್ತಾಳೆ. ಅವಳು ಆ ಹಣವನ್ನು ಚಂದವಾಗಿ ನೀಡುತ್ತಾಳೆ. ಬೇರೆಯವರು ಚಂದ ನೀಡುವುದನ್ನು ನೋಡುವಾಗ ಅವಳಿಗೆ ಚಂದ ನೀಡುವ ಆಸಕ್ತಿ ತಲೆದೋರುತ್ತದೆ.

ಅದೇ ರೀತಿ ಲೈಬೇರಿಯಾದಿಂದ ಓರ್ವ ಮುಬಲ್ಲಿಗ್ ಸಾಹೆಬರು ಬರೆಯುತ್ತಾರೆ ಕೇಪ್ ಮೌಂಟ್ ಕೌಂಟಿಯ ಒಂದು ಜಮಾಅತ್‌ನಲ್ಲಿ ಮುಗ್‌ರಿಬ್ ಮತ್ತು ಇಶಾ ನಮಾಝಿನ ನಂತರ ಜಮಾಅತ್ತಿನ ಸದಸ್ಯರನ್ನು ನಾನು ವಕ್ಫೇ ಜದೀದಿನ ಚಂದದ ಯೋಜನೆಯ ಬಗ್ಗೆ ತಿಳಿಸಿದೆನು ಸದಸ್ಯರು ಸಾಮಾನ್ಯವಾಗಿ ತಮ್ಮ ಮತ್ತು ತಮ್ಮ ಕುಟುಂಬದವರ ಚಂದ ನೀಡಲು ಪ್ರಾರಂಭಿಸಿದರು. ಅದೇ ಸಂದರ್ಭದಲ್ಲಿ ಚಿಕ್ಕ ಪ್ರಾಯದ ಎರಡು ಬಾಲಕರು ಸುಲೈಮಾನ್ ಮತ್ತು ಅಬ್‌ದುಲ್ಲಾ ಕುಮಾರ ಇವರಿಬ್ಬರು ಮಸೀದಿಯಿಂದ ಎದ್ದು ಹೋದರು. ಸ್ವಲ್ಪ ಸಮಯದ ನಂತರ ಹಿಂದಿರುಗಿ ಬಂದು ಇಪತ್ತು ಇಪ್ಪತ್ತು ಲೈಬೇರಿಯನ್ ಡಾಲರ್ ತಂದು ಚಂದ ನೀಡಿದರು. ಅವರು ಹೇಳುತ್ತಾರೆ ಸಾಮಾನ್ಯವಾಗಿ ಅಲ್ಲಿನ ಜನರು ತಮ್ಮ ಮಕ್ಕಳ ಚಂದ ಸ್ವಯಂ ನೀಡುವವರಾಗಿದ್ದರಿಂದ ನಾನು ಅವರಲ್ಲಿ ಚಂದ ಏಕೆ ನೀಡಿದ್ದೀರಿ ಎಂದು ವಿಚಾರಿಸೋಣ ಎಂಬ ಯೋಚನೆ ಬಂತು. ನಾನು ಅವರಲ್ಲಿ ಇದರ ಬಗ್ಗೆ ಕೇಳಿದಾಗ ಅವರು ಹೇಳಿದರು ನಾವು ಖಲೀಫತುಲ್ ಮಸೀಹ್ ಅವರಿಂದ ಮಕ್ಕಳು ಸಹ ಈ ಯೋಜನೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದ್ದನ್ನು ಕೇಳಿದ್ದೇವೆ. ಆದ್ದರಿಂದ ನಾವು ಹಝ್ರತ್ ಖಲೀಫತುಲ್ ಮಸೀಹ್ ಅವರ ಆದೇಶದ ಪ್ರಕಾರ ಹಣ ಸಂಗ್ರಹಿಸಿ ಸ್ವತಃ ಈ ಯೋಜನೆಯಲ್ಲಿ ಭಾಗವಹಿಸಿದ್ದೇವೆ. ದೂರ ದೇಶಗಳಲ್ಲಿ ವಾಸಿಸುತ್ತಿರುವ ಈ ಮಕ್ಕಳು ಅವರು ಖಲೀಫತುಲ್ ಮಸೀಹ್ ಅವರನ್ನು ನೋಡಿಯು ಇಲ್ಲ ಅವರ ಮನಸ್ಸಿನಲ್ಲಿ ಇಂತಹ ಭಾವನೆ ಕೇವಲ ಅಲ್ಲಾಹನೆ ನೀಡಲು ಸಾಧ್ಯ. ಅಲ್ಲಾಹನು ಆ ಜನರನ್ನು ನಿಷ್ಠೆಯಲ್ಲಿ ಇನ್ನಷ್ಟು ವರ್ಧಿಸಲಿ. ಹೀಗೆ ಮಕ್ಕಳಾಗಲಿ, ಹಿರಿಯರಾಗಲಿ, ಹೊಸ ಅಹ್ಮದಿ ಆಗಲಿ ಅಥವಾ ಹಳೆಯ ಅಹ್ಮದಿ ಆಗಲಿ ಅವರೆಲ್ಲರಿಗೂ ಅಲ್ಲಾಹನ ಸಾಮಿಪ್ಯಗಳಿಸಬೇಕಾದರೆ ಅದಕ್ಕಿರುವ ಒಂದೇ ದಾರಿ ಅದು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಮಾತ್ರ ಎಂದು ತಿಳಿದಿದೆ. ಅದೇ ರೀತಿ ಇನ್ನು ಕೆಲವರಿಗೆ ಅಲ್ಲಾಹನು ಸ್ವತಃ ತಿಳಿಸುತ್ತಾನೆ ಅಂತಹ ಘಟನೆಗಳನ್ನು ಕಂಡಿದ್ದೇವೆ. ಈ ಜನರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆದೇಶದ ಪ್ರಕಾರ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ ಗೌರವಾನ್ವಿತರಾಗುತ್ತಾರೆ.

ಇನ್ನು ನಾನು ಕಳೆದ ವರ್ಷದ ವಕ್ಫೇ ಜದೀದ್ ಚಂದದ ಬಲಿದಾನದ ಬಗ್ಗೆ ವರದಿ ನೀಡುತ್ತೇನೆ ಮತ್ತು ಹೊಸ ವರ್ಷದ ಪ್ರಕಟಣೆ ಸಹ ನೀಡುವೆನು. ಅಲ್ಲಾಹನ ಅನುಗ್ರಹದಿಂದ ವಕ್ಫೇ ಜದೀದಿನ 62ನೇ ವರ್ಷ ಡಿಸೆಂಬರ್ ದಿನಾಂಕ 31ರಂದು ಮುಕ್ತಾಯಗೊಂಡಿತು. ಜನವರಿ ದಿನಾಂಕ 1ರಿಂದ ಹೊಸ ವರ್ಷ ಆರಂಭವಾಯಿತು. ಈ ಕಳೆದ ವರ್ಷ ಜಮಾಅತ್‌ಗಳು 96 ಲಕ್ಷ 43 ಸಾವಿರ ಪೌಂಡ್ ವಕ್ಫೇ ಜದೀದ್ ಚಂದವಾಗಿ ನೀಡಿದುವು. ಇದು ಕಳೆದ ವರ್ಷಕ್ಕಿಂತ 5 ಲಕ್ಷ ಪೌಂಡ್ ಹೆಚ್ಚಿಗೆ ಆಗಿದೆ.

ಈ ವರ್ಷ ವಸೂಲಿಯಲ್ಲಿ ಬ್ರಿಟನಿನ ಜಮಾಅತ್‌ಗಳು ಜೊತೆಗೂಡಿ ಲೋಕದಲ್ಲಿ ಪ್ರಥಮ ಸ್ಥಾನದಲ್ಲಿದೆ. ಅನಂತರ ಪಾಕಿಸ್ಥಾನ, ಜರ್ಮನಿ, ಅಮೇರಿಕ, ಕೆನಡ, ಭಾರತ, ಆಸ್ಟ್ರೇಲಿಯಾ, ಇಂಡೋನೇಶಿಯ, ಅನಂತರ ಮಧ್ಯಪೂರ್ವದ ಎರಡು ದೇಶಗಳು ಅನುಕ್ರಮವಾಗಿ ಸ್ಥಾನ ಪಡೆದಿವೆ. ಅಮಿರ್ ಸಾಹೇಬರು ಒಮ್ಮೆ ಹೇಳಿದ್ದರು ವಕ್ಫೇ ಜದೀದಿನಲ್ಲಿ ನಾವು ಮುಂದಾಗುವೆವು ಎಂದು ಅವರು ತಮ್ಮ ಮಾತಿನಂತೆ ನಡೆದರು.

ಸ್ಥಳೀಯ ಕರೆನ್ಸಿಯಲ್ಲಿ ಕಳೆದ ವರ್ಷಕ್ಕಿಂತ ಹೆಚ್ಚಿಗೆ ಚಂದ ನೀಡಿದ ದೇಶಗಳು ಅನುಕ್ರಮವಾಗಿ ಇಂಡೋನೇಶಿಯ, ಜರ್ಮನಿ, ಅಮೇರಿಕ, ಅನಂತರ ಇತರ ಜಮಾಅತ್‌ಗಳಿವೆ. ಭಾರತ ಸಹ ಚಂದದಲ್ಲಿ ವರ್ಧನೆ ಮಾಡಿದೆ. ಕೆನಡ, ಬ್ರಿಟನ್, ಮಧ್ಯಪೂರ್ವದ ದೇಶಗಳು, ಪಾಕಿಸ್ಥಾನ, ಆಸ್ಟ್ರೇಲಿಯಾ ಮೊದಲಾದವುಗಳಿಗಿಂತ ಭಾರತದ ಸ್ಥಳೀಯ ಕರೆನ್ಸಿಯಲ್ಲಿ ಉಂಟಾದ ವರ್ಧನೆ ಈ ದೇಶಗಳ ತ್ಯಾಗಗಳಿಗಿಂತ ಹೆಚ್ಚಿಗೆ ಇದೆ. ಈ ಕಾರಣದಿಂದ ಭಾರತ ಐದನೆ ಸ್ಥಾನದಲ್ಲಿದೆ.

ಆಫ್ರೀಕದಲ್ಲಿ ವಸೂಲಿಯಾದ ಪ್ರಕಾರ ಘಾನ ಪ್ರಥಮ ಸ್ಥಾನದಲ್ಲಿದೆ, ಎರಡನೇಯದಾಗಿ ನೈಜೀರಿಯಾ, ಮೂರನೇಯ ಸ್ಥಾನ ಬುರ್‌ಕೀನ ಫಾಸೊ, ನಾಲ್ಕನೇಯ ಸ್ಥಾನ ಟಾಂಝಾನಿಯಾ, ಐದನೇ ಸ್ಥಾನ ಬೆನನ್, ಆರನೇಯ ಸ್ಥಾನ ಗೇಂಬೀಯ, ಏಳನೇಯ ಸ್ಥಾನದಲ್ಲಿ ಕೀನಿಯಾ, ಎಂಟನೇಯ ಸ್ಥಾನ ಮಾಲಿ, ಒಂಭತ್ತನೇಯ ಸ್ಥಾನ ಸೇರಾಲಿಯೋನ್ ಹಾಗೂ ಹತ್ತನೇಯ ಸ್ಥಾನ ಕಾಂಗೋ ಕಂಶಾಶಾ ಆಗಿದೆ.

ಈ ವರ್ಷ ಅಲ್ಲಾಹನ ಅನುಗ್ರಹದಿಂದ ವಕ್ಫೇ ಜದೀದ್ ಚಂದ ನೀಡಿದವರ ಸಂಖ್ಯೆ ಹದಿನೆಂಟು ಲಕ್ಷ ಇಪ್ಪತ್ತೊಂದು ಸಾವಿರ. ಈ ವರ್ಷ 89 ಸಾವಿರ ಚಂದಾದಾರರ ವರ್ಧನೆ ಆಗಿದೆ. ಸಂಖ್ಯೆಯಲ್ಲಿ ವರ್ಧಿಸುವ ಪ್ರಕಾರ ಈ ವರ್ಷ ಕೇಮರೂನ್ ಮೊದಲನೇಯ ಸ್ಥಾನ ಗಳಿಸಿದೆ, ತದನಂತರ ಸೇನಿಗಾಲ್, ಸೆರಾಲಿಯೊನ್, ನೈಜೀರಿಯಾ, ಬುರ್‌ಕಿನೊಫಾಸೊ, ಇನ್‌ಡೊನೇಶಿಯಾ ಮುಂತಾದ ಜಮಾಅತ್‌ಗಳಿವೆ.

ಒಟ್ಟಾರೆ ವಸೂಲಿಯ ಪ್ರಕಾರ ಬಿಟನ್ನಿನ ಹತ್ತು ಜಮಾಅತ್‌ಗಳು ಇಂತಿವೆ ಮೊದಲನೆಯದಾಗಿ ಇಸ್ಲಾಮಬಾದ್. ಎರಡನೇಯ ಸ್ಥಾನ ಆಲ್ಡರ್‌ಶಾಟ್, ಮೂರನೇಯ ಸ್ಥಾನ ವೊಶ್ಟರ್ ಪಾರ್ಕ್, ತದನಂತರ ಬ್ರಮನ್‌ಗ್ಹಮ್ ಸೌತ್, ಮಸ್ಜಿದ್ ಫಝುಲ್, ಪಟ್ನಿ, ಜಲಮಗ್ಹಮ್, ನ್ಯು ಮೊಲ್ಡನ್, ಬ್ರಮನಗ್ಹಮ್ ವೆಶ್ಟ್, ಮತ್ತು ಹೌಸ್ಲೋ ನಾರ್ಥ್ ಆಗಿದೆ ಅದೇ ರೀತಿ ರೀಜನ್ನಿನ ಪ್ರಕಾರ ಮೊದಲನೇಯ ಐದು ರೀಜನ್‌ಗಳು ಇಂತಿವೆ: ಬೈತುಲ್ ಫುತುಹ್ ರೀಜನ್ ಮೊದಲನೇಯ ಸ್ಥಾನದಲ್ಲಿದೆ, ತದನಂತರ ಮಸ್ಜಿದ್ ಫಝುಲ್ ರೀಜನ್, ಮಿಡ್‌ಲೇಂಡ್, ಇಸ್ಲಾಮಬಾದ್, ಬೈತುಲ್ ಇಹ್ಸಾನ್ ರೀಜನ್ ಆಗಿದೆ. ದಫ್‌ತರ್ ಅತ್ಫಾಲಿನ ಪ್ರಕಾರ ಮೊದಲು ಹತ್ತು ಜಮಾಅತ್ತುಗಳಲ್ಲಿ ಆಲ್ಬರ್‌ಶಾಡ್ ಮೊದಲನೇಯ ಸ್ಥಾನದಲ್ಲಿದೆ, ರೊಹಮ್‌ಪ್ಟನ್, ಪಟ್ನಿ, ಇಸ್ಲಾಮಬಾದ್, ಮಚಮ್ ಪಾರ್ಕ್, ಚೀಮ್, ಲೆಮಂಗ್‌ಟನ್ ಸ್ಪಾ, ಓಶ್ಟರ್ ಪಾರ್ಕ್, ರೇಂಝ್ ಪಾರ್ಕ್, ಸರ್ಬ್‌ಟನ್.

ಪಾಕಿಸ್ತಾನದಲ್ಲಿ ಚಂದ ಬಾಲಿಗಾನ್‌ದಲ್ಲಿ ಮೊದಲು ಮೂರು ಜಮಾಅತ್‌ಗಳಿವೆ ಅದರಲ್ಲಿ ಮೊದಲನೆಯದು ಲಾಹೋರ್, ನಂತರ ರಬ್ವಹ್, ಮೂರನೆಯದು ಕರಾಚಿ ಆಗಿದೆ. ಪಾಕಿಸ್ಥಾನದ ಸ್ಥಿತಿ ಆರ್ಥಿಕವಾಗಿ ಕೆಟ್ಟಿದ್ದರಿಂದ ಅವರ ಕರೆನ್ಸಿಯು ಮೌಲ್ಯ ಕುಸಿದಿದೆ. ಆದ್ದರಿಂದ ಅವರ ಸ್ಥಾನ ಹಿಂದಕ್ಕೆ ಸರಿಯಿತು ಕರೆನ್ಸಿ ಮೌಲ್ಯ ಚೆನ್ನಾಗಿರುತ್ತಿದ್ದರೆ ಇಂದು ಸಹ ಪಾಕಿಸ್ಥಾನ ಪ್ರಥಮ ಸ್ಥಾನದಲ್ಲಿರುತ್ತಿತ್ತು. ಚಂದ ಬಾಲಿಗಾನ್‌ನಲ್ಲಿ ಪಾಕಿಸ್ಥಾನದ ಜಿಲ್ಲೆಗಳಲ್ಲಿ ಇಸ್ಲಾಮಬಾದ್, ಸಿಯಾಲ್‌ಕೋಟ್, ರಾವಲ್ಪಿಂಡಿ, ಗುಜ್ರಾಂವಾಲ, ಮುಲ್ತಾನ್, ಉಮರ್‌ಕೋಟ್, ಹೈದ್ರಬಾದ್, ಡೇರಗಾಝಿ ಖಾನ್, ಮೀರ್‌ಪೂರ್ ಖಾಸ್ ಮತ್ತು ಪೇಶಾವರ್ ಆಗಿದೆ. ಒಟ್ಟು ವುಸೂಲಿಯ ಪ್ರಕಾರ ಮೊದಲು ಹತ್ತು ಜಮಾಅತ್ತುಗಳಲ್ಲಿ ಇಸ್ಲಾಮಬಾದ್ ಪಟ್ಟಣ, ಟೌನ್‌ಶಿಪ್ ಲಾಹೋರ್, ಡಿಫೆನ್ಸ್ ಲಾಹೋರ್, ದಾರುಝ್ಝಿಕರ್ ಲಾಹೋರ್, ಗುಲ್‌ಷನ್ ಇಖ್ಬಾಲ್ ಕರಾಚಿ, ಸಮನಾಬಾದ್ ಲಾಹೋರ್, ರಾವಲ್ಪಿಂಡಿ ಪಟ್ಟಣ, ಅಝೀಝಾಬಾದ್ ಕರಾಚಿ, ಗುಲ್‌ಷನ್ ಜಾಮಿ ಕರಾಚಿ ಮತ್ತು ದೆಹಲಿ ಗೇಟ್ ಲಾಹೋರ್.

ಅಲ್ಲಿ ಎಲ್ಲಾ ರೀತಿಯಲ್ಲು ಪರಸ್ಥಿತಿ ಕೆಟ್ಟದಾಗಿದ್ದರು ಅಲ್ಲಾಹನ ಅನುಗ್ರಹದಿಂದ ಅಲ್ಲಿಯೂ ಬಲಿದಾನ ನೀಡುವವರಿದ್ದಾರೆ. ದಫ್‌ತರ್ ಅತ್‌ಫಾಲ್‌ನಲ್ಲಿ ಪಾಕಿಸ್ಥಾನದ ಮೂರು ದೊಡ್ಡ ಜಮಾಅತ್‌ಗಳು ಇಂತಿವೆ ಮೊದಲನೆಯದಾಗಿ ಲಾಹೋರ್ ಎರಡನೆಯದಾಗಿ ಕರಾಚಿ ಮತ್ತು ಮೂರನೆಯದಾಗಿ ರಬ್ವಹ್ ಆಗಿದೆ ಮತ್ತು ಜಿಲ್ಲೆಗಳಲ್ಲಿ ಸಿಯಾಲ್‌ಕೋಟ್ ಪ್ರಥಮ ಸ್ಥಾನ, ಗುಜ್ರಾಂವಾಲ ಎರಡನೇಯ ಸ್ಥಾನ, ಸರ್‌ಗೋಧ, ಹೈದ್ರಬಾದ್, ಡೇರಗಾಝಿ ಖಾನ್, ಶೇಖುಪುರ, ಮೀರ್‌ಪುರ್ ಖಾಸ್, ಉಮರ್‌ಕೋಟ್, ಓಕಾಡ, ಪೆಶಾವರ್ ಆಗಿದೆ.

ವಸೂಲಿಯ ಪ್ರಕಾರ ಜರ್ಮನಿಯ ಐದು ಜಮಾಅತ್‌ಗಳು ಹೀಗಿವೆ: ಹೆಮ್‌ಬರ್ಗ್ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ ಫ್ರೆಂಕ್‌ಫೋರ್ಟ್, ತೃತೀಯ ಸ್ಥಾನ ಡಟ್ಸನ್ ಬಾಗ್, ಚಾರ್‌ಗ್ರಾಸ್‌ಗೆರೌ, ವೇಝ್‌ಬಾಡನ್. ಚಂದ ಬಾಲಿಗಾನ್‌ನಲ್ಲಿ ವಕ್ಫೇ ಜದೀದಿನಲ್ಲಿ ಮೊದಲು ಹತ್ತು ಜಮಾಅತ್ತುಗಳಲ್ಲಿ ನೋಯೀಸ್, ರೋಡರ್ ಮಾರ್ಕ್, ನೀಡಾ, ಮೆಹ್ದಿ ಆಬಾದ್, ಫ್ಲೋರಿಸ್ ಹಾಎಮ್, ಫ್ರೇಡ್ ಬರ್ಗ್, ಬೆನ್‌ಝ್ ಹಾಎಮ್, ಲಾಂಗನ್, ಕೊಬ್ಲಂಝ್, ಹನಾಒ ಮತ್ತು ಪೆನಿ ಬರ್ಗ್ ಆಗಿದೆ. ದಫ್‌ತರ್ ಅತ್‌ಫಾಲ್‌ನಲ್ಲಿ ಮೊದಲು ಐದು ರೀಜನ್‌ಗಳು ಹೀಗಿವೆ ಹೆಸನ್ ಸೌಥ್ ಈಶ್ಟ್, ಹೇಸನ್ ಮೆಟೆ, ತಾಉಂಸ್, ಪೇಸನ್ ಸೌಥ್ ಮತ್ತು ರೈನ್‌ಲೇಂಡ್ ಫಾಲ್‌ಝ್. ಏನೆ ಜಮಾಅತ್‌ಗಳ ಈ ಹೆಸರಾಗಿರಲಿ ಜರ್ಮನಿಯವರೆ ಸ್ವತಃ ತಿದ್ದುಪಡಿ ಮಾಡಿಕೊಳ್ಳಿರೀ.

ವಸೂಲಿಯ ಪ್ರಕಾರ ಅಮೇರಿಕಾದ ಮೊದಲು ಹತ್ತು ಜಮಾಅತ್‌ಗಳು ಹೀಗಿವೆ: ಮೇರಿ ಲೇಂಡ್, ಸಿಲಿಕೋನ್ ವೇಲಿ, ಲಾಸ್ ಎಂಜಿಲೀಸ್, ಹ್ಯುಸ್ಟನ್, ಸೆಂಟ್ರಲ್ ವರ್ಜೀನಿಯ, ಸೇಯಿಟಲ್, ಡೆಟ್ರೈಟ್, ಸೌಥ್ ವರ್ಜಿನಿಯಾ, ಶಿಕಾಗೋ, ನಾರ್ಥ್ ನರ್ಜಿನಿಯಾ.

ವಸೂಲಿಯ ಪ್ರಕಾರ ಕೆನೆಡಾದ ಜಮಾಅತ್‌ಗಳು ವಾನ್ ಮೊದಲನೇಯ ಸ್ಥಾನ, ಕೆಲಿಗರಿ ಎರಡನೇಯ ಸ್ಥಾನ, ಪೀಸ್ ವಿಲೇಜ್ ಮೂರನೇಯ ಸ್ಥಾನ, ವೆಂಕೋವರ್ ನಾಲ್ಕನೇಯ ಸ್ಥಾನ, ಮಿಸಸ್ ಸಾಗ ಐದನೇಯ ಸ್ಥಾನ ಪಡೆದಿದೆ. ದೊಡ್ಡ ಜಮಾಅತ್‌ಗಳಲ್ಲಿ ಡರ್‌ಹಮ್, ಎಡ್ಮಿಂಟನ್ ವೆಶ್ಟ್, ಮಿಲ್ಟನ್ ವೆಶ್ಟ್,

ಹೇಮಿಲ್ಟನ್ ಮೌಂಟನ್, ಅಟೋವ ಈಶ್ಟ್, ಏರ್ಡ್ರೀ, ವೇನಿ ಪೇಗ್ ಮತ್ತು ಏಬಿಟ್ಸ್ ಫೋರ್ಡ್ ಆಗಿದೆ.

ದಫ್ತರ್ ಅತ್ಫಾಲ್‌ನ ಮೊದಲು ಐದು ಅಮಾರತ್‌ಗಳು ಇಂತಿವೆ ವಾಗನ್, ನನ್ನ ಪ್ರಕಾರ ಇದು ವಾನ್ ಅಗಬೇಕಾಗಿತ್ತು ಇವರ ಕಣ್ತಪ್ಪಿನಿಂದ ವಾಗನ್ ಆಗಿರಬಹುದು, ಕೆಲಿಗರೀ, ಪೀಸ್ ವಿಲೇಜ್, ವೆಸ್ಟನ್. ದಫ್ತರ್ ಅತ್ಫಾಲಿನ ಐದು ಜಮಅತ್‌ಗಳು ಇಂತಿವೆ ಡರ್‌ಹಮ್, ಬ್ರೆಟ್‌ಫೋರ್ಟ್, ಮಿಲ್ಟನ್ ವೆಶ್ಟ್ ಮತ್ತು ಏರ್‌ಡ್ರೀ, ಹೆಮಿಲ್ಟನ್ ಮೌಂಟನ್ ಆಗಿದೆ.

ಭಾರತದ ಪ್ರಾಂತ್ಯಗಳಲ್ಲಿ ಕೇರಳ ಪ್ರಥಮ ಸ್ಥಾನದಲ್ಲಿದೆ. ಅನಂತರ ಜಮ್ಮುಕಾಶ್ಮೀರ, ಕರ್ನಾಟಕ, ತಮಿಳುನಾಡು, ತೆಲಂಗಾಣ, ಒಡಿಶ, ಪಂಜಾಬ್, ಪಶ್ಚಿಮ ಬಂಗಾಳ, ದೆಹಲಿ, ಉತ್ತರಪ್ರದೇಶ, ಅನುಕ್ರಮವಾಗಿ ಸ್ಥಾನ ಪಡೆದಿವೆ. ಚಂದ ವಸೂಲಿಯಾದ ಪ್ರಕಾರ ಭಾರತದ ಸ್ಥಳೀಯ ಜಮಾಅತ್‌ಗಳು ಪತ್ತಪಿರಿಯಂ, ಖಾದಿಯಾನ್, ಹೈದರಾಬಾದ್, ಕೋಝಿಕ್ಕೋಡ್, ಬೆಂಗಳೂರು, ಕೊಯಂಬತ್ತೂರು, ಕೊಲ್ಕತ್ತ, ಕರುಳಾಯಿ, ಕೇರಂಗ್, ಪಯಂಗಾಡಿ.

ಆಸ್ಟ್ರೇಲಿಯಾದ ಹತ್ತು ಜಮಾಅತ್‌ಗಳಲ್ಲಿ ಮೊದಲನೆಯ ಸ್ಥಾನ ಮೆಲ್‌ಬೋರ್ನ್ ಲಾಂಗ್ ವಾರಿನ್, ಕಾಸಿಲ್ ಹಿಲ್, ಮೆಲ್‌ಬೊರ್ನ್ ವಿರಕ್, ಮರ್ಸಿಡನ್ ಪಾರ್ಕ್, ಏಡಿಲೇಡ್ ಸೌಥ್, ಎಮ್.ಟಿ.ಡ್ರೃಟ್, ಪೆನ್ರಿಥ್. ಅತ್‌ಫಾಲ್‌ನಲ್ಲಿ ಮೆಲ್‌ಬೋರ್ನ್ ಲಾಂಗ್ ವಾರಿನ್, ಏಡಿಲೇಡ್ ಸೌಥ್, ಮೆಲ್‌ಬೊರ್ನ್ ವೆರಿಕ್, ಕಾಸಿಲ್ ಹಿಲ್, ಮೆಲ್‌ಬೊನ್ ವೆರಿಕ್, ಎಂ.ಡಿ.ಡ್ರೃಟ್, ಪೆನ್ರಿಥ್, ಕೆನ್ಬರ್ ಮತ್ತು ಪಿರ್ಥ್ ಆಗಿದೆ.

ಇಲ್ಲಿಯು ಸಹ ಅಗ್ನಿಯು ಬಹಳ ಅನಾಹುತ ಉಂಟು ಮಾಡಿದೆ. ಅಲ್ಲಾಹನು ಇವರ ಮೇಳೆ ಕರುಣೆ ತೋರಲಿ ಮತ್ತು ಇವರೆಲ್ಲರು ನಿಜವಾಗಿಯು ತನ್ನ ಸೃಷ್ಟಿಕರ್ತನನ್ನು ನಂಬಲು ಸೌಭಾಗ್ಯ ದೊರಕಿಸಲಿ. ಇದಲ್ಲದೆ ಅಹ್ಮದಿಯರು ಅಲ್ಲಿ ಅಲ್ಲಾಹನ ಅನುಗ್ರಹದಿಂದ ಬಲೀದಾನ ನೀಡುವವರಾಗಿದ್ದಾರೆ. ಅಲ್ಲಾಹನು ವಿಶ್ವದಾದ್ಯಂತ ಬಲಿದಾನ ನೀಡುವವರೆಲ್ಲರ ಆತ್ಮ ಮತ್ತು ಸಂಪತ್ತಿನಲ್ಲಿ ಬರ್‌ಕತ್ ನೀಡಲಿ.

ಪಾಕಿಸ್ಥಾನದ ಸ್ಥಿತಿ ಆರ್ಥಿಕವಾಗಿ ಕೆಟ್ಟಿದೆ. ಆದುದರಿಂದ ಅವರ ಕರೆನ್ಸಿಯ ಮೌಲ್ಯ ಕುಸಿದಿದೆ. ಆದುದರಿಂದ ಅವರ ಸ್ಥಾನ ಹಿಂದಕ್ಕೆ ಸರಿಯಿತು. ಹೀಗಿದ್ದರೂ ಅವರ ತ್ಯಾಗದಲ್ಲಿ ಕೊರತೆ ಆಗಿಲ್ಲ. ಅಲ್ಲದೆ ಈ ಪ್ರದೇಶದಲ್ಲಿ ಭಾರತ ಪಾಕಿಸ್ಥಾನಗಳ ಸಂಘರ್ಷ ವರ್ಧಿಸಿದೆ. ಭಾರತದ ಒಳಗೆ ಸಹ ಸಮಾಚಾರ ದೊರೆತ ಪ್ರಕಾರ ಸಾಕಷ್ಟು ಕೆಟ್ಟ ಸ್ಥಿತಿ ಇದೆ. ಒಟ್ಟಾರೆಯಾಗಿ ಲೋಕದ ಸ್ಥಿತಿ ಹೇಗಿದೆ ಎಂದರೆ ಅದು ತನ್ನ ವಿನಾಶಕ್ಕೆ ಕರೆ ನೀಡುತ್ತಿದೆ. ಮಧ್ಯಪೂರ್ವದ ಸ್ಥಿತಿ ಸಹ ಕೆಟ್ಟುಹೋಗುತ್ತಿದೆ. ಇರಾನ್, ಅಮೇರಿಕ ಇಸ್ರಾಯೇಲ್ ಮಧ್ಯೆ ಯುದ್ಧದ ಅಪಾಯ ವರ್ಧಿಸುತ್ತಿದೆ. ಮುಸ್ಲಿಮ್ ದೇಶಗಳಲ್ಲಿ ಪರಸ್ಪರ ಐಕ್ಯವಿಲ್ಲ. ಆದುದರಿಂದ ಲೋಕವು ವಿನಾಶದಿಂದ ರಕ್ಷಿಸಲ್ಪಡಲು ಮತ್ತು ಸೃಷ್ಟಿಕರ್ತನ ಕಡೆಗೆ ಬರಲು ನಾವು ಬಹಳ ಪ್ರಾರ್ಥನೆ ಮಾಡಬೇಕು. ಅಲ್ಲಾಹನು ಅನುಗ್ರಹದೋರಲಿ. ಅವರಿಗೆ ಬುದ್ಧಿ ಮತ್ತು ತಿಳುವಳಿಕೆ ನೀಡಲಿ.

ಹೊಸ ವರ್ಷ ಆರಂಭವಾಗಿದೆ. ಒಬ್ಬರಿನ್ನೊಬ್ಬರಿಗೆ ಶುಭಾಶಯ ಹಂಚುತ್ತಿದ್ದಾರೆ. ಆದರೆ ಅಂಧಕಾರ ಗಾಢವಾಗುತ್ತಾ ಇದೆ. ಆದುದರಿಂದ ಈ ವರ್ಷ ಅನುಗ್ರಹ ಭರಿತವಾಗಲು ನಾವು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಬೇಕು. ಅಲ್ಲಾಹನು ಈ ವರ್ಷವನ್ನು ಅನುಗ್ರಹಿತವನ್ನಾಗಿ ಮಾಡಲಿ. ಲೋಕದ ಸರಕಾರಗಳು ತಮ್ಮ ಮೇಧಾವಿತ್ವವನ್ನು ಸಾಬೀತುಗೊಳಿಸಲು ಲೋಕವನ್ನು ವಿನಾಶದ ಕಡೆಗೆ ಒಯ್ಯುವುದರಿಂದ ಹಿಂದೆ ಸರಿಯಲಿ. ಅವರು ಲೋಕದಲ್ಲಿ ಶಾಂತಿಯನ್ನೂ ನ್ಯಾಯವನ್ನೂ ಸ್ಥಾಪಿಸುವವರಾಗಲಿ. ತಮ್ಮ ವೈಯಕ್ತಿಕ ಅಹಂಭಾವದಿಂದ ವರ್ತಿಸಿ ತಮ್ಮ ದೇಶದ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಮಾನವರನ್ನು ವಿನಾಶದ ಕಡೆಗೆ ಒಯ್ಯುವವರಾಗದಿರಲಿ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಮುಸ್ಲಿಮ್ ದೇಶಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ದಾಸನಾದ ಮಸೀಹ್ ಮೌಊದ್ ಮತ್ತು ಮಹದೀ ಮೌದರೊಂದಿಗೆ ಜೋಡಿಸಿಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ಹಾರಿಸುವುದರಲ್ಲಿ ಸಹಾಯಕರಾಗಲಿ ಮತ್ತು ತೌಹೀದನ್ನು ಲೋಕದಲ್ಲಿ ಸ್ಥಾಪಿಸುವವರಾಗಲಿ. ಅವರು ಈಗ ಹಝ್ರತ್ ಮಸೀಹ್ ಮೌಊದ್‌ರನ್ನು ವಿರೋಧಿಸುವುದರಲ್ಲಿ ಅತ್ಯಂತ ಮೇಲ್ಮಟ್ಟವನ್ನು ತಲಪಿದ್ದಾರೆ.

ನಮಗೆ ಮೊದಲಿಗಿಂತ ಮಿಗಿಲಾಗಿ ಈ ಕಾಲದ ಇಮಾಮರನ್ನು ನಂಬಿದುದರ ಹಕ್ಕನ್ನು ಈಡೇರಿಸುವವರಾಗುವ ಭಾಗ್ಯವನ್ನು ಅಲ್ಲಾಹನು ನೀಡಲಿ. ನಾವು ಈ ಹೊಣೆಗಾರಿಕೆ ನಿರ್ವಹಿಸುತ್ತಾ ಲೋಕದಲ್ಲಿ ತೌಹೀದಿನ ಪತಾಕೆ ಹಾರಿಸುವವರಾಗೋಣ. ನಾವು ಈ ರೀತಿ ಯೋಚಿಸುವುದಿಲ್ಲವಾದರೆ, ಈ ರೀತಿ ಯೋಚಿಸಿ ಪ್ರಾರ್ಥಿಸುವುದಿಲ್ಲವಾದರೆ, ನಾವು ನಮ್ಮ ಪ್ರಾರ್ಥನೆಗಳೊಂದಿಗೆ ಹೊಸ ವರ್ಷಕ್ಕೆ ಪ್ರವೇಶಿಸುವುದಿಲ್ಲವಾದರೆ ನಾವು ಅರ್ಪಿಸುವ ಹೊಸ ವರ್ಷದ ಶುಭಾಶಯಗಳು ತೋರಿಕೆಯ ಶುಭಾಶಯಗಳಾಗುವುವು. ಅವುಗಳಿಂದ ಯಾವ ಪ್ರಯೋಜನವೂ ದೊರಕದು.

ಆದುದರಿಂದ ಹೊಸ ವರ್ಷದ ಶುಭಾಶಯ ನಮ್ಮ ಮೇಲೆ ಎಂತಹ ಹೊಣೆಗಾರಿಕೆಗಳನ್ನು ಹೊರಿಸುತ್ತವೆಯೋ ಅದರ ಬಗ್ಗೆ ಪ್ರತಿಯೊಬ್ಬ ಅಹ್ಮದಿ, ದೊಡ್ಡವರು, ಚಿಕ್ಕವರು, ಪುರುಷರು, ಮಹಿಳೆಯರು ಪ್ರಜ್ಞೆಯನ್ನು ಹೊಂದಬೇಕು ಮತ್ತು ಹೊಣೆಗಾರಿಕೆ ನಿರ್ವಹಿಸಲು ತಮ್ಮ ಎಲ್ಲಾ ಪ್ರಯತ್ನಗಳನ್ನೂ ಸಾಮರ್ಥ್ಯಗಳನ್ನೂ ಬಳಸಬೇಕು. ನಮ್ಮ ಪ್ರಾರ್ಥನೆಗಳಲ್ಲೂ ಅಲ್ಲಾಹನೊಂದಿಗೆ ನಮ್ಮ ಸಂಬಂಧದಲ್ಲೂ ಒಂದು ವಿಶಿಷ್ಟ ಸ್ಥಿತಿಯನ್ನು ಸೃಷ್ಟಿಸಲು ನಾವು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ಮಾತ್ರ ನಾವು ಈ ವರ್ಷದ ವಾಸ್ತವಿಕ ಅನುಗ್ರಹಗಳನ್ನು ಗಳಿಸುವವರಾಗುವೆವು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ದಯಪಾಲಿಸುವವನಾಗಲಿ – ಆಮೀನ್.

************************

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

- ಓರ್ವ ಬಾಲಕನು ಪ್ರಶ್ನಿಸಿದನು: ಹುಝೂರ್ ನೀವು ಯಾವ ಪ್ರರ್ಥನೆ ಮಾಡಿದ ಕಾರಣ ಅಲ್ಲಾಹನ ಪ್ರೀಯ ದಾಸರಾಗಿದ್ದೀರಿ?

ಹುಝುರ್(ಅ.ಬಿ.ಅ) ಅವರು ಉತ್ತರಿಸಿದರು: ನಾವು ಅಲ್ಲಾಹನನ್ನು ರಾಜಿಯಾಗಿಸುವ ದೃಷ್ಟಿಯಿಂದಲೇ ಪ್ರಾರ್ಥನೆ ಮಾಡುತ್ತಿರಬೇಕು. ನಿಮ್ಮ ವಿಚಾರದಲ್ಲಿ ನಾನು ಖಲೀಫನಾಗಲು ಒರಾರ್ಥನೆ ಎಂದಾದರೆ ಯಾರು ಕೂಡ ಇಂತಹ ಪ್ರಾರ್ಥನೆ ಮಾಡುವುದಿಲ್ಲ. ಅಲ್ಲಾಹನು ನಮಗೆ ಸತ್ಕರ್ಮಿಗಳನ್ನಾಗಿ ಮಾಡಲಿ ಎಂದು ಪ್ರಾರ್ಥ ಮಾಡಲಿ ಎಂದು ಪ್ರಾರ್ಥಿಸಬಹುದಗಿದೆ. ನಮಗೆ ಉತ್ತಮ ಅಹ್ಮದಿಯನ್ನಾಗಿ ಮಾಡಲಿ ಮತ್ತು ಸಜ್ಜನರನ್ನಾಗಿ ಮಾಡಲಿ. ಈ ಪ್ರಾರ್ಥನೆ ಮಾಡುತ್ತಿರಿ.

**30 ಸೆಪ್ಟೆಂಬರ್ 2019 ಸೋಮವಾರ**

**ನ್ಯಾಷ್ನಲ್ ಮಜ್ಲಿಸ್ ಆಮಿಲಾ ಅನ್ಸಾರುಲ್ಲಹ್ ಹಾಲೆಂಡ್‌ರವರ ಹುಝೂರ್ ಅನ್ವರ್(ಅ.ಬಿ.ಅ.) ಅವರೊಡನೆ ಮೀಟಿಂಗ್ (ಸಭೆ).**

ಅನಂತರ ನೆಷ್ನಲ್ ಮಜ್ಲಿಸ್ ಆಮಿಲಾ ಅನ್ಸಾರುಲ್ಲಾಹ್ ಹಾಲೆಂಡ್ ಅವರ ಹುಝೂರ್(ಅ.ಬಿ.ಅ) ಅವರೊಡನೆ ಸಭೆ ಪ್ರಾರಂಭಗೊಂಡಿತು. ಹುಝೂರ್(ಅ.ಬಿ.ಅ.) ದುಆ ಮಾಡಿಸಿದರು.

ಹುಝೂರ್(ಅ.ಬಿ.ಅ.) ಖಾಯಿದ್ ಉಮೂಮಿ ಅವರಿಗೆ ಕೇಳಿದರು. ನಿಮ್ಮಲ್ಲಿ ಎಷ್ಟು ಮಜಾಲಿಸ್‌ಗಳಿವೆ. ಅವರೆಲ್ಲರೂ ತಪ್ಪದೇ ವರದಿಗಳನ್ನು ಕಳುಹಿಸುತ್ತಾರೆಯೇ ಮತ್ತು ಆ ವರದಿಗಳ ಮೇಲೆ ಚರ್ಚಿಸುತ್ತಾರೆಯೇ ಆಗ ಖಾಯಿದ್ ಉಮೂಮಿ ಉತ್ತರಿಸಿದರು. ನಮ್ಮಲ್ಲಿ 14 ಮಜಾಲಿಸ್‌ಗಳಿವೆ. ಎಲ್ಲರೂ ತಪ್ಪದೇ ವರದಿಗಳನ್ನು ಕಳುಹಿಸುತ್ತೇವೆ. Amstrdem ಬೈತುಲ್ ಮಹಮೂದ್‌ನಲ್ಲಿ ನಮ್ಮ ಕಚೇರಿ ತೆರೆದಿದ್ದೇವೆ.

ಖಾಯಿದ್ ಮಾಲ್‌ರಿಗೆ ಹುಝೂರ್(ಅ.ಬಿ.ಅ.) ಬಜೆಟ್ ವಿಷಯವಾಗಿ ಕೇಳಿದರು. ನಿಮ್ಮ ಬಜೆಟ್ ಹೇಗೆ ತಯಾರಾಗುತ್ತದೆ. ಆಗ ಅವರು ಹೇಳಿದರು. ನಾವು ಮಜಾಲಿಸಿನ ಝುವಾರವರಿಗೆ ಫಾರ್ಮ್ ಕಳುಹಿಸಿ ಬಜೆಟ್ ಕ್ರೂಢಿಕರಿಸುತ್ತೇವೆ. ಆ ಮೂಲಕ ನಮ್ಮ ಸಾಮೂಹಿಕ ಬಜೆಟ್ ತಯಾರಾಗುತ್ತದೆ. ಇದೀಗ ಮೂವತ್ತು ಸಾವಿರ ಪೌಂಡ್ ನಮ್ಮ ವಾರ್ಷಿಕ ಬಜೆಟ್ ಇದೆ. ಆಗ ಹುಝೂರೆ ಅನ್ವರ್ ಹೇಳಿದರು. ಪ್ರತಿಯೊಬ್ಬ ನಾಸಿರ್ ತಮ್ಮ ಆದಾಯದನ್ವಯ ಚಂದಾ ನೀಡಿದರೆ ಬಜೆಟ್ ವೃದ್ದಿಯಾಗಬಹುದು.

ಖಾಯಿದ್ ತರ್‌ಬಿಯತ್ ಅವರಿಗೆ ಹುಝೂರ್ ಕೇಳಿದರು. ತರ್‌ಬಿಯತ್ ಕಾರ್ಯಕ್ರಮಗಳೇನಿವೆ. ಎಷ್ಟು ಅನ್ಸಾರ್‌ಗಳು ಜಮಾಅತ್ ಸಹಿತ ನಮಾಝ್ ಮಾಡುವವರಿದ್ದಾರೆ. ತಮ್ಮ ಆಮೀಲ ಸದಸ್ಯರಿಗೆ ಜಮಾಅತ್ ನಮಾಝ್ ಮಾಡುವ ಅಭ್ಯಾಸ ಮಾಡಿಸಿರಿ. ಅವರೆಲ್ಲರಿಗೂ ಫಜರ್ ನಮಾಝ್ ಮತ್ತು ಇಶಾಅ ನಮಾಝ್‌ಗೋಸ್ಕರ ತಮ್ಮ ತಮ್ಮ ಸೆಂಟರ್‌ಗೆ ಬರಬೇಕಾಗಿದೆ. ಕನಿಷ್ಠವಟ್ಟ ಈ ಎರಡು ನವಾಜ್‌ಗಳಾದರೂ ಜವಾಅತ್ ಆಗಿ ನಿರ್ವಹಿಸಬಹುದು. ಹುಝೂರ್(ಅ.ಬಿ.ಅ.) ಹೇಳಿದರು. ನಿಮ್ಮ ಮಜ್ಲಿಸ್ ಆಮೀಲ ಸದಸ್ಯರು ಮತ್ತು ಸ್ಥಳೀಯ ಮಜಾಲಿಸ್ ಆಮೀಲ ಸದಸ್ಯರು ಎಲ್ಲೆಲ್ಲಿ ಸೆಂಟರ್‌ಗಳಿವೆಯೋ ಅಲ್ಲಿ ನಮಾಝ್ ಫಜ್ರ್ ಮತ್ತು ಇಶಾಅ ನಿರ್ವಹಿಸಲು ಹೇಳಿ.

ಉಪ–ಅಧ್ಯಕ್ಷರು ಸಫ್ ದೋಮ್‌ರಿಗೆ ಹುಝೂರ್ ಕೇಳಿದರು. ಎಷ್ಟು ಅನ್ಸಾರ್ ಸೈಕಲ್ ನಡೆಸುತ್ತಾರೆ. ಆಗ ಅವರು ಉತ್ತರಿಸಿದರು. ಕೆಲವು ಅನ್ಸಾರ್ ಸೈಕಲ್ ನಡೆಸುತ್ತಾರೆ ಮತ್ತು ಹಲವು ಅನ್ಸಾರ್‌ಗಳು ತುಂಬ ಸಕ್ರಿಯ (active) ವಾಗಿರುತ್ತಾರೆ.

ಖಾಯಿದ್ ತಜ್‌ನೀದ್ ತಮ್ಮ ವರದಿಯನ್ನು ಸಲ್ಲಿಸುತ್ತಾ ಹೇಳಿದರು. ಇದೀಗ ಅನ್ಸಾರ್‌ಗಳ ತಜ್‌ನೀದ್ 266 ಆಗಿದೆ.

ಖಾಯಿದ್ ಈಸಾರ್ ಹುಝೂರ್(ಅ.ಬಿ.ಅ.) ಕೇಳಿದ ಮಾತಿಗೆ ಉತ್ತರಿಸಿದರು. ಅನ್ಸರ್ ರೋಗಿಗಳ ಕುಶಲೋಪರಿ ವಿಚಾರಿಸಲು ಆಸ್ಪತ್ರೆಗೆ ಹೋಗುತ್ತಾರೆ. ವೃದ್ಧಾಶ್ರಮ (Old age house) ಕ್ಕೆ ಹೋಗುತ್ತಾರೆ. ಅದೇ ರೀತಿ ಹಣ ಒಟ್ಟುಗೂಡಿಸಿ ಆಫ್ರಿಕಾದಲ್ಲಿ ಎರಡು ಭಾವಿಗಳನ್ನು ತೋಡಿಸಿದ್ದೇವೆ. 20 ಸಾವಿರ ಯೂರೋ ಒಟ್ಟುಗೂಡಿಸಿ ನಾವು Humanity First ಗೆ ನೀಡಿದೆವು.

ಖಾಯಿದ್ ತರ್‌ಬಿಯತ್ ನೌಮಬಾಯಿನ್ ಅವರಿಗೆ ಹುಝೂರ್(ಅ.ಬಿ.ಅ.) ಹೇಳಿದರು. ಪ್ರತಿ ವರ್ಷ 50 ಹೊಸ ಬೈಅತ್‌ಗಳನ್ನು ಮಾಡಿಸಿರಿ. 50 ಹೊಸ convert ಮಾಡಿಸಿರಿ.

ವಿವಿಧ ಮಜಾಲಿಸ್‌ಗಳ ಝುಯಿಮ್‌ಗಳೂ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಹುಝೂರ್ ಅನ್ಸರ್ ಝುಯೀಮ್ Amstream center ಅವರಿಗೆ ನಮಾಝ್ ವಿಷಯದಲ್ಲಿ ಕೇಳಿದರು. ನೀವು ನಮಾಝ್ ಮಸ್ಜಿದ್ ಮಹಮೂದ್‌ನಲ್ಲಿ ನಿರ್ವಹಿಸುತ್ತೀರಿ. ಅಲ್ಲಿ ಎಷ್ಟು ಹಾಜರಿ ಇರುತ್ತದೆ. ಆಗ ಅವರು ಹೇಳಿದರು. ಮಸ್ಜಿದ್ ಮಹಮೂದ್ ದೂರವಿದೆ. ಸದಸ್ಯರಲ್ಲಿ ವಾಹನಗಳಿಲ್ಲ. ಬರಲು ತಡವಾಗುತ್ತದೆ. ಸ್ವಲ್ಪ ಆಲಸಿಯೂ ಆಗುತ್ತದೆ. ಆಗ ಹುಝೂರ್ ಹೇಳಿದರು. ಆಲಸಿತನ ಹೆಚ್ಚಾಗುತ್ತದೆ ಮತ್ತು ತಡ ಕಡಿಮೆ ಆಗುತ್ತದೆ.

ಖಾಯಿದ್ ದೈಹಿಕ ಆರೋಗ್ಯ ಅವರಿಗೆ ಹುಝೂರ್ ಕೇಳಿದರು. ಎಷ್ಟು ಜನರು ವ್ಯಾಯಾಮ ಮಾಡುತ್ತಾರೆ. ಸೈಕಲ್ಲು ನಡೆಸುತ್ತಾರೆ. ಅದನ್ನು ಪರಿಶೀಲಿಸಬೇಕು.

ಖಾಯಿದ್ ತಬ್ಲೀಗ್ರ್ ಅವರಿಗೆ ಕೇಳಿದರು. ತಬ್ಲೀಗ್ ವಿಷಯದಲ್ಲಿ ನಿಮ್ಮ ಕಾರ್ಯಕ್ರಮ ಏನು? ಆಗ ಖಾಯಿದ್ ತಬ್ಲೀಗ್ ಹೇಳಿದರು. ನಮ್ಮ ತಬ್ಲೀಗ್‌ನ ಬಜೆಟ್ ಎರಡೂವರೆ ಸಾವಿರ ಯೂರೋವಿದೆ. ಒಂದು ನಾವು ಶಾಂತಿ ಸಭೆ (Peace sympossion) ಏರ್ಪಡಿಸುತ್ತೇವೆ. ಏಕೆಂದರೆ ಅದು ಜಮಾಅತಿನ ಸೆಂಟರ್ ಆಗಿದೆ. ಆದ್ದರಿಂದ ಎರಡು ಸಾವಿರ ಯೂರೋದಲ್ಲಿ ಆಗುತ್ತದೆ. ಅದಲ್ಲದೇ ನಮ್ಮ Charity walk ಕಾರ್ಯಕ್ರಮವು ಇರುತ್ತದೆ. ಈ ಮೂಲಕವು ಪ್ರಚಾರದ ಹಾದಿ ತೆರೆಯುತ್ತದೆ.

ಹುಝೂರ್(ಅ.ಬಿ.ಅ.) ಹೇಳಿದರು. ಅನ್ಸಾರ್ ಮೂಲಕ ಆದ ಬೈಅತ್‌ಗಳು ನೌಮಬಾಯೀನ್ ತರ್‌ಬಿಯತ್ ವಿಭಾಗಕ್ಕೆ ತಿಳಿಸುತ್ತಿರಿ ಮತ್ತು ಅವರ ಸುಪರ್ದಿಗೆ ವಹಿಸುತ್ತಿರಿ? ಹುಝೂರ್(ಅ.ಬಿ.ಅ.) ಹೇಳಿದರು. ಇಲ್ಲಿ ಆಫ್ರಿಕನ್ನರ ಮತ್ತು ಅರಬರ ತಂಡಗಳು ಇರಬಹುದು. ಅದರ ಪರಿಶೀಲನೆ ಮಾಡಿ ಅಲ್ಲಿ ಪ್ರಚಾರಕಾರ್ಯ ಕೈಗೊಳ್ಳಬೇಕು.

ಸಹಾಯಕ ಸದರ್ ಅನ್ಸಾರುಲ್ಲಾಹ್ ಹೇಳಿದರು. ನಾವು ಅನ್ಸಾರುಲ್ಲಾಹ್ ಅತಿಥಿಗೃಹ ಪ್ರಾಜೆಕ್ಟ್‌ನ ಮೇಲೆ ಕಾರ್ಯ ಮಾಡುತ್ತಿದ್ದೆವು.

ಉಪಾಧ್ಯಕ್ಷರು ಅನ್ಸರ್ ಹೇಳಿದರು. ಸದರ್ ಮಜ್ಲೀಸ್ ಅನ್ಸರುಲ್ಲಾಹ್ ನನಗೆ ವಹಿಸಿಕೊಟ್ಟ ಕೆಲಸವು ನಾವು ಮಾಡುತ್ತೇವೆ. ಅವರ ಅನುಪಸ್ಥಿತಿಯಲ್ಲಿ ಪ್ರಚಾರ ಅಧ್ಯಕ್ಷರಾಗಿ ಕರ್ತವ್ಯಗಳನ್ನು ಪಾಲಿಸುತ್ತೇನೆ.

ಖಾಯಿದ್ ಶಿಕ್ಷಣ ತಮ್ಮ ವರದಿ ಸಲ್ಲಿಸುತ್ತಾ ಹೇಳಿದರು. ನಾವು ವರ್ಷದಲ್ಲಿ 5 ಗ್ರಂಥಗಳನ್ನು ಇಟ್ಟುಕೊಳ್ಳುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ರ ಗ್ರಂಥಗಳು ಅಥವಾ ಬ್ರಿಟಿಷ್ ಸರಕಾರ ಮತ್ತು ಜಿಹಾದ್ ಮಸೀಹ್ ಹಿಂದೂಸ್ತಾನ್‌ಮೆ ಆಗಿದೆ. ಹುಝೂರ್(ಅ.ಬಿ.ಅ.) ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಬೃಹತ್ ಗ್ರಂಥಗಳನ್ನು ವಿವಿಧ ಹಂತದಲ್ಲಿ ವಿಭಜಿಸಿ ಇಡಬಹುದು. ಹುಝೂರ್(ಅ.ಬಿ.ಅ.) ಹೇಳಿದರು. "ಹಖೀಖತುಲ್ ವಹಿ" ಯನ್ನು 5 ಭಾಗಗಳಲ್ಲಿ ವಿಭಜಿಸಿ ಈಗ ಅದರ 100 ಪುಟಗಳನ್ನು ಇಟ್ಟುಕೊಂಡರೆ ಅನ್ಸಾರ್‌ಗಳು ತಿಳಿಯಬಹುದು ಸ್ವಪ್ನ ಮತ್ತು ದೇವವಾಣಿ (ಇಲ್ಹಾಮ್)ನ ವಾಸ್ತವಿಕತೆಯೇನೆಂದು.

ಆಮೀಲಾ ಸದಸ್ಯರೊಬ್ಬರು ಹುಝೂರ್(ಅ.ಬಿ.ಅ.) ರವರೊಂದಿಗೆ ಹೇಳಿದರು. ಜನರು ವರದಿ ನೀಡುತ್ತಿಲ್ಲ. ಅವರಿಗೆ ನಮಾಝ್‌ಗಳ ಬಗ್ಗೆ ಹಾಗೂ ಇತರ ಕಾರ್ಯಗಳ ಬಗ್ಗೆ ವರದಿಗಳನ್ನು ಕೇಳಿದರೆ. ಇದು ನಮ್ಮ ಮತ್ತು ನಮ್ಮ ಅಲ್ಲಾಹನ ನಡುವಿನ ವಿಷಯವಾಗಿದೆ. ಆದ್ದರಿಂದ ವರದಿ ಕೊಡುವುದಿಲ್ಲ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ಇಂತಹ ಜನರಿಗೆ ಮನವರಿಕೆ ಮಾಡಿ ಹೇಳಬೇಕಾಗಿದೆ ಹಝ್ರತ್ ರಸೂಲುಲ್ಲಾಹ್(ಸ) ಹೀಗೇಕೆ ಹೇಳಿದರು. ಯಾರು ನಮಾಝ್‌ಗೆ ಬರುವುದಿಲ್ಲವೋ ಅವರ ಮನೆಗಳನ್ನು ಸುಡಬೇಕಾಗಿದೆ. ಇದು ಅಲ್ಲಾಹನ ವಿಷಯವಾಗಿದ್ದರೆ ಅವರು ಹೀಗೆ ಏನೂ ಹೇಳುತ್ತಿರಲಿಲ್ಲ. ಮನೆ ಸುಡುವೆನು ಎಂದು ಏಕೆ ಹೇಳಿದರು? ಆದ್ದರಿಂದ ಇಂತಹ ಜನರಿಗೆ ಮನವರಿಕೆ ಮಾಡಿಕೊಡಬೇಕು ಮತ್ತು ಪರಿಶೀಲಿಸುತ್ತಿರಬೇಕು. ಸಾಮಾನ್ಯ ರೂಪದಲ್ಲಿ ಉಸ್ತುವಾರಿ ವಹಿಸಬೇಕು. ಹೆಚ್ಚು ವಿವರಣೆಗೆ ಹೋಗದೆ ಹೌದು ಇಲ್ಲ ಎಂಬಂತೆ ಫಾರ್ಮ್ ತಯಾರಿಸಬೇಕು.

ಹುಝೂರ್(ಅ.ಬಿ.ಅ.) ಹೇಳಿದರು. ನೀವು ನಿಮ್ಮ ಮಜಾಲಿಸಿನ ಝುಯೀಮ್‌ರವರಿಗೆ ತಿಳಿಸಬೇಕು. ಅವರ ಅನ್ಸಾರ್‌ಗಳು ಕೇಂದ್ರ ಸ್ಥಾನದಲ್ಲಿ ಬಂದು ನಮಾಝ್ ನಿರ್ವಹಿಸಬೇಕು. ಈ ಕಡೆ ಗಮನ ಹರಿಸಬೇಕು.

ಹುಝೂರ್(ಅ.ಬಿ.ಅ.) ಹೇಳಿದರು ಯಾರು ನಮಗೆ ಜಮಾಅತ್ ನೆಲೆಯಲ್ಲಾಗಲಿ, ಅನ್ಸಾರುಲ್ಲಾಹ್ ನೆಲೆಯಲ್ಲಾಗಲಿ ಸಂಪರ್ಕಿಸಲು ಬೇಡ ಎನ್ನುತ್ತಿದ್ದರೆ ಅವರಿಗೆ ಕೇಳಬೇಕು. ನೀವು ಇಲ್ಲಿಗೆ ಬಂದದ್ದು ಜಮಾಅತ್ ನೆಲೆಯಿಂದ ತಾನೇ. ನೀವು ಇಂತಹ ಜನರ ಕುರಿತು ಅವರ ಸ್ಥಳೀಯ ಜಮಾಅತಿನ ಅಧ್ಯಕ್ಷರಿಗೆ ತಿಳಿಸಬೇಕು. ಮತ್ತು ಅಮೀರ್ ಸಾಹೇಬರಿಗೂ ತಿಳಿಸಬೇಕು. ನಮ್ಮಿಂದ ಸಂಪರ್ಕ ಬೇಡ ಎನ್ನುವವರನ್ನು ಕೇಂದ್ರಕ್ಕೆ ಬರೆದು ವರದಿ ಮಾಡಬೇಕು.

ಖಾಯಿದ್ ಶಿಕ್ಷಣ ಹೇಳಿದರು. ನಾವು ಪುಸ್ತಕಗಳನ್ನು ಅಧ್ಯಯನ ಮಾಡಿದ ನಂತರ ಪ್ರಶ್ನೆ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದರೆ ಉತ್ತರ ಬರೆದು ಕಳುಹಿಸುವುದಿಲ್ಲ. ತಜ್‌ನೀದ್ ಪ್ರಕಾರ ವರ್ಷದ ಒಳಗೆ ನಾವು ನಾಲ್ಕು ಪ್ರಶ್ನೆ ಪತ್ರಿಕೆಗಳನ್ನು ಕಳುಹಿಸಿದರೆ ಉತ್ತರದಲ್ಲಿ ಕೇವಲ 70 ಉತ್ತರ ಪತ್ರಿಕೆಗಳು ಬಂದವು. ಆಗ ಹುಝೂರ್ ಹೇಳಿದರು. ಅರ್ಥಾತ್ ಒಂದು ಸಾವಿರದಲ್ಲಿ 70 ಬಂದಿವೆ.

ಹುಝೂರ್(ಅ.ಬಿ.ಅ.) ಹೇಳಿದರು. ತಮ್ಮ ಝುಯೀಮರನ್ನು ಸಕ್ರಿಯ (Active) ಗೊಳಿಸಬೇಕು. ಪ್ರಥಮವಾಗಿ ತಮ್ಮ ನ್ಯಾಷ್ನಲ್ ಆಮೀಲದವರನ್ನು ಹಿಡಿಯಿರಿ. ಮತ್ತೆ ಸ್ಥಳೀಯ ಮಜಾಲಿಸಿನ ಆಮೀಲ ಸದಸ್ಯರು, ಅವರೆಲ್ಲರಿಂದ ಪತ್ರಿಕೆಗಳು ಬರೆಯಿಸಿಕೊಳ್ಳಿ. ಜನರ ಹಿಂದೆ ಬೀಳುವ ಮೊದಲು ಸ್ವಯಂ ಮನೆಯಿಂದ ಪ್ರಾರಂಭಿಸಿ. ಅನ್ಸಾರ್‌ರವರಿಗೆ ಹೇಳಬೇಕು: ಕೇವಲ ನಿಮ್ಮ ಹೆಸರು ಬರೆದು ಕಳುಹಿಸಿಕೊಡಿ. ಪುಸ್ತಕ ಓದಿದ್ದೇವೆ ಎಂದು. ಕೊನೆಯಲ್ಲಿ ಸ್ವಲ್ಪ ಕಾಲದ ನಂತರ ಉತ್ತರ ಬರೆದು ಕಳುಹಿಸುವರು.

ಹುಝೂರ್(ಅ.ಬಿ.ಅ.) ಹೇಳಿದರು. ಅರಬಿ ಭಾಷೆ ಮತ್ತು ಡಚ್ ಭಾಷೆ ಬಲ್ಲವರು ಅದೇ ಭಾಷೆಯಲ್ಲಿ ಉತ್ತರ ನೀಡಬೇಕು ಮತ್ತು ಅವರ ಪಠ್ಯ (ನಿಸಾಬ್)ವು ಅದೇ ಭಾಷೆಯಲ್ಲಿರಬೇಕು.

ಹುಝೂರ್(ಅ.ಬಿ.ಅ.) ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಹೇಳಿದರು. ನಲ್ವತ್ತು ವರ್ಷ ಖಾದಿಮ್ ಆಗಿದ್ದು ಸಕ್ರಿಯೆ (Active) ಆಗಿದ್ದವನು 41 ವರ್ಷ ಆಗಿ ಅನ್ಸರುಲ್ಲಾಹ್‌ಗೆ ಬರುತ್ತಿದ್ದಂತೆ ಏಕೆ ಆಲಸಿಯಾಗುತ್ತಾನೆ ಎಂದು ನನಗೆ ತಿಳಿಯುವುದಿಲ್ಲ. ಆದ್ದರಿಂದ ನೀವು ಪ್ರತಿಯೊಬ್ಬರನ್ನು ಉಪದೇಶಿಸುತ್ತಿರಬೇಕು. ಅಲ್ಲಾಹನ ಆಜ್ಞೆಯೂ ಇದೇ ಆಗಿದೆ. ನೀವು ಉಪದೇಶ ಮಾಡುತ್ತಿರಿ.

ಹುಝೂರ್(ಅ.ಬಿ.ಅ.) ಹೇಳಿದರು ಖಾಯಿದ್ ಮಾಲ್ ಮತ್ತು ಖಾಯಿದ್ ತರ್‌ಬಿಯತ್ ಜೊತೆಯಾಗಿ ಕೆಲಸ ನಿರ್ವಹಿಸಬೇಕು. ಯಾರು ಮಸೀದಿಗೆ ಬರಲು ಆಲಸಿಯಾಗಿದ್ದಾರೋ, ಚಂದ ಕೊಡುವುದಿಲ್ಲವೋ ಅಂತಹವರಿಗೆ ಇಬ್ಬರು ಸೇರಿ ಪ್ರಯತ್ನ ಮಾಡಬೇಕು. ಅವರಿಗೆ ಜಮಾಅತಿನ ಸಮೀಪ ಬರುವಂತೆ ಪ್ರೇರಣೆ ನೀಡಬೇಕು. ಹುಝೂರ್(ಅ.ಬಿ.ಅ.) ಹೇಳಿದರು. ವೈಯುಕ್ತಿಕ ಸಂಪರ್ಕ ಬೆಳೆದಿರಬೇಕು. ಅವರೊಡನೆ ಹೋಗಿ ಮಾತನಾಡಿಸಬೇಕು. ಅವರಿಗೆ ಮನವರಿಕೆಯಾಗಬೇಕು. ನೀವು ಚಂದ ಕೇಳಲು ಅಷ್ಟೇ ಅಲ್ಲ. ವೈಯಕ್ತಿಕವಾಗಿಯೂ ಒಂದು ಸಂಬಂಧದ ನೆಲೆಯಲ್ಲಿ ಗೆಳೆತನ ರೂಪದಲ್ಲಿ ಸಂಪರ್ಕ ಹೊಂದಿದವರಾಗಿದ್ದೀರಿ ಎಂದು. ಹೀಗೆ ಆ ಜನರು ಸಮೀಪ ಬರಬಹುದಾಗಿದೆ. ಹುಝೂರ್(ಅ.ಬಿ.ಅ.) ಹೇಳಿದರು. ಯಾರಾದರು ಚಂದ ಕೊಡುವುದಿಲ್ಲವಾದರೆ ಮತ್ತು ತನ್ನನ್ನು ಅಹ್ಮದಿ ಎಂದು ಹೇಳಿಕೊಳ್ಳುವುದಾದರೆ ನೀವು ಅವರನ್ನು ಅನ್ಸಾರ್ ತಜ್‌ನೀದ್‌ನಿಂದ ತೆಗೆದು ಹಾಕಲು ಬರುವುದಿಲ್ಲ. ಅವರು ತನ್ನನ್ನು ತಾನು ಅಹ್ಮದಿ ಎಂದು ಹೇಳಿಕೊಳ್ಳುವವರೆಗೆ ಅವನು ಚಂದ ಕೊಡಲಿ, ಕೊಡದಿರಲಿ, ತಜ್‌ನೀದ್‌ನಲ್ಲಿ ಸೇರಿಸಿಕೊಂಡಿರಬೇಕು.

ಹುಝೂರ್(ಅ.ಬಿ.ಅ.) ಹೇಳಿದರು. ಅವರಿಗೋಸ್ಕರ ಪ್ರತ್ಯೇಕ plan ಮಾಡಿ. ತರ್‌ಬಿಯತ್ ದೀರ್ಘಾವಧಿಯವರೆಗೆ ತಡೆಯುವ ಸಮಸ್ಯೆಯಾಗಿದೆ. ನಮ್ಮ ಕೆಲಸ ಉಪದೇಶ ಮಾಡುವುದಾಗಿದೆ. ಜಮಾಅತಿನಿಂದ ಹೊರ ಹಾಕುವುದು ಸುಲಭದ ಕೆಲಸವಾಗಿದೆ. ಜಮಾಅತಿನಲ್ಲಿ ತರುವುದು ಕಠಿಣ ಕೆಲಸವಾಗಿದೆ.

ಸದಸ್ಯರೊಬ್ಬರು ಹೇಳಿದರು: Rotterdam ನಲ್ಲಿ ಚರ್ಚ್ ಖರೀದಿ ಮಾಡುವ ಸಮಸ್ಯೆ ಇದೆ. ಆಗ ಹುಝೂರ್(ಅ.ಬಿ.ಅ.) ಹೇಳಿದರು. ನೀವು ಅಮೀರ್ ಸಾಹೇಬರಿಗೆ ತಿಳಿಸಿ ನಾನು ಯಾವಾಗ ನಿಮ್ಮನ್ನು ತಡೆದಿದ್ದೇನೆ.

ಒಂದು ಪ್ರಶ್ನೆಯ ಉತ್ತರ ಕೊಡುವಾಗ ಹುಝೂರ್(ಅ.ಬಿ.ಅ.) ಹೇಳಿದರು. ಯಾರು ಶರಹ ಪ್ರಕಾರ ಚಂದ ಕೊಡುವುದಿಲ್ಲವೋ ಅವರು ಹುದ್ದೆ (ಅಧಿಕಾರ) ಸ್ವೀಕರಿಸಬಾರದು. ಕಡಿಮೆ ಶರಹದಲ್ಲಿ ಚಂದ ಕೊಡಬಯಸುವವರು ಅನುಮತಿ ಪಡೆದುಕೊಳ್ಳಬಹುದು. ನಾನು ಅನುಮತಿ ನೀಡುತ್ತೇನೆ. ಆದರೆ ಮತ್ತೆ ಅವರು ಅಧಿಕಾರ ಸ್ವೀಕರಿಸಲು ಅರ್ಹರಾಗಿರುವುದಿಲ್ಲ. ಚಂದ ತೆರಿಗೆ ಅಲ್ಲ ಎಂಬ ವಿಷಯ ಮನವರಿಕೆ ಮಾಡಿಕೊಡ ಬೇಕು. ಸಾಂಪತ್ತಿಕ ತ್ಯಾಗವು ಅಲ್ಲಾಹನ ಆದೇಶವಾಗಿದೆ. ಅದು ಅಲ್ಲಾಹನ ಸಂತೃಪ್ತಿಗೋಸ್ಕರ ಮಾಡುವುದಾಗಿದೆ.

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly BADAR Qadian
Distt: Gurdaspur (Pb.) INDIA Qadian - 143516
Vol No.1 Thursday, 06 February 2020 Issue No. 04

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)

**(ಬದರ್ ಸಂಚಿಕೆ 02-03ರ ವರದಿಯ ಉಳಿದ ಭಾಗ)**

ಅನಂತರ ಅಝೀಝುಮ್ ಹಸನ್ ಮಹಮೂದ್ ಅವರು ಹಝ್ರತ್ ಅಖ್‌ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕವನ

**ಹಮ್‌ದೋ ಸನಾ ಉಸೀಕೋ ಜೋ ಝಾತ್-ಎ-ಜಾವಿದಾನಿ**

**ಹಮ್‌ಸರ್ ನಹೀ ಹೈ ಉಸ್ಕಾ ಕೋಯಿ ನ ಕೋಯಿ ಸಾನಿ.**

(ಸರ್ವಸ್ವಗಳು ಶಾಶ್ವತನಾದ ಆ ದೇವನಿಗೆ ಸಲ್ಲುತ್ತದೆ. ಅವನ ಸಮನಾದುದು ಯಾವುದೂ ಇಲ್ಲ. ಅವನು ಅದ್ವಿತೀಯನು. ಇದರಿಂದ ಕೆಲ ಆಯ್ದ ಕವನ ಪಂಕ್ತಿಗಳನ್ನು ಮಧುರ ಕಂಠದಿಂದ ಹಾಡಿದರು.

ಅನಂತರ ಅಝೀಝುಂ ನೂರ್ ಅಹ್ಮದ್ ರಝ್ಝೂ ಮತ್ತು ಅಝೀಝುಂ ಹಮ್‌ಝಾ ಇಹ್‌ತೆಸಾಮ್ ಅವರು "ಹಸ್ತಿಬಾರಿ ತಆಲಾ" (ದೇವಾಸ್ತಿತ್ವ) ಶೀರ್ಷಿಕೆಯ ಮೇಲೆ ತಮ್ಮ ಪ್ರಬಂಧ ಪ್ರಸ್ತುತಪಡಿಸುತ್ತ ಪುರಾವೆಗಳನ್ನು ಒದಗಿಸಿದರು. ಅನಂತರ ಹುಝೂರೆ ಅನ್ವರ್(ಅ.ಬಿ.ಅ) ವಾಖಿಫೀನ್ ನೌ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಿದರು.

- ಓರ್ವ ಬಾಲಕನು ಪ್ರಶ್ನಿಸುತ್ತಾನೆ: ಅಲ್ಲಾಹನು ಈ ಲೋಕ ಏಕೆ ಸೃಷ್ಟಿಸಿದ್ದಾನೆ?

ಅದಕ್ಕುತ್ತರವಾಗಿ ಹುಝೂರ್(ಅ.ಬಿ.ಅ) ಹೇಳಿದರು. ಅಲ್ಲಾಹನ ಇಚ್ಛೆ ಇದೆ. ನೀವು ಕಾಗದದ ದೋಣಿ ಮಾಡುವಿರಿ? ನಿಮ್ಮ ಮನಸ್ಸಿನ ಹಾಗೆ ಮಾಡುತ್ತೀರಿ. ಹಾಗೆಯೇ ಅಲ್ಲಾಹನ ಇಚ್ಛೆ ಏನೆಂದರೆ. ಅಲ್ಲಾಹನು ಸರ್ವಲೋಕಗಳನ್ನು ಸೃಷ್ಟಿಸಿದ ಹಾಗೆ ಈ ಲೋಕವನ್ನು ಸೃಷ್ಟಿಸಿದ್ದಾನೆ. ಹಾಗೆ ಇಲ್ಲಿ ಮನುಷ್ಯನಿಗೆ ಜನ್ಮ ನೀಡಿ ಅಲ್ಲಾಹನು ಹೇಳಿದನು. ನಾನು ಈ ಲೋಕವನ್ನು ಸುಮ್ಮನೆ ಸೃಷ್ಟಿಸಲಿಲ್ಲ. ಇದರ ಒಂದು ಉದ್ದೇಶವೂ ಇದೆ ಆಗಿದೆ. ಅವರು ಸಾತ್ವಿಕರಾಗಬೇಕು. ಸಾತ್ವಿಕರಾದವರಿಗೆ ಪ್ರತಿಫಲ ದೊರೆಯುವಂತಾಗಳು ಅಲ್ಲಾಹನು ಲೋಕವನ್ನು ಸೃಷ್ಟಿಸಿದ್ದಾನೆ.

ಅಲ್ಲಾಹನು ಹೇಳುತ್ತಾನೆ ನನ್ನ ಮಾತುಗಳನ್ನು ನಂಬಿರಿ ಮತ್ತು ಉತ್ತಮ ಕಾರ್ಯಗಳನ್ನು ಮಾಡಿರಿ. ಆಗ ನಾನು ನಿಮಗೆ ಅನುಗ್ರಹಿಸುವೆನು. ಹುಝೂರ್(ಅ.ಬಿ.ಅ) ಹೇಳಿದರು. ನೀವು ದೊಡ್ಡವರಾದಾಗ ಲೋಕ ಸೃಷ್ಟಿಯ ಇನ್ನೂ ಹೆಚ್ಚಿನ ಮಾಹಿತಿ ತಿಳಿಯುವಿರಿ.

- ಇನ್ನೋರ್ವಬಾಲಕನು ಪ್ರಶ್ನಿಸಿದನು. ನಾವು ಹಾಲೆಂಡಿನಲ್ಲಿ ಅಹ್ಮದಿಯತ್ತನ್ನು ಹೇಗೆ ಪಸರಿಸಬಹುದು?

ಆಗ ಹುಝೂರ್(ಅ.ಬಿ.ಅ) ಹೇಳಿದರು. ನಿಮ್ಮ ಕರ್ತವ್ಯವೆನೆಂದರೆ ನೀವು ಉತ್ತಮ ಕಾರ್ಯಗಳನ್ನು ಮಾಡಬೇಕು. ನೀವು ಹೇಳಿ ನಾನು ಅಹ್ಮದಿ ಮುಸಲ್ಮಾನನಾಗಿದ್ದೇನೆ. ನಮಾಝಿನ ಸಮಯ ಬಂದಾಗ ಶಿಕ್ಷಕರ ಅನುಮತಿ ಪಡೆದು ಶಾಲೆಯಲ್ಲಿ ನಮಾಝ್ ನಿರ್ವಹಿಸಿ. ಜನರು ಕೇಳವರು. ಏನು ಮಾಡುತ್ತಿದ್ದೀಯ, ಆಗ ಹೇಳು ಆರಾಧನೆ ಮಾಡುತ್ತಿದ್ದೇನೆ. ಹೀಗೆ ಐದು ಹೊತ್ತು ನಮಾಝ್ ಮಾಡುತ್ತೇವೆ. ನಮಗೆ ಹೀಗೆ ಆರಾಧಿಸಲು ಅಲ್ಲಾಹನ ಆಜ್ಞೆ ಇದೆ. ಉತ್ತಮ ಕಾರ್ಯಗಳನ್ನು ಮಾಡಿದರೆ ಜನರು ಆಕರ್ಷಿತರಾಗುವರು. ಒಳ್ಳೆಯ ಮಾತುಗಳನ್ನು ಆಡುತ್ತಿರಿ. ಪುಂಡಾಟಿಕೆ ಮಾಡದಿರಿ. ಕೆಟ್ಟ ಕೆಲಸಗಳನ್ನು ಮಾಡದಿರಿ. ಆಗ ಜನರ ಗಮನ ನಿಮ್ಮತ್ತ ಸೆಳೆಯುವುದು ಇವರು ಯಾವ ತರಹದ ಮಕ್ಕಳು. ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ.

ಹುಝೂರ್ ಅನ್ವರ್(ಅ.ಬಿ.ಅ) ಹೇಳಿದರು. ಓದುವುದರಲ್ಲೂ ಉತ್ತಮರಾದರೆ, ಆಟಗಳಲ್ಲಿಯೂ ಉತ್ತಮರಾದರೆ ಗಮನ ಸೆಳೆಯುವಿರಿ. ಹೀಗೆ ಅಹ್ಮದಿಯತಿನ ಪರಿಚಯವಾದರೆ ಅಲ್ಲಾಹನ ಇಚ್ಛೆ, ಮನ ಪರಿವರ್ತನೆ ಮಾಡುವುದು ಅಲ್ಲಾಹನ ಕೆಲಸವಾಗಿದೆ. ಒಂದು ಸಮಯ ಬರುವುದು ಜನರು ಸ್ವಯಂ ಈ ಕಡೆ ಗಮನ ವಹಿಸುವರು. ಅವರು ತಿಳಿಯುವುದು ಒಬ್ಬ ಬಾಲಕನು ಅಹ್ಮದಿಯತ್ತಿನ ಕುರಿತು ಹೇಳಿದ್ದೆನೆಂದು ಸಜ್ಜನರಿಗೆ ಸ್ವಯಂ ಧರ್ಮದಲ್ಲಿ ಆಸಕ್ತಿ ಉಂಟಾಗುವುದು, ಬಲಾತ್ಕಾರದಿಂದ ಯಾರನ್ನೂ ಅಹ್ಮದಿ ಮಾಡಲು ಸಾಧ್ಯವಿಲ್ಲ. ಅಲ್ಲಾಹನು ಹೇಳಿದ್ದಾನೆ ದೀನಿನಲ್ಲಿ ಬಲವಂತವೂ ಸಲ್ಲದು. ಬದಲಾಗಿ ಒಳ್ಳೆಯ ಕಾರ್ಯಗಳನ್ನು ಮಾಡಿ, ಜನರು ನಿಮ್ಮನ್ನು ಸ್ವಯಂ ಗಮನಿಸುವವರು ಮತ್ತು ಅಧ್ಯಯನ ಮಾಡುವವರು. ಮತ್ತೆ ಅಹ್ಮದಿಯತ್ ಸ್ವೀಕರಿಸುವರು.

- ಓರ್ವ ಖಾದಿಮ್ ಪ್ರಶ್ನೆ ಕೇಳಿದರು. ಹುಝೂರ್ ನಿಮಗೆ ಪುರುಸೊತ್ತು (Free time) ದೊರೆತಾಗ ಏನು ಮಾಡುವಿರಿ? ಅದಕ್ಕೆ ಉತ್ತರ ನೀಡಿದರು. ಪ್ರಪ್ರಥಮವಾಗಿ Free time (ಪುರುಸತ್ತಿಗೋಸ್ಕರ) ಪಡೆಯಲು ನಾನು ಪ್ರಯತ್ನ ಮಾಡುತ್ತೇನೆ.
- ಒಬ್ಬ ಬಾಲಕನು ಪ್ರಶ್ನೆ ಕೇಳಿದನು. ಲೋಕದಲ್ಲಿ ಮೊಟ್ಟ ಮೊದಲು ಯಾವ ವಸ್ತು ಸೃಷ್ಟಿಸಿದ್ದಾನೆ?

ಅದಕ್ಕೆ ಹುಝೂರ್ ಉತ್ತರ ನೀಡಿದರು. ಇದು ಅಲ್ಲಾಹನೇ ಬಲ್ಲನು. ಲೋಕದಲ್ಲಿ ಮೊಟ್ಟ ಮೊದಲು ಯಾವ ವಸ್ತುವನ್ನು ಸೃಷ್ಟಿಸಿದ್ದಾನೆ ಎಂಬುದು. ಅಂತೂ ಅಲ್ಲಾಹನು ಈ ಭೂಮಿಯನ್ನು ಸೃಷ್ಟಿಸಿದಾಗ ಇದು ತುಂಬ ಬಿಸಿಯಾಗಿತ್ತು. ಬೆಂಕಿಯಾಗಿತ್ತು. ಕಲ್ಲಿದ್ದಲ್ಲಾಗಿತ್ತು. ಮತ್ತೆ ನಿಧಾನವಾಗಿ ಅದರ ಮೇಲೆ ಮಳೆ ಸುರಿಯಿತು. ತಂಪಾಯಿತು. ಲೋಕವೆಂದರೆ ಈ ಭೂಮಿ ಎಂದಾದರೆ ಇಲ್ಲಿ ಮೊದಲು ಬೆಂಕಿ ಇತ್ತು. ಮತ್ತೆ ನಿಧಾನವಾಗಿ ತಂಪಾಯಿತು. ಮತ್ತೆ ಇದರಲ್ಲಿ ಜನ ವಾಸಿಸತೊಡಗಿದರು. ಇದಕ್ಕಿಂತ ಮೊದಲು ಎಷ್ಟು ಭೂಮಿಗಳನ್ನು ಸೃಷ್ಟಿಗೊಂಡಿವೆ. ಇದು ಅಲ್ಲಾಹನೆ ಬಲ್ಲವನಾಗಿದ್ದಾನೆ. ಇದು ನಮ್ಮ ಲೋಕವಲ್ಲ ಎಷ್ಟೋ ಅರಬ್ ವರ್ಷ ಪುರಾತನದ್ದಾಗಿದೆ. ಇಷ್ಟು ಪುರಾತನ ಇತಿಹಾಸ ಹೊಮದಿ ಈ ಭೂಮಿಯಲ್ಲಿ ಮೊದಲು ಯಾವ ವಸ್ತು ಸರಷ್ಟಿಯಾಗಿತ್ತು ಎಂದು ಯಾರು ಬಲ್ಲರು. ಇಷ್ಟಿ ಹೇಳಬಹುದು ಈ ನಮ್ಮ ಪ್ರಸಕ್ತ ಭೂಮಿಮೊದಲು ಬೆಂಕಿಯ ಹುಂಡೆ ಆಗಿತ್ತು. ತದನಂತರ ಕ್ರಮೇಣ ತಂಪಾಗುತ್ತಾ ಹೋಯಿತು ಮತ್ತು ಜನಸಂಖ್ಯೆ ಬೆಳೆಯಿತುಮೊದಲು ಬೆಕ್ಟೇರಿಯ ಹುಟ್ಟಿತು ತದನಂತರ ಇತರ ಜೀವಿಗಳು, ಪ್ರಾಣಿಗಳು ಹುಟ್ಟಿದವು. ಹೀಗೆ ಅಲ್ಲಾಹನು evolution ಮೂಲಕ ಈ ಅಸ್ತಿತ್ವಕ್ಕೆ ತಂದನು.

- ಒಬ್ಬ ಬಾಲಕನು ಪ್ರಶ್ನಿಸಿದನು: ವಾಖಿಫೀನೆ ನೌ ಮಕ್ಕಳಿಗೆ ದೊಡ್ಡವರಾಗಿ ಮುರಬ್ಬಿ ಆಗುವುದಿದೆ ಆದರೆ ಅವರು ಮುರಬ್ಬಿ ಆಗಲು ಇಷ್ಟ ಇಲ್ಲವಾದರೆ ಅವರು ಏನು ಮಾಡಬೇಕು?

ಆಗ ಹುಝೂರ್(ಅ.ಬಿ.ಅ) ಅವರು ಹೀಗೆ ಹೇಳಿದರು: ಇಷ್ಟವಿಲ್ಲದಿದ್ದರೂ ನೀವು ಮುರಬ್ಬೀ ಆಗಬೇಕೆಂದು ಯಾರು ಹೇಳಿದ್ದಾರೆ. ಯಾರ ಬಲವಂತವೂ ಇಲ್ಲ ನಿಮ್ಮ ತಂದೆ ತಾಯಿಯವರು ನಿವು ಮುರಬ್ಬಿ ಆಗಿರಿ ಎಂದು ಬಯಸಿದಲ್ಲಿ ನಿವು ಡಾಕ್ಟರ್ ಆಗ ಬೇಕೆಂದು ಬಯಸಿದರೆ ಡಾಕ್ಟರ್ ಆಗಿರಿ. ಇಂಜಿನಿಯರ್ ಆಗಬೇಕೆಂದು ಬಯಸಿದ್ದಲ್ಲಿ ಇಂಜಿನಿಯರ್ ಆಗಿರಿ ವಕೀಲ ಆಗಲು ಬಯಸಿದ್ದಲ್ಲಿ ವಕೀಲರಾಗಿರಿ ಅಥವಾ ಇನ್ನಾವುದೋ ಕೆಲಸ ಮಾಡಬಯಸಿದ್ದಲ್ಲಿ ಅನುಮತಿ ಪಡೆದು ಮಾಡಿರಿ. ಇಂತಹ ಅನೇಕ ವಾಖಿಫೀನೆ ನೌ ಇದ್ದಾರೆ. ಅದೇ ರೀತಿ ಯಲ್ಲರಿಗೂ ಜಾಮಿಯದಲ್ಲಿ ವಿದ್ಯಾಭ್ಯಾಸ ಮಾಡಲು ಸಾಧ್ಯವಿಲ್ಲ. ತಂದೆ ತಾಯಿಯವರ ಆಸೆ ಮುರಬ್ಬೊ ಆಗುವುದ್ದಿರುತ್ತದೆ ಎಂಬುದು ಹೌದು ಆದರೆ ಆದ್ಯತೆ ನೀಡುವುದು ನಿಮ್ ಕೆಲಸವಾಗಿರುತ್ತದೆ. ನೀವು ಬಯಸುವುದಾದರೆ ಅಥವ ಬಳಿ optionsಗಳಿವೆ. ನಿಮಗೆ ಏನಾಗಬೇಕೆಂದು ತಿಳಿಯದಿದ್ದರೆ ನಿಮ್ಮ ಮೊದಲನೇಯ ಆದ್ಯತೆ ಮುರಬ್ಬಿ ಆಗಬೇಕೆಂದಿರಬೇಕು. ಮತ್ತೆ ಡಾಕ್ಟರ್, ಇಂಜಿನಿಯರ್, ಟಿಚರ್ ಅತವಾ ಇನ್ನಿತರ ವಿಭಗಗಳಿವೆ ಅದರಿಂದ ಆರಿಸಿಕೊಲ್ಲಬಹುದು.

ಹುಝೂರ್(ಅ.ಬಿ.ಅ) ಅವರ ವಿಚಾರಿಸಿದ ನಂತರ ಓರ್ವ ಬಾಲಕನು ಹೀಗೆ ಹೇಳಿದನು: ನಾನು ಮುರಬ್ಬಿ ಆಗಬೇಕೆಂದು ಬಯಸುತ್ತೇನೆ ಆಗ ಹುಝೂರ್ ಹೇಳಿದರು ನೀವು ಮುರಬ್ಬಿ ಆಗಬಯಸುವುದಾದರೆ ನಿಮಗೆ ಏನು ಚಿಂತೆ? ಉಳಿದವರು ಏನಾಗಬಯಸುತ್ತಾರೋ ಆಗಬಹುದು, ನನಗೆ ಬರೆದು ತಿಳಿಸಬೇಕು ಅಷ್ಟೆ.

*(ಉಳಿದ ವರದಿ ಪುಟ ಸಂಖೆ 14 ರಲ್ಲಿ ಓದಿರಿ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.